ಸಂಪುಟ: 05 ಸಂಚಿಕೆ: 263 ಪುಟಗಳು: 08 ಭಾನುವಾರ 07 ಡಿಸೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ, ಅವರು ತಮ್ಮ ಸುಖವನ್ನೂ ಹೆಚ್ಚಿಸಿಕೊಳ್ಳುತ್ತಾರೆ

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಾಹಿತ್ಯ ಉತ್ಸವ: ವಿಧ್ವಂಸಕ ಕೃತ್ಯ ಹೋಟೆಲುಗಳಲ್ಲಿ ಔತಣಕೂಟ

• ಉದಯವಾಹಿನಿ, ಬೆಂಗಳೂರು

'ಇಡೀ ಜಗತ್ತು ಈಗ ವಿಧ್ವಂಸಕ ಮನಸ್ಥಿತಿಯಲ್ಲಿ ಇದೆ. ಎಷ್ಟೋ ನಾಯಕರು ಏನನ್ನೋ ಒಂದನ್ನು ಧ್ವಂಸಗೊಳಿಸುವ ಕಾರ್ಯದಲ್ಲಿದ್ದಾರೆ. ಜತೆಗೆ ತಾರಾ ಹೋಟೆಲುಗಳಲ್ಲಿ ಔತಣಕೂಟ ನಡೆಸುತ್ತಾರೆ' ಎಂದು ಸಾಹಿತಿ ಬಾನು ಮುಸ್ತಾಕ್ ಹೇಳಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಆರಂಭವಾದ ಬೆಂಗಳೂರು ಸಾಹಿತ್ಯ ಉತ್ಸವದ 14ನೇ ಆವೃತ್ತಿಯ ಆಶಯ ನುಡಿಗಳ ಜತೆಗೆ, 'ಬಾನು ಬಾನುವಾಗಿ, ಬಾನು ಬಂಡಾಯವಾಗಿ' ಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. 'ಪ್ಯಾಲೆಸ್ಟೀನ್ ಧ್ವಂಸವಾಗುತ್ತಿದೆ. ಇಸ್ರೇಲ್‌ನ ಜೈಲಿನಲ್ಲಿ ಕುಳಿತ ಪ್ಯಾಲೆಸ್ಟೇನಿಯನ್ ಲೇಖಕ ಬಶೀರ್, ತನ್ನ ನಾಡು ಛಿದ್ರವಾಗುತ್ತಿರುವ ಬಗ್ಗೆ ಬರೆದ ಕಾದಂಬರಿಗೆ ಪ್ರತಿಷ್ಠಿತ ಪ್ರಶಸ್ತಿ ಬಂದಿತು. ಆ ಪ್ರಶಸ್ತಿ ಸ್ವೀಕರಿಸುವಾಗ ಬಶೀರ್ ಅವರ ತುಟಿಗಳು ಅದರುತ್ತಿದ್ದವು, ಗಂಟಲು ಉಬ್ಬಿತ್ತು, ಕಣ್ಣಾಲಿಗಳು ತುಂಬಿದ್ದವು. ತನ್ನ ಜಗತ್ತು ಧ್ವಂಸವಾಗುತ್ತಿರುವ ಕುರಿತಾಗಿ ಬಶೀರ್ ತಟಸ್ಥನಾಗೂ ಇರಲಿಲ್ಲ, ಮೌನವಾಗೂ ಇರಲಿಲ್ಲ' ಎಂದರು. ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆ ಮತ್ತು ಕ್ರೌರ್ಯಗಳ ವಿಚಾರದಲ್ಲಿ ತಟಸ್ಥ ಅಥವಾ ಮೌನವಾಗಿ ಬಿಟ್ಟರೆ, ಅವು ಸರಿ ಎಂದು ಆ ಕೃತ್ಯಗಳನ್ನು ದೃಢೀಕರಿಸಿದಂತಾಗುತ್ತದೆ. ಇಲ್ಲದವರ, ತುಳಿತಕ್ಕೆ ಒಳಗಾದವರ, ಮಹಿಳೆಯರ, ನೋವುಂಡವರ ಪರವಾಗಿ ದನಿ ಎತ್ತುವುದು ಮತ್ತು ಅವರ ಪರವಾಗಿ ನಿಲ್ಲುವುದು ಬಂಡಾಯದ ಬದ್ಧತೆ.

## 'ಪೀಠ'ಗಳ ವರದಿ ಪರಿಶೀಲನೆಗೆ ಬರಗೂರು ಸಮಿತಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿನ ಅಧ್ಯಯನ ಪೀಠಗಳ ಸ್ಥಿತಿಗತಿ ಕುರಿತು ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಓ.ಅನಂತರಾಮಯ್ಯ ಅವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಲು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ತ್ರಿಸದಸ್ಯ ಸಮಿತಿ ರಚಿಸಿ, ಸರ್ಕಾರ ಆದೇಶ ಹೊರಡಿಸಿದೆ. ಸಾಹಿತಿಗಳಾದ ನಟರಾಜ ಹುಳಿಯಾರ್, ವಸುಂಧರಾ ಭೂಪತಿ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಲಾಗಿರುವ ವಿವಿಧ ಅಧ್ಯಯನ ಪೀಠಗಳು ನಾಮಕಾವಾಸ್ತೆಗೆ ಎನ್ನುವಂತಾಗಿವೆ. ಅನುದಾನ ಕೊರತೆ, ವಿಶ್ವವಿದ್ಯಾಲಯಗಳ ನಿರಾಸಕ್ತಿ ಮತ್ತಿತರ ಕಾರಣಗಳಿಂದ ಬಹಳಷ್ಟು ಪೀಠಗಳು ನಿಷ್ಕ್ರಿಯಾಗಿವೆ.

ಅವುಗಳ ಚಟುವಟಿಕೆ, ಸ್ಥಿತಿಗತಿ ಕುರಿತು ವರದಿ ನೀಡಲು ಅನಂತರಾಮಯ್ಯ ಅವರನ್ನು ನೇಮಿಸಲಾಗಿತ್ತು.

## ಶಾಲಾ ಅವ್ಯವಹಾರವೂ ಬಯಲಿಗೆ: ಅಶೋಕ

• ಉದಯವಾಹಿನಿ, ಬೆಂಗಳೂರು

'ರಾಜ್ಯ ಸರ್ಕಾರದ ಪ್ರತಿ ಇಲಾಖೆಯಲ್ಲೂ ಅಕ್ರಮ, ಅವ್ಯವಹಾರ ತುಂಬಿ ತುಳುಕುತ್ತಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂಬ ಉಪಲೋಕಾಯುಕ್ತರ ಹೇಳಿಕೆ ಸಾಬೀತು ಮಾಡುವಂತೆ ಸರ್ಕಾರಿ ಶಾಲೆಗಳ ಸಾಮಗ್ರಿ ಖರೀದಿ ಅವ್ಯವಹಾರ ಬಯಲಿಗೆ ಬಂದಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ. 3 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಸರ್ಕಾರಿ ಶಾಲೆಗಳಿಗೆ ಖರೀದಿ ಮಾಡಿರುವ ಲ್ಯಾಪ್ಟಾಪ್, ಎಲ್ಇಡಿ ಪ್ರೊಜೆಕ್ಟರ್, ಯುಪಿಎಸ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮ ಉಲ್ಲಂಘನೆ ಮಾಡಿ, ಅವ್ಯವಹಾರ ನಡೆಸಿರುವ ವಿಷಯ ಲೋಕಾಯುಕ್ತ ದಾಳಿಯಲ್ಲಿ ಬಯಲಾಗಿದೆ. ಸಿದ್ದರಾಮಯ್ಯ ಸಂಪುಟ 'ಆಲಿ ಬಾಬಾ-34 ಕಳ್ಳರ ಕಥೆ'ಯಾಗಿದೆ' ಎಂದು ದೂರಿದ್ದಾರೆ. 'ದಿನಕ್ಕೊಂದು ಹಗರಣ, ದಿನಕ್ಕೊಂದು ಅಕ್ರಮ, ದಿನಕ್ಕೊಂದು ಅವ್ಯವಹಾರ. ದಿನಬೆಳಗಾದರೆ ಇವನ್ನೆಲ್ಲ ನೋಡಿ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕದ ಜನರು ರೋಸಿ ಹೋಗಿದ್ದಾರೆ. ರಾಜೀನಾಮೆ ಕೊಟ್ಟು ರಾಜ್ಯವನ್ನು ಉಳಿಸಲಿ' ಎಂದು ಒತ್ತಾಯಿಸಿದ್ದಾರೆ.

## ಮನುವಾದಿಯಾದ ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

'ಬಿಜೆಪಿ ಜತೆ ಮೈತ್ರಿ ಮಾಡಿಕೊಂಡ ನಂತರ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಮನುವಾದಿಯಾಗಿದ್ದಾರೆ. ಹಾಗಾಗಿ ಭಗವದ್ಗೀತೆಯನ್ನು ಪಠ್ಯಕ್ಕೆ ಸೇರಿಸಬೇಕು ಎಂದು ಸಲಹೆ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು. ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ವಿಧಾನಸೌಧಧ ಮುಂಭಾಗ ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಅವರು ಮಾತನಾಡಿದರು. 'ಭಗವದ್ಗೀತೆಯನ್ನು ಪಠ್ಯಕ್ಕೆ ಸೇರಿಸಬೇಕೆಂದು ಕುಮಾರಸ್ವಾಮಿ ಕೇಂದ್ರ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ. ಇದು ಬಿಜೆಪಿ-ಜೆಡಿಎಸ್ ಮೈತ್ರಿಯ ಫಲ' ಎಂದರು. 'ಹಿಂದೂ ಧರ್ಮದ ಸಾಮಾಜಿಕ ವ್ಯವಸ್ಥೆಗೆ ಅಂಬೇಡ್ಕರ್ ಅವರು ರೋಸಿ ಹೋಗಿದ್ದರು. ಅವರ ಕೊನೆಯ ದಿನಗಳಲ್ಲಿ ಬೌದ್ಧ ಧರ್ಮ ಸ್ವೀಕರಿಸಿದ್ದರು. ಹುಟ್ಟುವಾಗ ಹಿಂದೂವಾಗಿದ್ದೆ, ಸಾಯುವಾಗ ಹಿಂದೂವಾಗಿ ಸಾಯಲಾರೆ. ಹಿಂದೂ ಧರ್ಮದ ಸುಧಾರಣೆಗೆ ಪ್ರಯತ್ನಪಟ್ಟು, ಅದು ಸಾಧ್ಯವಾಗದೆ ಬೌದ್ಧ ಧರ್ಮ ಸ್ವೀಕರಿಸಿದ್ದಾಗಿ ಹೇಳಿದ್ದರು' ಎಂದು ಸಿದ್ದರಾಮಯ್ಯ ಸ್ಮರಿಸಿದರು.

"ಸ್ವಾತಂತ್ರ್ಯ ಬಂದು 79 ವರ್ಷ, ಸಂವಿಧಾನ ಬಂದು 75 ವರ್ಷಗಳಾದರೂ ಸಮಾಜದಲ್ಲಿ ಇನ್ನೂ ಅಸಮಾನತೆ ದೂರವಾಗಿಲ್ಲ. ಕಾರಣ, ಜಾತಿ ವ್ಯವಸ್ಥೆ" ಎಂದು ಸಿಎಂ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು. ಹಾಸನದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರ್ಕಾರದ ಸೇವೆಗಳಾದ 21 ಅಭಿವೃದ್ಧಿಗೊಂಡ ಯೋಜನೆಯ ಉದ್ಘಾಟನೆ, 64 ಯೋಜನೆಗಳ ಶಂಕುಸ್ಥಾಪನಾ ಸಮರ್ಪಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಸಿಎಂ ಅವರು, "ಹಾಸನ ಜಿಲ್ಲಾಡಳಿತ ವತಿಯಿಂದ ಅನೇಕ ಅಭಿವೃದ್ಧಿ ಕಾರ್ಯಕ್ರಮ ಮತ್ತು ಸವಲತ್ತುಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದೇನೆ. ಇದು ನನಗೆ ತುಂಬಾ ಸಂತೋಷ ತಂದಿದೆ. ಹಿಂದೆ ನಾವು ಅಧಿಕಾರಕ್ಕೆ ಬಂದಾಗ, 2013-2018 ಮತ್ತು 2023ರಿಂದ ಇಲ್ಲಿಯ ತನಕ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸಲು ಪ್ರಯತ್ನ ಮಾಡುತ್ತಿದ್ದೇವೆ ಎಂದರು.



**ಜಾತಿ ವ್ಯವಸ್ಥೆ ದೂರವಾಗುವ ತನಕ ಸಮಾಜದಲ್ಲಿ ಅಸಮಾನತೆ ದೂರವಾಗುವುದಿಲ್ಲ**

### ಮಾತು ನಿಧಾನ, ಕಾಯಕ ಪ್ರಧಾನ

# ಸಮಾಜದಲ್ಲಿ ಎಲ್ಲರಿಗೂ ಸಮಾನ

**ಮಾತು ಕೊಡಲ್ಲ ಕೊಟ್ರೆ ತಪ್ಪಲ್ಲ**

• ಉದಯವಾಹಿನಿ, ಹಾಸನ

**ಆರನೇ ಗ್ಯಾರಂಟಿ ಘೋಷಿಸಿದ ಸಿದ್ದರಾಮಯ್ಯ ಸರ್ಕಾರ**

ಕಳೆದ ಚುನಾವಣೆಯಲ್ಲಿ ಚುನಾವಣೆಯಲ್ಲಿ 492 ಭರವಸೆಗಳನ್ನು ನೀಡಿದ್ದೆವು. ಅದರಲ್ಲಿ 142 ಭರವಸೆಗಳನ್ನು ಈಗಾಗಲೇ ರಾಜ್ಯದ ಜನತೆಗೆ ನೀಡಿದ್ದೇವೆ. 298 ಕೋಟಿ ಉದ್ಘಾಟನೆ ಮತ್ತು ಶಂಕುಸ್ಥಾಪನ ಯೋಜನೆಗಳ ಕಾರ್ಯಕ್ರಮ ಇದಾಗಿದೆ. ಕೃಷ್ಣ ಭೈರೇಗೌಡರು ಜಿಲ್ಲಾ ಉಸ್ತುವಾರಿ ಸಚಿವರಾದ ಬಳಿಕ ರೈತರಿಗೆ ಭೂಮಿ ಗ್ಯಾರಂಟಿಯನ್ನು ನೀಡಿದ್ದಾರೆ. ನಾನು ಹಾಸನದ ಪಕ್ಕದ ಜಿಲ್ಲೆಯವನು. ಮೈಸೂರು ರಾಜಕೀಯ ಏನು ಎಂಬುದು ಗೊತ್ತಿದೆ. ಹಾಸನದ ರಾಜಕೀಯವೂ ಗೊತ್ತಿದೆ. ಇಲ್ಲಿನ ಸಮಸ್ಯೆಯೂ ಗೊತ್ತಿದೆ ಎಂದು ತಿಳಿಸಿದರು. ಅಧಿಕಾರಕ್ಕೆ ಬಂದು ನಾವು ಎರಡು ವರ್ಷ ಆರು ತಿಂಗಳು ತುಂಬಿದೆ. ಚುನಾವಣೆಗೂ ಮುನ್ನ ನೀಡಿದ ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕೆ ಬಂದ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ಶಕ್ತಿ ಯೋಜನೆಯನ್ನು ಜಾರಿ ಮಾಡಿದ್ದೆವು. ಇದುವರೆಗೂ 600 ಕೋಟಿಗೂ ಅಧಿಕ ಮಹಿಳೆಯರು ಸಾರಿಗೆ ಬಸ್ಸುಗಳಲ್ಲಿ ಶಕ್ತಿ ಯೋಜನೆಯ ಮೂಲಕ ಪ್ರಯಾಣ ಮಾಡಿದ್ದಾರೆ. ಕೃಷ್ಣ ಭೈರೇಗೌಡರು ಹಲವು ಬೇಡಿಕೆಗಳ ಬಗ್ಗೆ ಮನವಿ ಮಾಡಿದ್ದಾರೆ. ಅದರಲ್ಲಿ, ಹೇಮಾವತಿ ಜಲಾಶಯದ ಕೆಳಗಿರುವ 700 ಎಕರೆ ಜಾಗದಲ್ಲಿ ಉದ್ಯಾನ ನಿರ್ಮಾಣ ಮಾಡಲು ಬೇಡಿಕೆ ಇಟ್ಟಿದ್ದಾರೆ.ಇದನ್ನು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಮುಂದಿನ ದಿನಗಳಲ್ಲಿ ಯೋಜನೆ ರೂಪಿಸಲಾಗುವುದು. ಹಾಸನ ಜಿಲ್ಲೆಯಲ್ಲಿರುವ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಪ್ರವಾಸೋದ್ಯಮದ ರೀತಿಯಲ್ಲಿಯೇ ಗೊರೂರು ಜಲಾಶಯದ ಅಣೆಕಟ್ಟಿನ ಮುಂಭಾಗ ಉದ್ಯಾನ ನಿರ್ಮಾಣದ ಪ್ರಯತ್ನ ಮಾಡುತ್ತದೆ. ನಾವು ಮಾತು ಕೊಡುವುದಿಲ್ಲ. ಮಾತುಕೊಟ್ಟರೇ ಅದರಂತೆಯೇ ನಡೆದುಕೊಳ್ಳುತ್ತೇವೆ. ಈ ರಾಜ್ಯದಲ್ಲಿ ಕೊಟ್ಟ ಮಾತಿನಂತೆ ಯಾವುದಾದರೂ ಪಕ್ಷ ನಡೆದುಕೊಂಡು ಇದೆ ಎಂದರೆ ಅದು ಕಾಂಗ್ರೇಸ್ ಪಕ್ಷ ಮಾತ್ರ ಎಂದು ಹೇಳಿದರು. ಇನ್ನು ಇದು ರಾಜಕೀಯಕ್ಕೋಸ್ಕರ ಹೇಳುತ್ತಿರುವ ಮಾತಲ್ಲ. ರಾಜ್ಯದ ಜನರಿಗೆ ಗೊತ್ತಿರುವ ವಿಚಾರವಾಗಿದೆ ಎಂದು ಟಕ್ಕರ್ ಕೊಟ್ಟರು.

### ಸುರೇಶ್‌ಗೆ ಮಾತಿನಲ್ಲಿ ಚಾಟಿ ಬೀಸಿದ ಸಿದ್ದರಾಮಯ್ಯ

ಈಗಾಗಲೇ, ಪಂಚ ಗ್ಯಾರಂಟಿ ಯೋಜನೆಗೆ ಹಣ ಮೀಸಲಿಟ್ಟಿದ್ದೇವೆ. 'ಹೇ ಸುರೇಶ್, ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಎಲ್ಲಿಯಾದರೂ ಭಾಷಣ ಮಾಡುವಾಗ ಹೇಳಬೇಕು' ಎಂದು ಬಿಜೆಪಿಯ ಬೇಲೂರು ಶಾಸಕ ಹೆಚ್.ಕೆ. ಸುರೇಶ್‌ಗೆ ಮಾತಿನಲ್ಲಿ ಚಾಟಿ ಬೀಸಿದ ಸಿದ್ದರಾಮಯ್ಯ, ಪಂಚ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರುವಾಗ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದರು. ನಾನು ಹೇಳುವುದಿಷ್ಟೆ. ಟೀಕೆಗಳು ಸಾಯುತ್ತವೆ ನಾವು ಮಾಡಿದ ಕೆಲಸಗಳು ಮಾತ್ರ ಸಮಾಜದಲ್ಲಿ ಗಟ್ಟಿಯಾಗಿ ನಿಲ್ಲುತ್ತವೆ ಎಂದರು.

1. ಕೊಟ್ಟ ಮಾತಿನಂತೆ ನಮ್ಮ ಸರ್ಕಾರ 142 ಭರವಸೆಗಳನ್ನು ಈಡೇರಿಸಿದೆ: ಡಿಸಿಎಂ ಡಿ.ಕೆ. ಶಿವಕುಮಾರ್
2. ಮಾತು ನಿಧಾನವಾಗಿರಬೇಕು, ಕೆಲಸ ಪ್ರಧಾನವಾಗಿರಬೇಕು, ಜನರ ಜೇಬಿಗೆ 1 ಲಕ್ಷ ಕೋಟಿ ಗ್ಯಾರಂಟಿ
3. ಕೃಷ್ಣ ಭೈರೇಗೌಡರ ನೇತೃತ್ವದಲ್ಲಿ ಆರನೇ ಗ್ಯಾರಂಟಿ 'ಭೂಮಿ ಗ್ಯಾರಂಟಿ' ಅನುಷ್ಠಾನಕ್ಕೆ ನಿಮ್ಮ ಸಂಸದ ನಿಮ್ಮ ಗೌರವ ಉಳಿಸಿ, ಸ್ವಾಭಿಮಾನದ ಬದುಕಿಗೆ ಶಕ್ತಿ ತುಂಬುತ್ತಾರೆ ಎಂದ ಡಿಸಿಎಂ

### ಹಾಸನ ಜಿಲ್ಲೆಗೆ ವಿಶೇಷ ಒತ್ತು

ನಮ್ಮ ಸರ್ಕಾರ ಸಂವಿಧಾನ, ಕಾರ್ಮಿಕರ, ಬಡವರ, ಪರವಾಗಿ ಕೆಲಸ ಮಾಡುತ್ತಿದೆ ಮತ್ತು ಅದರ ಪರವಾಗಿಯೇ ಇರುತ್ತದೆ. ಹೇ ಬಾಲಕೃಷ್ಣ ನಿನ್ನ ಕ್ಷೇತ್ರಕ್ಕೂ ಅನುದಾನ ಕೊಟ್ಟಿದ್ದೇನೆ. ದಿಡಗ ಗ್ರಾಮ ಪಂಚಾಯಿತಿಯ ಸುತ್ತಮುತ್ತಲಿನ ಕೆರೆ ತುಂಬಿಸುವ ಯೋಜನೆಗೆ ಅನುದಾನ ನೀಡಿದ್ದೇನೆ. ನೀನು ಶಾಸಕನಾಗಿರಬಹುದು. ಆದರೇ, ಒತ್ತಾಯ ಮಾಡಿದ್ದು ನೀನಲ್ಲ ಕಣಪ್ಪ ನಮ್ಮ ಪಕ್ಷದ ಮಾಜಿ ಎಂಎಲ್ಸಿ ಎಂ.ಎ. ಗೋಪಾಲಸ್ವಾಮಿ ಎನ್ನುವ ಮೂಲಕ ಬಾಲಕೃಷ್ಣರನ್ನು ವೇದಿಕೆಯಲ್ಲಿಯೇ ಹಾಸ್ಯ ಚಟಾಕಿ ಮಾಡಿ, ಹಾಸನ ಜಿಲ್ಲೆಗೆ ವಿಶೇಷ ಒತ್ತು ನೀಡುತ್ತೇವೆ ಎನ್ನುವ ಭರವಸೆ ನೀಡಿದರು.

ಇವತ್ತು ಅಂಬೇಡ್ಕರ್ ಪರಿ ನಿರ್ಮಾಣ ದಿನ ಇವತ್ತು ನಾನು ಮಲ್ಲಿಕಾರ್ಜುನ ಖರ್ಗೆ, ಹೆಚ್‌ಸಿ ಮಹದೇವಪ್ಪ ಮತ್ತು ವಿವಿಧ ಕಾಂಗ್ರೇಸ್ ಸಚಿವರುಗಳು ಅವರಿಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದ್ದೇವೆ. ದೇಶದ ನಾಗರಿಕರಿಗೆ ಸಮಾನವಾಗಿ, ಆರ್ಥಿಕವಾಗಿ, ಸಮಾನತೆ ಕೊಟ್ಟಾಗ ಮಾತ್ರ ಸ್ವಾತಂತ್ರ್ಯ ಬಂದಿದ್ದಕ್ಕೂ ಸಾರ್ಥಕ. ಸಮಾಜದಲ್ಲಿ ಸಮಾನತೆ ಬರಬೇಕು ಅಸಮಾನತೆ ಹೋಗಬೇಕು. ಸ್ವತಂತ್ರ ಬಂದು 79 ವರ್ಷಗಳು ಸಂವಿಧಾನ ಬಂದು 75 ವರ್ಷಗಳಾದರೂ ಸಮಾಜದಲ್ಲಿ ಇನ್ನೂ ಅಸಮಾನತೆ ಹೋಗಿಲ್ಲ. ಜಾತಿ ವ್ಯವಸ್ಥೆಗಳು ಹೋಗದ ಕಾರಣ ಸಮಾಜದ ಅಸಮಾನತೆ ದೂರವಾಗುತ್ತಿಲ್ಲ. ಶಕ್ತಿ ಯೋಜನೆ ಕೊಡಬಾರದಾಗಿತ್ತು ಎಂದು ಹೇಳುವವರಿಗೆ ಯೋಜನೆಯ ಫಲಾನುಭವಿಗಳೇ ಉತ್ತರ ಕೊಡಬೇಕಿದೆ ಎಂದು ತಿರುಗೇಟು ನೀಡಿದರು.



### ಸಿದ್ದರಾಮಯ್ಯಗೆ ತಿರುಗೇಟು ಕೊಟ್ಟ ಎಚ್‌ಡಿಕೆ

ಭಗವದ್ಗೀತೆಯನ್ನ ಶಾಲ ಪಠ್ಯದಲ್ಲಿ ಸೇರಿಸುವಂತೆ ಕೋರಿ ಕೇಂದ್ರದ ಶಿಕ್ಷಣ ಸಚಿವರಿಗೆ ಪತ್ರ ಬರೆದ ತಮ್ಮನ್ನು ಮನುವಾದಿ ಎಂದು ಕರೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ತಿರುಗೇಟು ನೀಡಿದ್ದಾರೆ. ಅಲ್ಲದೆ ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ ಹಾಗಾದರೆ, ಸಿದ್ದರಾಮಯ್ಯ ಅವರು ಮಕ್ಕಳಿಗೆ ಏನು ಬೋಧಿಸಲು ಹೇಳುತ್ತಾರೆ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ. ಮಂಡ್ಯದಲ್ಲಿ ಈ ಬಗ್ಗೆ ಮಾಧ್ಯಮಗಳು ಗಮನ ಸೆಳೆದಾಗ ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವಂತೆ ಹೇಳಿದ್ದೇನೆ. ಆ ಬಗ್ಗೆ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರವನ್ನೂ ಬರೆದಿದ್ದೇನೆ. ನಾನೇನು ಮತಾಂತರ ಮಾಡಲಿಕ್ಕೆ ಈ ಹೇಳಿಕೆ ನೀಡಿಲ್ಲ. ಇಂದಿನ ಮಕ್ಕಳ ಬದುಕು, ಇವತ್ತಿನ ಸಮಾಜವನ್ನು ಸಿದ್ದರಾಮಯ್ಯ ನೇತೃತ್ವದಲ್ಲಿ ಯಾವ ರೀತಿ ಬೆಳೆಸುತ್ತಿದ್ದಾರೆ. ಇದೆಲ್ಲವನ್ನು ಗಮನಿಸಿ ಹೇಳಿದ್ದೇನೆ ಎಂದು ಟಾಂಗ್ ನೀಡಿದರು.

# ಆದಿಚುಂಚನಗಿರಿ ನಿರ್ಮಲಾನಂದ ಶ್ರೀಗಳ ಕ್ಷಮೆ ಕೇಳಿದ ಎಚ್‌ಡಿಕೆ

### ರಾಜಕೀಯ ಬೆಳವಣಿಗೆ ತಮ್ಮ ಹೇಳಿಕೆ ಬಗ್ಗೆ ಸ್ಪಷ್ಟನೆ ಕೊಟ್ಟ ಕೇಂದ್ರ ಸಚಿವ

• ಉದಯವಾಹಿನಿ, ಮಂಡ್ಯ

ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಾನು ನೀಡಿದ್ದ ಹೇಳಿಕೆಯಿಂದ ಶ್ರೀ ನಿರ್ಮಲಾನಂದ ಶ್ರೀಗಳಿಗೆ ನೋವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಮಂಡ್ಯದ ವಿಸಿ ಫಾರಂನಲ್ಲಿ ನಡೆಯುತ್ತರುವ ಕೃಷಿ ಮೇಳದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವರು. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಷ್ಟು ವಿದ್ಯಾವಂತರಾದ ಮತ್ತೊಬ್ಬ ಸ್ವಾಮೀಜಿಗಳು ಇಲ್ಲ. ಅವರಿಗೆ ಅಗೌರವ ಆಗಬಾರದು ಎಂಬ ದೃಷ್ಟಿಯಿಂದ ಶ್ರೀಗಳನ್ನು ಬಳಕೆ ಮಾಡಿಕೊಳ್ಳಬಾರದು ಎಂದಿದ್ದೆ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು ಸಮಾಜದ ಗೌರವ ಉಳಿಸಲಿಕ್ಕೆ ಬೀದಿಗೆ ಬಂದವರು.

ಪುತ್ತೂರು ಮೆಡಿಕಲ್ ಕಾಲೇಜು ನಿರ್ಮಾಣದಲ್ಲಿ ಮಹತ್ವದ ಪ್ರಗತಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ತಲುಪಿದ ಕಡತ ಅವರಿಗೆ ದೇವೇಗೌಡರು ಸಿಎಂ ಆಗಲಿ ಎನ್ನುವುದು ಮನಸ್ಸಿನಲ್ಲಿತ್ತು. ನನ್ನನ್ನು ಕಂಡರೂ ಅವರಿಗೆ ತುಂಬಾ ವಾತ್ಸಲ್ಯವಿತ್ತು.

**ಹಂತ ಹಂತವಾಗಿ ಶಾಲೆಯ ಅಭಿವೃದ್ಧಿ**

ನನ್ನಿಂದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳಿಗೆ ಅಪಚಾರವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದರು.

ಪ್ರಸಕ್ತ ರಾಜಕೀಯ ವಿದ್ಯಮಾನಗಳು ಏನು ನಡೆಯುತ್ತಿವೆ ಎಂದು ಎಲ್ಲರಿಗೂ ಗೊತ್ತು. ಈ ಬಗ್ಗೆ ನಮ್ಮ ನಿರ್ಮಲಾನಂದನಾಥ ಶ್ರೀಗಳು ಮಾತನಾಡಿದ್ದಾರೆ. ಅವರು ಮಾತಾಡಿದ್ದಕ್ಕೆ ಇನ್ಯಾರೋ ಮಾತಾಡಿದ್ದಾರೆ. ನಮ್ಮ ಸ್ವಾಮೀಜಿಯಷ್ಟು ಓದಿಕೊಂಡವರು, ಶಿಕ್ಷಣ ಪಡೆದವರು ಮತ್ತೊಬ್ಬರು ಇಲ್ಲ. ಸ್ವಾಮೀಜಿಗಳು ಅವರದ್ದೆ ಆದ ಕಲ್ಪನೆಗಳನ್ನು ಹೊಂದಿರುತ್ತಾರೆ. ಇಂತಹ ಸ್ವಾಮೀಜಿಗಳು ಇಲ್ಲಿಗೆ ಬರಬಾರದು. ಅವರಿಗೆ ಅಗೌರವ ಆಗಬಾರದು ಎಂಬ ದೃಷ್ಟಿಯಿಂದ ಬಳಕೆ ಮಾಡಿಕೊಳ್ಳಬಾರದು ಎಂದು ಹೇಳಿದ್ದೆ. ನಮ್ಮ ಹಾಗೂ ದೊಡ್ಡ ಸ್ವಾಮೀಜಿಗಳ ಸಂಬಂಧ ಹಲವರಿಗೆ ಗೊತ್ತಿಲ್ಲ ಎಂದು ಅವರು ಹೇಳಿದರು.



### ಮೈಶುಗರ್ ಶಾಲೆ ಶಿಕ್ಷಕರಿಗೆ ನೆರವಾದ ಎಚ್.ಡಿ. ಕುಮಾರಸ್ವಾಮಿ

ಸುಮಾರು ಹದಿನೈದು ತಿಂಗಳಿಂದ ವೇತನ ಸಿಗದೇ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಇಲ್ಲಿನ ಮೈಶುಗರ್ ಶಾಲೆಯ ಶಿಕ್ಷಕರ ಬಾಕಿ ವೇತನಕ್ಕಾಗಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು, ತಮ್ಮ ಸಂಸದರ ವೇತನವನ್ನೇ ನೀಡಿದ್ದಾರೆ. ಈ ಮೊದಲು ನೀಡಿದ್ದ ಭರವಸೆಯಂತೆ ಶನಿವಾರ ಬೆಳಗ್ಗೆ ಶಾಲೆಗೆ ಭೇಟಿ ನೀಡಿದ ಸಚಿವರು, 19,94,200 ಮೊತ್ತದ ಚೆಕ್ ಅನ್ನು ಶಾಲೆಯ ಆಡಳಿತ ಮಂಡಳಿಗೆ ಹಸ್ತಾಂತರ ಮಾಡಿದರು.

ವೇತನವಿಲ್ಲದೆ ಕೆಲಸ ಮಾಡುವುದು ಕಷ್ಟ. ನಿಮ್ಮ ನೋವು ನನಗೆ ಅರ್ಥವಾಗಿದೆ. ಹೀಗಾಗಿ ನಿಮ್ಮ ಕಷ್ಟಕ್ಕೆ ಸ್ಪಂದಿಸುತ್ತೇನೆ ಎಂದು ನಾನು ಮಾತು ಕೊಟ್ಟಿದ್ದೆ. ನಿಮಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇನೆ ಎಂದು ತಿಳಿಸಿದರು.

ಇದು ಐತಿಹಾಸಿಕ ಶಾಲೆ. ಮಂಡ್ಯದ ಇತಿಹಾಸದಲ್ಲಿ ಈ ಶಾಲೆಗೂ ಒಂದು ಸ್ಥಾನವಿದೆ. ಹೀಗಾಗಿ ಶಾಲೆ ಸಂಕಷ್ಟಕ್ಕೆ ಸಿಲುವುದು ನನಗೆ ಇಷ್ಟವಿಲ್ಲ. ಈ ಶಾಲೆಯನ್ನು ಉಳಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೂ ಮನವಿ ಮಾಡುತ್ತೇನೆ. ಪಿಯುಸಿವರೆಗೆ ಈ ಶಾಲೆಯಲ್ಲಿ ಶಿಕ್ಷಣ ದೊರೆಯಲಿ. ನಾನು ಕೂಡ ಶಾಲೆಯ ಉಳಿವಿಗೆ ಕೈ ಜೋಡಿಸುತ್ತೇನೆ. ಆದಿಚುಂಚನಗಿರಿ ಶ್ರೀಗಳೊಂದಿಗೂ ಈ ಬಗ್ಗೆ ಮಾತಾಡಿದ್ದೇನೆ. ಒಂದೇ ರಾತ್ರಿಯಲ್ಲಿ ಅಭಿವೃದ್ಧಿ ಮಾಡುತ್ತೇನೆ ಎಂದು ನಾನು ಹೇಳಲ್ಲ. ಹಂತ ಹಂತವಾಗಿ ಶಾಲೆಯ ಅಭಿವೃದ್ಧಿ ಮಾಡೋಣ. ಈ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲಿ ಎಂದು ಕೇಳುತ್ತೇನೆ. ಮಂಡ್ಯದಲ್ಲಿ ಮೈಶುಗರ್ ಶಾಲೆಯೇ ನಂಬರ್ ಓನ್ ಶಾಲೆ ಆಗಿರಬೇಕು ಎಂಬುದು ನನ್ನ ಆಶಯವಾಗಿದೆ ಎಂದು ಕೇಂದ್ರ ಸಚಿವರು ಹೇಳಿದರು.

# ಬೆಳಗಾವಿ ಅಧಿವೇಶನ ನೆಪಮಾತ್ರವಾಗದಿರಲಿ: ಸದ್ಬಳಕೆಯಾಗಲಿ ಜನರ ತೆರಿಗೆ ಹಣ

**• ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನಕ್ಕೆ ಸಿದ್ಧತೆ • ಅಧಿವೇಶಕ್ಕೆ ಎಷ್ಟು ಖರ್ಚು ಆಗಲಿದೆ • ಅಧಿವೇಶನಕ್ಕೆ ಕಾಂಗ್ರೇಸ್, ಬಿಜೆಪಿ ಸಿದ್ಧತೆ ಏನು?**

• ಉದಯವಾಹಿನಿ, ಬೆಂಗಳೂರು

ಸೋಮವಾರದಿಂದ ಬೆಳಗಾವಿ ಅಧಿವೇಶನ ಆರಂಭಗೊಳ್ಳಲಿದೆ. ಒಟ್ಟು 10 ದಿನಗಳ ಕಾಲ ಅಧಿವೇಶನ ನಡೆಯಲಿದೆ. ಪ್ರತಿವರ್ಷ ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ನಡೆಯುತ್ತದೆ. ಆದರೆ ಇದರಿಂದ ದೊಡ್ಡ ಮಟ್ಟದಲ್ಲಿ ಏನೂ ಪ್ರಯೋಜನ ಆಗುವುದಿಲ್ಲ ಎಂಬ ಅಭಿಪ್ರಾಯ ಇದೆ. ಆಡಳಿತ ವಿಪಕ್ಷಗಳು ಗಂಭೀರ ಸ್ವರೂಪದ ಚರ್ಚೆ ನಡೆಸುವ ಬದಲಾಗಿ ಕಾಲಹರಣದಲ್ಲಿ ತೊಡಗಿಸಿಕೊಳ್ಳುತ್ತಿವೆ ಎಂಬ ಆರೋಪ ಇದೆ. ಬೆಳಗಾವಿಯ ಸುವರ್ಣಸೌಧದಲ್ಲಿ 14ನೇ ಚಳಿಗಾಲ ಅಧಿವೇಶನ ಇದಾಗಿದೆ. ಈ ಬಾರಿ ಸುಮಾರು 21 ಕೋಟಿ ವೆಚ್ಚ ಅಂದಾಜು ಬೇಕಾಗಿದೆ. ಕಳೆದ ವರ್ಷ 15.30 ಕೋಟಿ ರೂಪಾಯಿ ವೆಚ್ಚ ಆಗಿತ್ತು. ಆದರೆ ಈ ಬಾರಿ ಸುವರ್ಣಸೌಧಕ್ಕೆ ಹೆಚ್ಚುವರಿ ರಕ್ಷಣೆ ಮತ್ತು ಅಧಿವೇಶನಕ್ಕೆ ಆಗಮಿಸುವವರಿಗೆ ಉತ್ತಮ ಆಹಾರ ಪೂರೈಕೆ ಮಾಡಲು ಹೆಚ್ಚುವರಿ ಖರ್ಚು ಮಾಡಲಾಗುತ್ತಿದೆ. ಇಷ್ಟೆಲ್ಲಾ ಖರ್ಚು ವೆಚ್ಚ ಮಾಡಿದರೂ ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ ಎಂಬುವುದು ಪ್ರತಿವರ್ಷ ಕೇಳಿ ಬರುತ್ತಿರುವ ಆರೋಪವಾಗಿದೆ. ನೆಪ ಮಾತ್ರಕ್ಕೆ ಎಂಬಂತೆ ಕೊನೆಯ 2 ದಿನಗಳ ಕಾಲ ಉತ್ತರ ಕರ್ನಾಟಕದ ಭಾಗದ ಚರ್ಚೆಗೆ ಸಮಯ ನೀಡಲಾಗುತ್ತದೆ. ಉಳಿದಂತೆ ಹೆಚ್ಚಿನ ಅವಧಿಯಲ್ಲಿ ಇತರ ಚರ್ಚೆಗಳು, ಗಲಾಟೆ, ಗದ್ದಲವೇ ಗಮನ ಸೆಳೆಯುತ್ತದೆ.

ಹೀಗಾಗಿ ಈ ಬಾರಿ ಅಧಿವೇಶನ ಇದೇ ರೀತಿಯಲ್ಲಿ ಗಲಭೆ ಗದ್ದಲದಲ್ಲಿ ಮುಕ್ತಾಯವಾಗಬಾರದು ಎಂಬ ಅಭಿಪ್ರಾಯ ಬಹುತೇಕ ಜನರಲ್ಲಿದೆ. ಅಧಿವೇಶನದಲ್ಲಿ ಚರ್ಚೆ ನಡೆಸಲು ಸಾಕಷ್ಟು ವಿಚಾರಗಳು ಇವೆ. ಬೆಳಗಾವಿ ಭಾಗದಲ್ಲೇ ಕಬ್ಬು ಬೆಳೆಗಾರರು ಬೃಹತ್ ಹೋರಾಟ ಹಮ್ಮಿಕೊಂಡಿದ್ದರು. ಬೆಲೆ ಏರಿಕೆಗೆ ಬೇಡಿಕೆ ಇಟ್ಟಿದ್ದರು. ಕೊನೆಗೂ ಸರ್ಕಾರ ಹೋರಾಟಕ್ಕೆ ಮಣಿದು ಬೇಡಿಕೆ ಈಡೇರಿಸಿತ್ತು. ಇದೀಗ ಅಧಿವೇಶನದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ , ಮೆಕ್ಕೇಜೋಳ ಬೆಳೆಗಾರರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ವಿಪಕ್ಷಗಳು ಮುಂದಾಗಿವೆ. ಬಿಜೆಪಿ ಮತ್ತು ಜೆಡಿಎಸ್ ಇದಕ್ಕೆ ತಯಾರಿ ಮಾಡಿಕೊಂಡಿದೆ. ಆದರೆ ಇದು ಯಾವ ಸ್ವರೂಪದಲ್ಲಿ ಇರಲಿದೆ ಎಂಬುವುದು ನೋಡಬೇಕಾಗಿದೆ.

ಇದು ಒಬ್ಬ ಶಾಸಕರ ಅಭಿಪ್ರಾಯ ಆದರೂ ಅವರ ಹೆಜ್ಜೆ ಸಾಕಷ್ಟು ಮಹತ್ವದ್ದಾಗಿದೆ. ಇದನ್ನು ಸ್ಪೀಕರ್ ಯುಟಿ ಖಾದರ್ ಅವರು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಅನಗತ್ಯ ವಿಚಾರಗಳ ಚರ್ಚೆಗೆ ಅವಕಾಶ ನೀಡದೆ, ಸಮಯ ವ್ಯರ್ಥ ಮಾಡದೆ ಜನರಿಗೆ ಅನುಕೂಲವಾಗುವ ಚರ್ಚೆಗೆ ಅವಕಾಶ ಕಲ್ಪಿಸಬೇಕಾಗಿದೆ.



### ಭತ್ಯೆ, ಉಚಿತ ಊಟ ಬೇಡ

ಸ್ಪೀಕರ್ ಯುಟಿ ಖಾದರ್ ಅಧಿಕಾರ ಸ್ವೀಕಾರ ಮಾಡಿದ ಬಳಿಕ ಶಾಸಕರಿಗೆ ಹಲವು ಸೌಕರ್ಯ ಕಲ್ಪಿಸಿದ್ದಾರೆ. ವಿಧಾನಸಭೆ ಅಧಿವೇಶನಕ್ಕೆ ಆಗಮಿಸುವ ಶಾಸಕರಿಗೆ ಉಚಿತ ಊಟ, ನಿದ್ದೆ ಮಾಡಲು ರಿಕ್ಲೈನರ್ ಕುರ್ಚಿ ಹಾಗೂ ಮಸಾಜ್ ಕುರ್ಚಿ ವ್ಯವಸ್ಥೆ ಮಾಡಲಾಗಿದೆ. ಸಮಯಾವಕಾಶ ಉಳಿಸಿ ಹೆಚ್ಚಿನ ಚರ್ಚೆ ಆಗಲಿ ಎಂಬ ಉದ್ದೇಶ ಎಂಬುವುದು ಸ್ಪೀಕರ್ ಸಮರ್ಥನೆಯಾಗಿದೆ. ಆದರೆ ಈ ಬಾರಿ ಜೆಡಿಎಸ್ ಶಾಸಕ ಶರಣಗೌಡ ಕಂದಕೂರುಅವರು ನನಗೆ ಉಚಿತ ಊಟ, ಭತ್ಯೆ ಏನೂ ಬೇಡ ಎಂದಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಆಗುತ್ತಿಲ್ಲ, ನಮಗೆ ಮಾತನಾಡಲು ಅವಕಾಶ ಸಿಗುತ್ತಿಲ್ಲ. ಹಾಗಾಗಿ ಯಾವುದೇ ಸೌಲಭ್ಯ ಪಡೆದುಕೊಳ್ಳುವುದಿಲ್ಲ ಎಂದಿದ್ದಾರೆ.

| | | | |
|---|---|---|---|
| ಈ ದಿನದ ದರ | ಪೆಟ್ರೋಲ್: 103.49 ₹/L | ಡೀಸೆಲ್ : 91.64 ₹/L | ಬಂಗಾರ: ₹13,015/Gram24ct ₹11,930/Gram22ct | ಬೆಳ್ಳಿ: ₹190.00/Gram |



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಸರ್ವ ಧರ್ಮ ಸಭೆ

ಬೇರೆ ಬೇರೆ ಪ್ರದೇಶದಲ್ಲಿ ಹುಟ್ಟುವ ವಿಭಿನ್ನ ನದಿಗಳು ಹರಿದು ಅಂತಿಮವಾಗಿ ಸಮುದ್ರ ಸೇರುವಂತೆ ವಿವಿಧ ಆಚಾರ ವಿಚಾರ ಸಂಸ್ಕೃತಿಗಳನ್ನೊಳಗೊಂಡ ಎಲ್ಲ ಧರ್ಮಗಳ ಅಂತಿಮ ಗುರಿ ಒಂದೇ. ಅದುವೇ ಮಾನವನ ಶ್ರೇಯಸ್ಸು. ಧರ್ಮ ಧರ್ಮಗಳ ನಡುವೆ ಅಂತರ ದ್ವೇಷ ವಿರೋಧ ಕಂದಕ ತೋಡುವ ಬದಲು ಸೌಹಾರ್ದ ಸಮನ್ವಯ ಸಾಧಿಸುವುದೇ ಸರ್ವ ಧರ್ಮಸಭೆಗಳ ಧ್ಯೇಯ. ಸ್ವಾಮಿ ವಿವೇಕಾನಂದರು ಚಿಕ್ಯಾಗೋದಲ್ಲಿ ನಡೆದ ವಿಶ್ವಧರ್ಮಸಮ್ಮೇಳನದಲ್ಲಿ ಭಾಗವಹಿಸಿದ್ದನ್ನು ನೆನೆಯೋಣ. ಈ ಸಭೆಗಳಿಂದ ಸಮಾಜದಲ್ಲಿ ಸೌಹಾರ್ದ ನೆಲೆಯಾಗುವುದು. ಎಲ್ಲ ಧರ್ಮದವರೂ ಈ ಸಭೆಗಳನ್ನು ಏರ್ಪಡಿಸಬೇಕು. ಇಂಥ ಸಭೆಯನ್ನು ಒಮ್ಮೆ ಹಿಂದುಧರ್ಮದವರು ಏರ್ಪಡಿಸಿದರೆ ಮತ್ತೊಮ್ಮೆ ಇಸ್ಲಾಂ ಧರ್ಮದವರು ಮಗದೊಮ್ಮೆ ಕ್ರೈಸ್ತಧರ್ಮದವರು, ಹೀಗೆ ಜೈನ ಬೌದ್ಧ ಸಿಖ್ಖ ಜರತುಷ್ಟ್ರ ಮುಂತಾದ ಎಲ್ಲರೂ ಪರ್ಯಾಯವಾಗಿ ಏರ್ಪಡಿಸಬೇಕು. ಇದರಿಂದ ಒಂದು ಧರ್ಮದವರು ತಮ್ಮ ಧರ್ಮದ ಜೊತೆಗೆ ಮಿಕ್ಕ ಧರ್ಮಗಳನ್ನೂ ಅರಿಯಲು ಸಾಧ್ಯ. ಹಾಗೆಯೇ ಲೋಪ ದೋಷಗಳನ್ನು ಕೈಬಿಟ್ಟು ಉತ್ತಮಾಂಶಗಳನ್ನು ಅಳವಡಿಸಿಕೊಳ್ಳಬಹುದು. ಆದರಿಂದು ಭಾರತದಲ್ಲಿ ಬಹುತೇಕ ಸರ್ವ ಧರ್ಮ ಸಭೆಗಳು ಹಿಂದು ಧರ್ಮದ ಮಠಮಾನ್ಯಗಳಲ್ಲಿ ನಡೆಯುತ್ತಿವೆ. ಅನ್ಯಧರ್ಮೀಯರು ಇಲ್ಲಿ ಬಂದು ತಮ್ಮದನ್ನು ಉಪದೇಶಿಸುತ್ತಾರೆ ಹೊರತು ತಮ್ಮಲ್ಲಿಗೆ ಕರೆಸಿ ಹಿಂದುಧರ್ಮವನ್ನು ಅರಿಯುತ್ತಿಲ್ಲ. ಧರ್ಮದಲ್ಲೂ ಓಲೈಕೆ ರಾಜಕಾರಣ ವಿಪರ್ಯಾಸ,

# ಐತಿಹಾಸಿಕ ಸಪ್ತ ಮಾತೃಕ ಅದಿಶಕ್ತಿ ದೇವಸ್ಥಾನ ಜೀರ್ಣೋದ್ಧಾರ ಸಮಾರಂಭ

• **ಉದಯವಾಹಿನಿ, ಬೆಂಗಳೂರು**

ಜಿಬಿಎ ಕೇಂದ್ರ ಕಛೇರಿ ಅವರಣದಲ್ಲಿರುವ ಸಪ್ತ ಮಾತೃಕ ಅದಿಶಕ್ತಿ ದೇವಸ್ಥಾನ ಜೀರ್ಣೋದ್ಧಾರ ಪೂಜಾ ಕಾರ್ಯಕ್ರಮ ದಿನಾಂಕ ನಿಗದಿ ಮತ್ತು ಪೂಜಾ ಕಾರ್ಯದ ಕುರಿತು ಖ್ಯಾತ ಜ್ಯೋತಿಷಿಗಳಾದ ಡಾ!!ಭಾನುಪ್ರಕಾಶ್ ರವರು ದೇವಸ್ಥಾನಕ್ಕೆ ಭೇಟಿ ನೀಡಿದರು, ಜಿಬಿಎ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಪದಾಧಿಕಾರಿಗಳು ಉಪಸ್ಥಿತರಿದ್ದರು. ಖ್ಯಾತ ಜ್ಯೋತಿಷಿಗಳಾದ ಡಾ!! ಭಾನುಪ್ರಕಾಶ್ ಶರ್ಮ ರವರ ಮಾತನಾಡಿ ದಿನಾಂಕ


ಉದಯವಾಹಿನಿ ಚಿತ್ರ

ಜನವರಿ 21-01-2026 ರಿಂದ 23ರವರೆಗೆ ಈ ಕೆಳಕಂಡ ಪೂಜಾ ಕಾರ್ಯಗಳೊಂದಿಗೆ ನೆರವೇರಲಿದೆ ಪೂಜಾ ಕಾರ್ಯಗಳಾದ ವಾಸ್ತು ಪೂಜೆ, ಗಣಪತಿ ಹೋಮ ಮೋದಕ ಗಣಪತಿಹೋಮ ಯಂತ್ರ ಸ್ಥಾಪನೆ, ಅಷ್ಟ ಬಂಧನ ಸ್ಥಾಪನೆ,ನವಶಕ್ತಿ ಶಾಂತಿ ಹೋಮ, ಮೃತ್ಯುಂಜಯ ಹೋಮ,ಕಾಲಭೈರವ ಹೋಮ, ಶನೇಶ್ವರ ತಿಲ ಶಾಂತಿ ಹೋಮ, ಸಪ್ತಮಾತೃಕ ದುರ್ಗಾ, ಲಕ್ಷ್ಮಿ, ಸರಸ್ವತಿ ಹೋಮ. ತತ್ವನ್ಯಾಸ, ಕಾಲನ್ಯಾಸ ಹೋಮ, ಕಲಾ ಹೋಮ ನವಚಂಡಿಕಾಯಾಗ ನವಚಂಡಿಕಾಹೋಮ ಕುಂಭಾಭಿಷೇಕ, ವಿಶೇಷ ದುರ್ಗಾ ದೀಪ ನಮಸ್ಕಾರ ನಡೆಯಲಿದೆ ಎಂದು ಹೇಳಿದರು.

> ಜನವರಿ 21ರಿಂದ23ರವರಗೆ ಮೂರು ದಿನಗಳ ಕಾಲ ಜೀರ್ಣೋದ್ಧಾರ ಪೂಜಾ ಕಾರ್ಯಗಳು ಅಗಮ ಪಂಡಿತರಿಂದ ನೇರವೆರಲಿದೆ. ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ರವರು, ಆಡಳಿತಾಧಿಕಾರಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತರಾದ ಮಹೇಶ್ವರರಾವ್ ಮತ್ತು ಸಚಿವರು, ಶಾಸಕರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಅಧಿಕಾರಿ, ನೌಕರರು ಭಾಗವಹಿಸಲಿದ್ದಾರೆ. ಮೂರು ದಿನಗಳ ನಡೆಯುವ ವಿಶೇಷ ಪೂಜಾ ಕಾರ್ಯದಲ್ಲಿ ಸಾರ್ವಜನಿಕರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಿ ಎಂದು ವಿನಂತಿ ಎಂದು ಹೇಳಿದರು. -ಎ.ಅಮೃತ್ ರಾಜ್

# ಶಾಲೆಗೆ ಲೋಕಾಯುಕ್ತ ದಾಳಿಯ ವೇಳೆ ಪ್ರಕರಣ ಪತ್ತೆ

## ಲ್ಯಾಪ್‌ಟಾಪ್, ಸ್ಮಾರ್ಟ್ ಎಲ್‌ಇಡಿ ಬೋರ್ಡ್, ಎಲ್‌ಇಡಿ ಪ್ರೊಜೆಕ್ಟರ್ ಪೂರೈಕೆಯಲ್ಲಿ ಭಾರಿ ಅಕ್ರಮ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ನಗರ ವ್ಯಾಪ್ತಿಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಲ್ಯಾಪ್‌ಟಾಪ್, ಸ್ಮಾರ್ಟ್ ಎಲ್‌ಇಡಿ ಬೋರ್ಡ್, ಎಲ್‌ಇಡಿ ಪ್ರೊಜೆಕ್ಟರ್ ಪೂರೈಕೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಲೋಕಾಯುಕ್ತ ಸಂಸ್ಥೆಯು ತಿಳಿಸಿದೆ. ಸಾರ್ವಜನಿಕರು, ಶಿಕ್ಷಣ ಇಲಾಖೆಯ ಸಿಬ್ಬಂದಿಯಿಂದ ಬಂದಿದ್ದ ಹಲವು ದೂರುಗಳ ಆಧಾರದಲ್ಲಿ ಲೋಕಾಯುಕ್ತ ಸಂಸ್ಥೆಯು ಪ್ರಕರಣ ದಾಖಲಿಕೊಂಡಿತ್ತು. ತನಿಖೆಯ ಭಾಗವಾಗಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರ ನೇತೃತ್ವದಲ್ಲಿ ಲೋಕಾಯುಕ್ತ ಪೊಲೀಸರು, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು ಮತ್ತು 12 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮೇಲೆ ದಾಳಿ ನಡೆಸಿದ್ದರು.

ಮಾದರಿ ಪ್ರಾಥಮಿಕ ಶಾಲೆ ಮತ್ತು ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) ಲ್ಯಾಪ್‌ಟಾಪ್, ಸ್ಮಾರ್ಟ್ ಎಲ್‌ಇಡಿ ಬೋರ್ಡ್, ಎಲ್‌ಇಡಿ ಪ್ರೊಜೆಕ್ಟರ್, ಯುಪಿಎಸ್ ಇನ್ವರ್ಟರ್ ಮತ್ತು ಬ್ಯಾಟರಿಗಳ ಪೂರೈಕೆಗೆ 2025ರ ಏಪ್ರಿಲ್‌ನಲ್ಲಿ ಟೆಂಡರ್ ಕರೆಯಲಾಗಿತ್ತು. ಈ ಸಾಮಗ್ರಿಗಳನ್ನು ಶಾಲೆಗಳಿಗೆ ಪೂರೈಕೆ ಮಾಡಲಾಗಿದೆ.

ಆದರೆ ಟೆಂಡರ್ ದಾಖಲೆಗಳಲ್ಲಿರುವ ತಾಂತ್ರಿಕ ವಿವರಗಳಿಗೂ, ಶಾಲೆಗಳಿಗೆ ಪೂರೈಸಿರುವ ಸಾಮಗ್ರಿಗಳ ತಾಂತ್ರಿಕ ವಿವರಗಳು


ಉದಯವಾಹಿನಿ ಚಿತ್ರ

ಪರಸ್ಪರ ತಾಳೆಯಾಗುತ್ತಿಲ್ಲ ಎಂದು ಲೋಕಾಯುಕ್ತವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಶಾಲೆಗಳಿಗೆ ಪೂರೈಸಲಾಗಿರುವ ಈ ಎಲ್ಲಾ ಸಾಮಗ್ರಿಗಳಿಗೆ ಪಾವತಿ ಮಾಡಲಾಗಿರುವ ಮೊತ್ತ ಮತ್ತು ಅದೇ ಸಾಮಗ್ರಿಗಳಿಗೆ ಮಾರುಕಟ್ಟೆಯಲ್ಲಿ ಈಗಿರುವ ಬೆಲೆಯನ್ನು ಪರಿಶೀಲಿಸಲಾಯಿತು. ಪ್ರತಿ ಲ್ಯಾಪ್‌ಟಾಪ್‌ಗೆ ಮಾರುಕಟ್ಟೆ ದರಕ್ಕಿಂತ ರೂ.10,000. ಯುಪಿಎಸ್ ಸಿಸ್ಟಂಗೆ ರೂ.30,000–ರೂ.40,000, ಎಲ್‌ಇಡಿ ಸ್ಮಾರ್ಟ್ ಟಿ.ವಿಗೆ ರೂ.15,000 ಹೆಚ್ಚು ಪಾವತಿ ಮಾಡಲಾಗಿದೆ. ಬೆಂಗಳೂರು ಉತ್ತರ ಉಪ ನಿರ್ದೇಶಕರ ಕಚೇರಿ ವ್ಯಾಪ್ತಿಯಲ್ಲಿ 1,438 ಶಾಲೆಗಳಿವೆ ಎಂದು ವಿವರಿಸಿದೆ.

### ಅಕ್ರಮದ ಪರಿ

- ಟೆಂಡರ್ ದಾಖಲೆಯಲ್ಲಿ ಸೂಚಿಸಿರುವುದಕ್ಕಿಂತ ಕಡಿಮೆ ಸಂಗ್ರಹಣಾ ಸಾಮರ್ಥ್ಯವಿರುವ (ಇಂಟರ್ನಲ್ ಮೆಮೊರಿ) ಎಲ್‌ಇಡಿ ಸ್ಮಾರ್ಟ್ ಟಿವಿಗಳನ್ನು ಪೂರೈಸಲಾಗಿದೆ
- ಶಾಲೆಗಳಿಗೆ ಪೂರೈಸಲಾದ ಈ ಎಲ್ಲಾ ಸಾಮಗ್ರಿಗಳ ವಾರಂಟಿ ವಿವರಕ್ಕೆ ಸಂಬಂಧಿಸಿದ ದಾಖಲೆಗಳು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಬಳಿ ಲಭ್ಯವಿಲ್ಲ ಮತ್ತು ಸಾಮಗ್ರಿಗಳ ಮೇಲೂ ನಮೂದಿಸಿಲ್ಲ. ವಾಸ್ತವದಲ್ಲಿ ವಾರಂಟಿ ದಾಖಲೆಗಳನ್ನು ಪಡೆದುಕೊಂಡೇ ಇಲ್ಲ
- ಶಾಲೆಗಳಿಗೆ ಎಲ್ಲಾ ಸಾಮಗ್ರಿಗಳನ್ನು ಪೂರೈಸಲಾಗಿದೆ ಎಂಬುದಕ್ಕೆ ಮುಖ್ಯ ಶಿಕ್ಷಕರಿಂದ ದೃಢೀಕರಣ ಪತ್ರ ಪಡೆದುಕೊಂಡಿಲ್ಲ. ಇದನ್ನು ಖಚಿತಪಡಿಸಿಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿಯೇ ಇಲ್ಲ

### ಶಾಲೆಯಲ್ಲಿ ಲ್ಯಾಪ್‌ಟಾಪ್ ಇಲ್ಲ

ಜಾಲಹಳ್ಳಿ ಕೆಪಿಎಸ್ ಶಾಲೆಗೆ ಪೂರೈಸಲಾದ ಲ್ಯಾಪ್‌ಟಾಪ್‌ಗಳು ಶಾಲೆಯಲ್ಲಿ ಇಲ್ಲವೇ ಇಲ್ಲ' ಎಂದು ಲೋಕಾಯುಕ್ತವು ಶಾಲೆಗೆ ಪೂರೈಕೆಯಾಗಿರುವ ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳನ್ನು ತೋರಿಸುವಂತೆ ಜಾಲಹಳ್ಳಿ ಕೆಪಿಎಸ್ ಶಾಲೆಯ ಮುಖ್ಯ ಶಿಕ್ಷಕಿ ಅವರಿಗೆ ಲೋಕಾಯುಕ್ತರು ಕರೆ ಮಾಡಿ ಸೂಚಿಸಿದ್ದರು. ಆದರೆ, ಆ ಶಿಕ್ಷಕಿ ಅವರು ಹಲವು ಗಂಟೆಗಳ ನಂತರ ವಿಡಿಯೋ ಕಾಲ್ ಸಂಪರ್ಕಕ್ಕೆ ಬಂದು ಯುಪಿಎಸ್, ಸ್ಮಾರ್ಟ್ ಎಲ್ ಇಡಿ ಟಿವಿ ಮತ್ತು ಪ್ರೊಜೆಕ್ಟರ್‌ಗಳನ್ನು ಮಾತ್ರವೇ ತೋರಿಸಿದರು. ಹಲವು ಬಾರಿ ಸೂಚಿಸಿದ ನಂತರವೂ ಲ್ಯಾಪ್ಟಾಪ್‌ಗಳನ್ನು ತೋರಿಸಲಿಲ್ಲ ಎಂದು ಸಂಸ್ಥೆಯು ಮಾಹಿತಿ ನೀಡಿದೆ. ಬೇರೆ ಶಾಲೆಗಳಲ್ಲೂ ಇದೇ ಸ್ಥಿತಿ ಇರುವ ಸಾಧ್ಯತೆ ಇದೆ. ವಿಸ್ತೃತ ತನಿಖೆಯ ನಂತರ ಅಕ್ರಮದ ಪ್ರಮಾಣ ಗೊತ್ತಾಗಲಿದೆ ಎಂದು ಲೋಕಾಯುಕ್ತವು ಹೇಳಿದೆ.

## 2ನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರ ಪಾತ್ರವಾದ ಆವಲಹಳ್ಳಿ ಗ್ರಾ.ಪಂ.

• **ಉದಯವಾಹಿನಿ,ಕೆ.ಆರ್.ಪುರ**

ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಆವಲಹಳ್ಳಿ ಗ್ರಾಮ ಪಂಚಾಯಿತಿ ಎರಡನೇ ಬಾರಿಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿದೆ. ವಿವಿಧ ಇಲಾಖೆಗಳಲ್ಲಿನ ಪ್ರಗತಿಯನ್ನು ಪರಿಗಣಿಸಿ ಗ್ರಾಮ ಪಂಚಾಯಿತಿಯನ್ನು 2023–24ನೇ ಸಾಲಿಗೆ ಆಯ್ಕೆ ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರೂ. 5 ಲಕ್ಷ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಗಿದೆ.

2021–22 ರಲ್ಲಿಯೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಕ್ಕೆ ಈ ಪ್ರಶಸ್ತಿಯನ್ನು ಅವಲಹಳ್ಳಿ ಗ್ರಾಮ ಪಂಚಾಯಿತಿ ಮುಡಿಗೇರಿಸಿಕೊಂಡಿತ್ತು. ಆವಲಹಳ್ಳಿ ಗ್ರಾಮ ಪಂಚಾಯಿತಿ ಅವಲಹಳ್ಳಿ, ಚೀಮಸಂದ್ರ, ವೀರೇನಹಳ್ಳಿ ಗ್ರಾಮಗಳನ್ನು ಒಳಗೊಂಡಿದೆ. ಗ್ರಾಮ ಪಂ. ವ್ಯಾಪ್ತಿ ಗ್ರಾಮಗಳಲ್ಲಿ ಕಸ ನಿರ್ವಹಣೆ, ಗ್ರಾಮ ಸಭೆ, ಕರ ನಿರ್ವಹಣೆಯಂತಹ ಮಾದರಿ ಕೆಲಸಗಳನ್ನು ಪರಿಗಣಿಸಿ ಪುರಸ್ಕಾರ ಲಭಿಸಿದೆ. ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ, ಕೆರೆ ಕಟ್ಟೆಗಳ ದಡಗಳಲ್ಲಿ ಗಿಡ ನೆಡುವ ಕಾರ್ಯಕ್ರಮ, ಕೆರೆ, ಚರಂಡಿ ಸ್ವಚ್ಛತೆ, ರಸ್ತೆ ನಿರ್ಮಾಣ, ಸರ್ಕಾರಿ ಕಟ್ಟಡಗಳನ್ನು ಉತ್ತಮ ರೀತಿಯಲ್ಲಿ ಇರಿಸಿಕೊಳ್ಳುವ ಹಲವಾರು ಚಟುವಟಿಕೆ ರೂಪಿಸಿಕೊಂಡಿರುವುದರಿಂದ ಪಂಚಾಯಿತಿಗೆ ಪ್ರಶಸ್ತಿ ಲಭಿಸಿದೆ' ಎಂದು ಅಧ್ಯಕ್ಷೆ ಶಿಲ್ಪಾ ನಾಗರಾಜ್ ಹೇಳಿದರು.

## ಎಂಬಿಬಿಎಸ್ , ಬಿಡಿಎಸ್ 3ನೇ ಸುತ್ತಿನ ಸೀಟು ಹಂಚಿಕೆ ತಾತ್ಕಾಲಿಕ ಪಟ್ಟಿ ರದ್ದು

• **ಉದಯವಾಹಿನಿ, ಬೆಂಗಳೂರು**

ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಳೆದ ಅಕ್ಟೋಬರ್ 24ರಂದು ಪ್ರಕಟಿಸಿದ್ದ ಮೂರನೇ ಸುತ್ತಿನ ಕೌನ್ಸೆಲಿಂಗ್‌ನ ತಾತ್ಕಾಲಿಕ ಹಂಚಿಕೆ ಪಟ್ಟಿಯನ್ನು ಹೈಕೋರ್ಟ್



ರದ್ದುಗೊಳಿಸಿದೆ. ಈ ಸಂಬಂಧ ಚಂದನಾ ಎಂ.ಚವಾಣ್ ಸೇರಿದಂತೆ 26 ವಿದ್ಯಾರ್ಥಿಗಳು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಬಿ.ಎಂ.ಶ್ಯಾಮ್ ಪ್ರಸಾದ್, ಎಂ.ಐ.ಅರುಣ್ ಮತ್ತು ಟಿ.ಎಂ.ನದಾಫ್ ಅವರಿದ್ದ ತ್ರಿಸದಸ್ಯ ನ್ಯಾಯಪೀಠ ಭಾಗಶಃ ಮಾನ್ಯ ಮಾಡಿ ಈ ಕುರಿತಂತೆ ಆದೇಶಿಸಿದೆ. ಮೂರನೇ ಸುತ್ತಿನ ಕೌನ್ಸೆಲಿಂಗ್ ಅನ್ನು ಹೊಸದಾಗಿ ಕೈಗೊಳ್ಳಬೇಕು. ತೀರ್ಪನ್ನು ನಿಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು' ಎಂದು ಕೆಇಎಗೆ ನಿರ್ದೇಶಿಸಿದೆ.

## ಒಆರ್‌ಆರ್ ಕಾರಿಡಾರ್ ಮೂಲಸೌಕರ್ಯ ವೃದ್ಧಿ: ಸಚಿವ ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಒಆರ್‌ಆರ್ ಕಾರಿಡಾರ್ ಜಾಗತಿಕ ತಂತ್ರಜ್ಞಾನ ಆರ್ಥಿಕತೆಯ ಕೇಂದ್ರ ಬಿಂದುವಾಗಿದೆ. ಇಲ್ಲಿನ ಸಮಸ್ಯೆಗಳನ್ನು ಸರಿಪಡಿಸಿ, ಮೂಲಸೌಕರ್ಯ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಬೆಂಗಳೂರಿನ ಹೊರ ವರ್ತುಲ ರಸ್ತೆ ಕಂಪನಿಗಳ ಸಂಘವು (ಒಆರ್‌ಆರ್‌ಸಿಎ) ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಈ ಪ್ರದೇಶದ ಸಂಚಾರ ಮತ್ತು ಮೂಲಸೌಕರ್ಯ ಅಡಚಣೆಗಳಿಗೆ ದೀರ್ಘಕಾಲದ ಪರಿಹಾರಗಳನ್ನು ಕಾಲಮಿತಿಯೊಳಗೆ ಒದಗಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಮಾತನಾಡಿ, ಜಿಬಿಎ ರಚನೆಯಿಂದ ಈಗಾಗಲೇ ವಿವಿಧ ಇಲಾಖೆಗಳಲ್ಲಿ ಸಮನ್ವಯತೆ ಹೆಚ್ಚಿದೆ.

ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ವಿಶೇಷವಾಗಿ ಕಾಡುಬೀಸನಹಳ್ಳಿ, ಬೆಳ್ಳಂದೂರು ಮತ್ತು ಮಾರತ್‌ಹಳ್ಳಿ ಪ್ರದೇಶದಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯ ನಿಯಂತ್ರಿಸಲು ಯೋಜನೆ ರೂಪಿಸಿ, ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ಮಾಹಿತಿ ನೀಡಿದರು. ಐಟಿ–ಬಿಟಿ ಇಲಾಖೆಯ ಕಾರ್ಯದರ್ಶಿ ಮಂಜುಳಾ ಎನ್.. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್ ಸೇರಿದಂತೆ ಕಾರ್ಪೊರೇಟ್ ಸಂಸ್ಥೆಗಳು ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.



> **ಉದ್ಯಮದ ಪ್ರತಿನಿಧಿಗಳು ಮಾತನಾಡಿ, ಮೆಟ್ರೊ ನಿಲ್ದಾಣಗಳಿಗೆ ಕೊನೆಯ ಹಂತದ ಸಂಪರ್ಕ, ಸರ್ವೀಸ್ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ದುಃಸ್ಥಿತಿ, ಪ್ರಮುಖ ಜಂಕ್ಷನ್‌ಗಳಲ್ಲಿನ ಸಂಚಾರ ದಟ್ಟಣೆ, ಹೆಚ್ಚಿನ ಜನಸಾಂದ್ರತೆಯ ಪ್ರದೇಶಗಳಲ್ಲಿ ಕಸ ಸಂಗ್ರಹ, ನಿರಂತರ ನಿರ್ಮಾಣ ಚಟುವಟಿಕೆಗಳಿಂದ ಉದ್ಭವಿಸಿರುವ ದೂರಸಂಪರ್ಕ ಸಮಸ್ಯೆಗಳು ಮತ್ತು ವಿವಿಧ ಸಮೂಹ ಸಾರಿಗೆ ಸೌಲಭ್ಯಗಳ ಮಧ್ಯೆ ಸಮನ್ವಯತೆ ಸಾಧಿಸುವ ಕೆಲಸವಾಗಬೇಕು' ಎಂದು ಮನವಿ ಮಾಡಿದರು.**

## ನಿಗದಿತ ಸಮಯದೊಳಗೆ ನೀಲಿ ಮೆಟ್ರೊ ಮಾರ್ಗ ಪೂರ್ಣ: ಡಿಕೆಶಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ನಿಗದಿತ ಸಮಯದೊಳಗೆ ನೀಲಿ ಮೆಟ್ರೊ ಮಾರ್ಗ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದ್ದು. ಕೆ.ಆರ್ ಪುರ–ಸಿಲ್ಕ್ ಬೋರ್ಡ್ ನಡುವೆ 2026 ಡಿ.ನಲ್ಲಿ ಸಂಚಾರ ಆರಂಭಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ಕೊಡಿಗೆಹಳ್ಳಿಯಲ್ಲಿ ಮೆಟ್ರೊ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಹೆಬ್ಬಾಳದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 2027ರ ಜೂನ್‌ಗೆ ಹಾಗೂ ಕೆ.ಆರ್ ಪುರದಿಂದ ಹೆಬ್ಬಾಳದವರೆಗೆ 2027 ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರರು ತಿಳಿಸಿದ್ದಾರೆ.

ಅದರಂತೆ ಪೂರ್ಣಗೊಳಿಸದೇ ಇದ್ದರೆ ಗುತ್ತಿಗೆದಾರರಿಗೆ ಮುಂದೆ ಯಾವುದೇ ಕಾಮಗಾರಿ ನೀಡುವುದಿಲ್ಲ ಎಂದು ಎಚ್ಚರಿಸಿದರು. ಕೆಲಸ ಪೂರ್ಣವಾಗುವವರೆಗೂ ಇಲ್ಲಿರುವ ಪ್ರಮುಖ ಯಂತ್ರವನ್ನು ಬೆಂಗಳೂರಿನಿಂದಾಚೆಗೆ ಸ್ಥಳಾಂತರಿಸಲು ಅವಕಾಶ ನೀಡುವುದಿಲ್ಲ. ಇದರ ಉಸ್ತುವಾರಿಯನ್ನು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ

### ಬಿಸಿನೆಸ್ ಕಾರಿಡಾರ್

**ಬಿಎಂಆರ್‌ಡಿಎ, ಬಿಡಿಎ, ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಗಳಲ್ಲಿ ಏನೆಲ್ಲ ಆಗಬೇಕಿದೆ ಎಂದು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಬಿಸಿನೆಸ್ ಕಾರಿಡಾರ್ ವಿಚಾರದಲ್ಲಿ ಸರ್ಕಾರದ ಪರಿಹಾರಕ್ಕೆ ಒಪ್ಪಿ ಭೂಮಿ ನೀಡುವ ರೈತರಿಗೆ ತೀರ್ಮಾನ ಮಾಡಲಾಗಿರುವ ಪರಿಹಾರವನ್ನು ನೀಡುತ್ತೇವೆ. ಯಾರು ಒಪ್ಪುವುದಿಲ್ಲವೋ ಅವರಿಗೆ ನ್ಯಾಯಾಲಯದಲ್ಲಿ ಹಳೆಯ ದರದಲ್ಲಿ ಡೆಪಾಸಿಟ್ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.**


## ಡಿ. 9ಕ್ಕೆ ಬಿಜೆಪಿಯಿಂದ ಸುವರ್ಣ ವಿಧಾನಸೌಧ ಮುತ್ತಿಗೆ

• **ಉದಯವಾಹಿನಿ, ಬೆಂಗಳೂರು**

ಡಿ. 8 ರಿಂದ ಬೆಳಗಾವಿಯಲ್ಲಿ ರಾಜ್ಯ ವಿಧಾನಸಭೆಯ ಚಳಿಗಾಲದ ಅಧಿವೇಶನ ಆರಂಭವಾಗಲಿದ್ದು, ಡಿಸೆಂಬರ್ 9 ರಂದು ಸುವರ್ಣ ವಿಧಾನಸೌಧಕ್ಕೆ ಬಿಜೆಪಿ ಹೆಚ್ಚಿನ ಸಂಖ್ಯೆಯ ರೈತರೊಂದಿಗೆ ಮುತ್ತಿಗೆ ಹಾಕಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಹೇಳಿದ್ದಾರೆ. ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಮತ್ತು ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವ ಉದ್ದೇಶದಿಂದ ಈ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ವಿಜಯೇಂದ್ರ ಅವರು ತಿಳಿಸಿದ್ದಾರೆ.

ಇದೇ ವೇಳೆ ಅಧಿವೇಶನದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಚರ್ಚಿಸಿಲ್ಲ ಎಂದು ವಿಜಯೇಂದ್ರ ಹೇಳಿದರು.

ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿಸೆಂಬರ್ 8 ರಿಂದ 19 ರವರೆಗೆ ಬೆಳಗಾವಿಯಲ್ಲಿ ನಡೆಯಲಿದೆ. ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಆರಂಭವಾಗಲಿದೆ. ವಿರೋಧ ಪಕ್ಷಗಳಾದ ಬಿಜೆಪಿ–ಜೆಡಿ(ಎಸ್) ನಾಯಕರು, ನಾನು ಅಧಿವೇಶನಕ್ಕಾಗಿ ನಮ್ಮ ಕಾರ್ಯತಂತ್ರ ಬಗ್ಗೆ ವಿವರವಾಗಿ ಚರ್ಚಿಸಿದ್ದೇವೆ. ರಾಜ್ಯದ ಸಮಸ್ಯೆಗಳನ್ನು ಎತ್ತುವುದು, ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವುದು



ಮತ್ತು ಉತ್ತರ ಕರ್ನಾಟಕ, ನೀರಾವರಿ ಹಾಗೂ ರೈತರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲಾಗುವುದು ಎಂದು ವಿಜಯೇಂದ್ರ ಸುದ್ದಿಗಾರರಿಗೆ ತಿಳಿಸಿದರು. ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಕೇವಲ ನೆಪ ಮಾತ್ರಕ್ಕೆ ಒಂದು ದಿನ ನಡೆಯುತ್ತವೆ. ಆದರೆ ಈ ಬಾರಿ ಅದನ್ನು ಗಂಭೀರವಾಗಿ ಪರಿಗಣಿಸಿ, ಅಧಿವೇಶನದ ಆರಂಭಿಕ ದಿನಗಳಲ್ಲಿಯೇ ಈ ಪ್ರದೇಶಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ನಾವು ನಿರ್ಧರಿಸಿದ್ದೇವೆ ಎಂದು ಅವರು ಹೇಳಿದರು. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಯದೆ ಉಳಿದಿದೆ. ಮೆಕ್ಕೆಜೋಳ ಖರೀದಿಯನ್ನು ಸರಿಯಾಗಿ ನಿರ್ವಹಿಸಲಾಗಿಲ್ಲ ಮತ್ತು ಒಟ್ಟು 54 ಲಕ್ಷ ಮೆಟ್ರಿಕ್ ಟನ್‌ಗಳಲ್ಲಿ ಕೇವಲ 5 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಮಾತ್ರ ರಾಜ್ಯ ಸರ್ಕಾರ ಖರೀದಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಆರೋಪಿಸಿದರು. ಹೆಸರುಕಾಳು, ಕಾಳು ಮತ್ತು ಭತ್ತದ ಖರೀದಿಯೂ ಪ್ರಾರಂಭವಾಗಿಲ್ಲ. ರೈತರಿಗೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳೊಂದಿಗೆ ಡಿಸೆಂಬರ್ 9 ರಂದು ಸುಮಾರು 15,000–20,000 ರೈತರನ್ನು ಒಟ್ಟುಗೂಡಿಸುವ ಮೂಲಕ ಬಿಜೆಪಿ ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯೋಜಿಸಿದೆ.

## ಡಿಕೆಶಿ ಭೇಟಿಯಾದ ಅತಿ ಹಿಂದುಳಿದ ಸ್ವಾಮೀಜಿಗಳ ಒಕ್ಕೂಟ; ಸಮಾವೇಶ ಒತ್ತಾಯ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಸದ್ಯಕ್ಕೆ ಅಹಿಂದ, ಹಿಂದುಳಿದ ವರ್ಗಗಳ ನಾಯಕ ಅಂದರೆ ಅದು ಸಿದ್ದರಾಮಯ್ಯ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಈಗ ಸಿದ್ದರಾಮಯ್ಯ ಅವರಿಗೆ ಟಕ್ಕರ್ ಕೊಡಲು ಅತಿ ಹಿಂದುಳಿದ ವರ್ಗಗಳ ಒಕ್ಕೂಟ ಮುಂದಾಗಿದ್ದು, ಉಪ ಮುಖ್ಯಮಂತ್ರಿ ಡಿಕೆ. ಶಿವಕುಮಾರ್ ನೇತೃತ್ವದಲ್ಲಿ ಸಮಾವೇಶ ನಡೆಸಲು ಮುಂದಾಗಿವೆ ಎಂದು ತಿಳಿದುಬಂದಿದೆ.

ಅತಿ ಹಿಂದುಳಿದ ವರ್ಗಗಳ 11 ಸ್ವಾಮೀಜಿಗಳ ಒಕ್ಕೂಟ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದು, ಬೆಂಗಳೂರಿನಲ್ಲಿ ಅತಿ ಹಿಂದುಳಿದವರ ಸಮಾವೇಶ ನಡೆಸುವಂತೆ ಒತ್ತಾಯಿಸಿದ್ದಾರೆಂದು ತಿಳಿದುಬಂದಿದೆ. ಪ್ರಣವಾನಂದ



ಸ್ವಾಮೀಜಿ ನೇತೃತ್ವದ ತಂಡ ಡಿಕೆಶಿ ಅವರನ್ನು ಭೇಟಿ ಮಾಡಿದ್ದು, ನೀವೂ ಮುಂದೆ ಸಿಎಂ ಆಗಲೇಬೇಕೆಂದು ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ಅತಿ ಹಿಂದುಳಿದವರ ಸಮಾವೇಶ ಮಾಡುವುದಕ್ಕೆ ಒತ್ತಾಯಿಸಿದ್ದಾರೆ. ಡಿಕೆ.ಶಿವಕುಮಾರ್ ಭೇಟಿ ಬಳಿಕ ಪ್ರತಿಕ್ರಿಯೆ ನೀಡಿರುವ ಪ್ರಣವಾನಂದ ಸ್ವಾಮೀಜಿ. ರಾಜ್ಯದ ಆಗಲು ಡಿಕೆಶಿ ಯೋಗ್ಯ ವ್ಯಕ್ತಿ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ಡಿಕೆಶಿ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಲು ತಡಮಾಡಬಾರದು. ನಮ್ಮೆಲ್ಲರ ಸಂಪೂರ್ಣ ಬೆಂಬಲ ಅವರಿಗಿದೆ. ಡಿಕೆಶಿ ಸಿಎಂ ಆಗಬೇಕೆಂಬ ಬೇಡಿಕೆ ಇದ್ದು, ಅವರಿಗೆ ಯೋಗ್ಯತೆ ಮತ್ತು ಹಕ್ಕು ಎರಡೂ ಇದೆ. ದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರೋದೇ 2ಮೂರು ರಾಜ್ಯಗಳಲ್ಲಿ. ಹೀಗಾಗಿ ಕೊಟ್ಟ ಮಾತಿನಂತೆ ಹೈಕಮಾಂಡ್ ನಡೆದುಕೊಳ್ಳಬೇಕು. ಅತಿ ಹಿಂದುಳಿದ ಸಮುದಾಯಗಳಿಗೆ ಅನ್ಯಾಯವಾಗಿದ್ದು, ಯಾವ ಮುಖ್ಯಮಂತ್ರಿಗಳೂ ನಮ್ಮ ಪರ ಕೆಲಸ ಮಾಡಿಲ್ಲ. ಹೀಗಾಗಿ ನಾವು ಅನಿವಾರ್ಯವಾಗಿ ಡಿಕೆಶಿ ಅವರನ್ನು ಭೇಟಿ ಮಾಡಿದ್ದೇವೆ. ಡಿಕೆಶಿ ಕಷ್ಟ, ನೋವು ಪಟ್ಟಿದ್ದಾರೆ. ಪಕ್ಷಕ್ಕಾಗಿ ಜೈಲಿಗೂ ಹೋಗಿ ಬಂದಿದ್ದಾರೆ. ಅವರು ಸಿಎಂ ಆಗಲೇಬೇಕು ಎಂದು ಆಗ್ರಹಿಸಿದ್ದಾರೆ.

# ನಗರದಲ್ಲಿ 9 ಸಾವಿರ ಎಐ ಕ್ಯಾಮೆರಾ ಅಳವಡಿಕೆ: ಸಚಿವ ಜಿ.ಪರಮೇಶ್ವರ

## ಯಾವುದೇ ರೀತಿಯ ಘಟನೆ ನಡೆದರೆ ಕಂಟ್ರೋಲ್ ರೂಮ್‌ಗೆ ಅದರ ನೇರ ದೃಶ್ಯಾವಳಿ ಲಭಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆ

• **ಉದಯವಾಹಿನಿ, ಬೆಂಗಳೂರು**

ನಗರದಲ್ಲಿ 160 ಪ್ರಮುಖ ಜಂಕ್ಷನ್‌ಗಳಲ್ಲಿ ಒಂಬತ್ತು ಸಾವಿರ ಎ.ಐ ಕೃತಕ ಬುದ್ಧಿಮತ್ತೆ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಯಾವುದೇ ರೀತಿಯ ಘಟನೆ ನಡೆದರೆ ಕಂಟ್ರೋಲ್ ರೂಮ್‌ಗೆ ಅದರ ನೇರ ದೃಶ್ಯಾವಳಿ ಲಭಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ಎ.ಐ ಅಲ್ಲದೇ ಇತರೆ ಏಳು ಲಕ್ಷ ಕ್ಯಾಮೆರಾಗಳನ್ನೂ ಅಳವಡಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯವನ್ನು ಆಧುನೀಕರಣಗೊಳಿಸಲಾಗಿದ್ದು, 2 ತಿಂಗಳಲ್ಲಿ ವರದಿ ಲಭ್ಯವಾಗುತ್ತಿದೆ. ಇಡೀ ದೇಶದಲ್ಲಿ ನಮ್ಮಲ್ಲಿ ಉತ್ತಮ ವಿಧಿ ವಿಜ್ಞಾನ ಪ್ರಯೋಗಾಲಯವಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

112 ಸಹಾಯವಾಣಿಗೆ ರಾಜ್ಯದಾದ್ಯಂತ ನಿತ್ಯ 24 ಸಾವಿರ ಕರೆಗಳು ಬರುತ್ತಿವೆ. 1.400 ದೂರುಗಳಿಗೆ ಸಿಬ್ಬಂದಿ ಸ್ಪಂದಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ. 112 ಸಹಾಯವಾಣಿ ದೂರುಗಳಿಗೆ ನಗರದಲ್ಲಿ 6.59 ನಿಮಿಷದಲ್ಲಿ ಸ್ಪಂದಿಸುತ್ತಿದ್ದು, ಗ್ರಾಮೀಣ ಭಾಗದಲ್ಲಿ 13.58 ನಿಮಿಷದಲ್ಲಿ ಘಟನಾ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದರು. ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಜಿಲ್ಲೆಗೊಂದು ಸೈಬರ್ ಕ್ರೈಮ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದ ಬಳಿಕ, ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.



ಉದಯವಾಹಿನಿ ಚಿತ್ರ

1930 ಸಹಾಯವಾಣಿಯಲ್ಲಿ 66 ಮಂದಿ ದಿನದ 24 ಗಂಟೆ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ವೀಸಾ ಅವಧಿ ಮುಕ್ತಾಯಗೊಂಡಿದ್ದರೂ ನಗರದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದ 302 ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಿ, ವಿದೇಶಿ ಪ್ರಾದೇಶಿಕ ನೋಂದಣಿ ಅಧಿಕಾರಿಯ (ಎಫ್‌ಆರ್ ಆರ್‌ಒ) ನೆರವಿನೊಂದಿಗೆ, ದಾಖಲೆಗಳನ್ನು ಪರಿಶೀಲಿಸಿ. ಆಯಾ ದೇಶಗಳಿಗೆ ಗಡಿಪಾರು ಮಾಡಲಾಯಿತು ಎಂದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್. ಅಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣಬ್ ಮೊಹಾಂತಿ.

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಎಡಿಜಿಪಿಗಳಾದ ಆರ್.ಹಿತೇಂದ್ರ, ಬಿ.ದಯಾನಂದ, ಪಿ.ಹರಿಶೇಖರನ್, ಸೌಮೇಂದು ಮುಖರ್ಜಿ, ಆರ್‌ಎನ್‌ಟಿಬಿಸಿಐ ವ್ಯವಸ್ಥಾಪಕ ನಿರ್ದೇಶಕ ದೇಬಶಿಶ್ ನಿಯೋಗಿ, ಹ್ಯಾಂಡ್ ಇನ್ ಹ್ಯಾಂಡ್ ಇಂಡಿಯಾ ಸಂಸ್ಥೆಯ ಕಾರ್ಯ ನಿರ್ವಾಹಕ ಅಧ್ಯಕ್ಷ ಡಾ.ಕಲ್ಪನಾ ಶಂಕರ್ ಹಾಜರಿದ್ದರು.

**ಪೊಲೀಸರಿಗೆ ಸಂಚಾರಿ ಶೌಚಾಲಯ:** ಸಂಚಾರ ಪೊಲೀಸರ ಅನುಕೂಲಕ್ಕಾಗಿ ರೆನಾಲ್ಸ್ ನಿಸಾನ್ ಟೆಕ್ನಾಲಜಿ ಆ್ಯಂಡ್ ಬಿಸಿನೆಸ್ ಸೆಂಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಆರ್‌ಎನ್‌ಟಿಬಿಸಿಐ) ತನ್ನ ಸಿಎಸ್ ಆರ್ ನೆರವಿನಡಿ ನೀಡಿರುವ ಹೈಜೀನ್ ಆನ್ ಗೋ ಸಂಚಾರಿ ಶೌಚಾಲಯ ವಾಹನಗಳ ಸೇವೆಗೆ ಜಿ.ಪರಮೇಶ್ವರ ಹಸಿರು ನಿಶಾನೆ ತೋರಿದರು. ಹ್ಯಾಂಡ್ ಇನ್ ಹ್ಯಾಂಡ್ ಇಂಡಿಯಾ ಸಂಸ್ಥೆಯು ಹೈಜೀನ್ ಆನ್ ಗೋ ಸಂಚಾರ ಶೌಚಾಲಯ ವಾಹನಗಳನ್ನು ರೂಪಿಸಿದೆ. ನಗರದ ತೀವ್ರ ವಾಹನ ದಟ್ಟಣೆಯ ವಿವಿಧ ರಸ್ತೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಂಚಾರ ಪೊಲೀಸರಿಗೆ ಈ ವಾಹನಗಳ ಸೇವೆ ಲಭ್ಯವಿರಲಿದೆ. ಸಂಚಾರ ನಿರ್ವಹಣೆ ವೇಳೆ ಪೊಲೀಸರಿಗೆ ಶೌಚಾಲಯಕ್ಕೆ ಹೋಗುವುದಕ್ಕೂ ಬಿಡುವು ಸಿಗುವುದಿಲ್ಲ. ಶೌಚಬಾಧೆ ತೀರಿಸಿಕೊಳ್ಳಲು ಸಾಧ್ಯವಾಗದೆ ಸಂಚಾರ ಪೊಲೀಸರು ನಿರ್ಜಲೀಕರಣ ಮೂತ್ರನಾಳದ ಸೋಂಕು ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಮಹಿಳಾ ಸಿಬ್ಬಂದಿಯ ಜನನಿಬಿಡ ರಸ್ತೆಗಳಲ್ಲಿ ಕಾರ್ಯ ನಿರ್ವಹಿಸುವಾಗ ಇನ್ನೂ ಹೆಚ್ಚು ಕಷ್ಟ ಅನುಭವಿಸುತ್ತಾರೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಹೈಜೀನ್ ಆನ್ ಗೋ ವಾಹನಗಳನ್ನು ಸಿದ್ಧಪಡಿಸಲಾಗಿದೆ. ಮೂರು ವಾಹನಗಳ ಮರು ವಿನ್ಯಾಸಕ್ಕೆ ಸುಮಾರು ರೂ.80 ಲಕ್ಷ ವ್ಯಯಿಸಲಾಗಿದೆ. ಒಟ್ಟಾರೆ 12.06 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. 2028ರ ಮಾರ್ಚ್‌ವರೆಗೆ ಈ ವಾಹನಗಳು ಕಾರ್ಯಾಚರಣೆ ಮಾಡಲಿವೆ.

ವಾಹನ ದಟ್ಟಣೆಯ ಮಾರ್ಗಗಳಾದ ಥಣಿಸಂದ್ರ, ಆಡುಗೋಡಿ ಮತ್ತು ಮೈಸೂರು ರಸ್ತೆಯ 91 ಪೂರ್ವ ನಿಗದಿತ ಸ್ಥಳಗಳಲ್ಲಿ ಇವು ಕಾಲಕಾಲಕ್ಕೆ ಬಂದು ನಿಲ್ಲುತ್ತವೆ. ಈ ವಾಹನಗಳು ನಿತ್ಯ ಬೆಳಗ್ಗೆ 8.30ರಿಂದ ಸಂಜೆ 7ರವರೆಗೆ ಕಾರ್ಯ ನಿರ್ವಹಿಸುತ್ತವೆ.

### ಮಾದಕ ವಸ್ತುಗಳ ವಿರುದ್ಧ ಕಾರ್ಯಾಚರಣೆ

**ನಡೆಸುತ್ತಿರುವ ಪೊಲೀಸರು ಪ್ರಸಕ್ತ ವರ್ಷದಲ್ಲಿ (2025) 1.078 ಎನ್‌ಡಿಪಿಎಸ್ ಪ್ರಕರಣಗಳನ್ನು ದಾಖಲಿಸಿ ರೂ. 1.491 ಭಾರತೀಯ ಪ್ರಜೆಗಳು 52 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ನಗರ ಪೊಲೀಸ್ ಹಾಗೂ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಜಂಟಿ ಕಾರ್ಯಾಚರಣೆ ನಡೆಸಿ ರೂ. 160 ಕೋಟಿ ಮೌಲ್ಯದ 1,446 ಕಿಲೋ ಗ್ರಾಂ ಮಾದಕ ವಸ್ತು ಜಪ್ತಿ ಮಾಡಿವೆ. ಈ ಪೈಕಿ ಸಿಸಿಬಿ 61 ಪ್ರಕರಣಗಳನ್ನು ದಾಖಲಿಸಿ, ಸುಮಾರು 7120.14 ಕೋಟಿ ಮೌಲ್ಯದ 147 ಕೆ.ಜಿ. ಡ್ರಗ್ಸ್ ವಶಪಡಿಸಿಕೊಂಡಿದೆ. 2024ರಲ್ಲಿ ರೂ.98 ಕೋಟಿ, 2023ರಲ್ಲಿ ರೂ.103 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಹಚ್ಚಲಾಗಿದೆ ಎಂದು ಮಾಹಿತಿ ನೀಡಿದರು.**

# ಕೆಪಿಎಸ್-ಮ್ಯಾಗ್ನೆಟ್ ಯೋಜನೆ: ಸರ್ಕಾರಿ ಶಾಲೆ ವಿಲೀನಕ್ಕೆ ಭಾರಿ ಆಕ್ರೋಶ

## ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರದ ಯೋಜನೆಯ ಅನುಷ್ಠಾನಕ್ಕೆ ಮೊನ್ನೆ ನಡೆದ ಸಚಿವ ಸಂಪುಟ ಸಭೆ

• **ಉದಯವಾಹಿನಿ, ಚನ್ನಪಟ್ಟಣ**

ತಾಲ್ಲೂಕಿನ ಹೊಂಗನೂರು ಕೆಪಿಎಸ್ ಶಾಲೆಗೆ ಸುತ್ತಮುತ್ತಲಿನ ಏಳು ಗ್ರಾಮಗಳ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ವಿಲೀನ ಮಾಡುತ್ತಿರುವ ಸರ್ಕಾರದ ಕ್ರಮ ಖಂಡಿಸಿ, ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘದ (ಎಐಡಿಎಸ್‌ಒ) ನೇತೃತ್ವದಲ್ಲಿ ಗ್ರಾಮಸ್ಥರು ನಗರದ ಸಾತನೂರು ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು.

ವಿಲೀನಗೊಳ್ಳುತ್ತಿರುವ ಶಾಲೆಗಳ ಸಂತೆಮೊಗೇನಹಳ್ಳಿ, ಹೊಡಿಕೆ ಹೊಸಹಳ್ಳಿ, ಕನ್ನಿದೊಡ್ಡಿ, ಅಮ್ಮಳ್ಳಿದೊಡ್ಡಿ, ಸುಣ್ಣಘಟ್ಟ, ಎಸ್.ಎಂ. ದೊಡ್ಡಿ ಹಾಗೂ ಚನ್ನಂಕೇಗೌಡನದೊಡ್ಡಿ ಗ್ರಾಮಸ್ಥರು, ನಮ್ಮೂರ ಶಾಲೆ ಮುಚ್ಚಲು ನಾವು ಅವಕಾಶ ನೀಡುವುದಿಲ್ಲ ಎಂದು ಘೋಷಣೆಗಳನ್ನು ಕೂಗಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಸಂಘದ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರದ ಯೋಜನೆಯ ಅನುಷ್ಠಾನಕ್ಕೆ ಮೊನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಸಭೆ ಬಳಿಕ ಮಾತನಾಡಿರುವ ಸಚಿವ ಎಚ್.ಕೆ. ಪಾಟೀಲ ಅವರು ಯೋಜನೆ ಜಾರಿಗಾಗಿ ಕೆಲವು ಸರ್ಕಾರಿ ಶಾಲೆಗಳನ್ನು ಮುಚ್ಚಬೇಕಾಗುತ್ತದೆ ಎಂದಿದ್ದಾರೆ ಎಂದರು.

ಸರ್ಕಾರದ ಅ. 15ರ ಆದೇಶದ ಪ್ರಕಾರ, ಈ ಶಾಲೆಗಳು ವ್ಯವಸ್ಥೆಯು ಹೊರಗುತ್ತಿಗೆಯಿಂದ ನಡೆಯಬೇಕು ಹಾಗೂ ತಮ್ಮ ಆದಾಯವನ್ನು ತಾವೇ ಸೃಷ್ಟಿಸಿಕೊಳ್ಳಬೇಕು ಎಂದಿದೆ. ಮಂಡ್ಯದಲ್ಲಿರುವ ಕೆಪಿಎಸ್ ಶಾಲೆಗೆ ಬರುವ ಮಕ್ಕಳು ತಿಂಗಳಿಗೆ ರೂ. 4,800 ಕೊಟ್ಟು



ಉದಯವಾಹಿನಿ ಚಿತ್ರ

ಬಸ್‌ಗಳಲ್ಲಿ ಶಾಲೆಗೆ ಬರಬೇಕು. ಹೊಂಗನೂರಿನ ಶಾಲೆಗೂ ಇದೇ ಗತಿ ಬರಲಿದೆ. ಸರ್ಕಾರಿ ಶಾಲೆಗಳು ನಮ್ಮ ಹಕ್ಕು. ಸರ್ಕಾರ ಅವುಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿದರು.

ಸಂತೆ ಮೊಗೆನಹಳ್ಳಿಯ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಮೂರು ತಿಂಗಳಿಂದ ನಮ್ಮೂರಿಗೆ ಶಾಲೆ ಮುಚ್ಚಬೇಕೆಂಬ ಆದೇಶವನ್ನು ಶಿಕ್ಷಣ ಇಲಾಖೆ ಕಳಿಸಿದೆ. ಇದುವರೆಗೆ ನಮ್ಮೂರಿಗೆ ಬಾರದ ಅಧಿಕಾರಿಗಳು ತಿಂಗಳ ಹಿಂದೆ ಬಂದು. ನಿಮ್ಮ ಮಕ್ಕಳನ್ನು ಹೊಂಗನೂರಿನ ಮ್ಯಾಗ್ನೆಟ್ ಶಾಲೆಗೆ ಕಳಿಸಬೇಕು ಎಂದು ಒತ್ತಾಯಿಸಿದರುಎಂದು ಹೇಳಿದರು. ಸಮುದಾಯದತ್ತ ಶಾಲೆ ಎಂದು ಹೇಳಿ, ಇದೀಗ ಸಮುದಾಯವನ್ನು ಶಿಕ್ಷಣದಿಂದಲೇ ದೂರ ಮಾಡಲು ಹೊರಟಿದ್ದಾರೆ. ಹೊಂಗನೂರಿಗೆ ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ, ಪೋಷಕರೇ ರೂ. 750 ಕೊಟ್ಟು ಮಕ್ಕಳನ್ನು ಬಸ್‌ಗಳಲ್ಲಿ ಕಳಿಸುತ್ತಿದ್ದಾರೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಎಂದು ಹೇಳಿ, ಅದೇ ಮಕ್ಕಳಿಂದ ಶಿಕ್ಷಣ ಕಸಿಯುತ್ತಿದ್ದಾರೆ. ನಮಗೆ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಬೇಡ. ಏನೇ ಆದರೂ ನಮ್ಮೂರ ಸರ್ಕಾರಿ ಶಾಲೆ ಮುಚ್ಚಲು ನಾವು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

> ರೈತರು ಕಾರ್ಮಿಕರು ದಿನಗೂಲಿ ಮಾಡುವವರು ಕಷ್ಟಪಟ್ಟು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಶಾಲೆಗಳನ್ನು ಮುಚ್ಚಿದರೆ ಆ ಮಕ್ಕಳ ಗತಿ ಏನು ಸರ್ಕಾರಿ ಶಾಲೆ ಮುಚ್ಚಲು ಬಿಡಬಾರದು
> – ಎಚ್. ಪಿ. ಶಿವಪ್ರಕಾಶ್
> ಐಐಕೆಕೆಎಂಎಸ್ ಮುಖಂಡ

ಈ ಸಭೆಯ ಅಧ್ಯಕ್ಷತೆಯನ್ನು ಅಪೂರ್ವ, ರಾಜ್ಯ ಉಪಾಧ್ಯಕ್ಷರು ವಹಿಸಿಕೊಂಡಿದ್ದರು. ಬೆಂಗಳೂರು ದಕ್ಷಿಣ ಎಲ್ಲಾ ಸಂಚಾಲಕರಾದ, ರೋಹಿತ್, ಪ್ರಾಸ್ತಾವಿಕ ನುಡಿಯನ್ನು ಮಂಡಿಸಿದರು. ಬಹಿರಂಗ ಪ್ರತಿಭಟನಾ ಸಭೆಯಲ್ಲಿ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಅಶ್ವಿನಿ. ಕೆ. ಎಸ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳಾದ ಕಲ್ಯಾಣ್ ಕುಮಾರ್. ವಿ ಉಪಸ್ಥಿತರಿದ್ದರು. ಹಲವು ರೈತ ಕನ್ನಡಪರ ಹಾಗೂ ಎಸ್ ಟಿ ಎಂ ಸಿ ಸಂಘಟನೆಗಳು ಬೆಂಬಲಿಸಿದರು. ಪ್ರತಿಭಟನಾ ಸಭೆ ನಂತರ ಸಂಘಟನೆಯ ಪ್ರಮುಖರು ರಾಮನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಬಂದು ಯಶವಂತ್ ವಿ. ಗುರುಕರ್ ಅವರಿಗೆ ಮನವಿ ಸಲ್ಲಿಸಿದರು. ಹೊಂಗನೂರಿನ ಕೆಪಿಎಸ್ ಮ್ಯಾಗ್ನೆಟ್ ಶಾಲೆಯಿಂದಾಗಿ, ಸುತ್ತಲಿನ ಶಾಲೆಗಳು ಶಾಶ್ವತವಾಗಿ ಮುಚ್ಚಲಿದ್ದು ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಹಾಗಾಗಿ, ಈ ಯೋಜನೆಗೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿದರು.

### ಸರ್ಕಾರಿ ಶಾಲೆ ಉಳಿಸಬೇಕು

**ಎಲ್ಲಾ ಸಾರ್ವಜನಿಕ ವಲಯಗಳನ್ನು ಖಾಸಗೀಕರಣ ಮಾಡಿರುವ ಸರ್ಕಾರ ಇದೀಗ ಗ್ರಾಮಗಳ ಮಟ್ಟದಲ್ಲಿ ಉಳಿದುಕೊಂಡಿರುವ ಶಾಲೆಗಳಿಗೂ ಬೀಗ ಹಾಕಲು ಮುಂದಾಗಿದೆ. ಈ ಮ್ಯಾಗ್ನೆಟ್ ಶಾಲೆಗಳು ಅಸ್ತಿತ್ವಕ್ಕೆ ಬಂದರೆ ಮುಂದೆ ಬಡವರ ಮಕ್ಕಳಿಗೆ ಶಿಕ್ಷಣವು ಕನಸಿನ ಮಾತಾಗುತ್ತದೆ. ಕಳೆದ 2 ತಿಂಗಳ ಹಿಂದೆ ಎಐಡಿಎಸ್‌ಒ ಸಂಘಟನೆಯಿಂದ ಸಾರ್ವಜನಿಕ ಶಿಕ್ಷಣ ಉಳಿಸಲೆಂದೇ 50 ಲಕ್ಷ ಸಹಿ ಸಂಗ್ರಹಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆಗ ಒಂದೇ ಒಂದು ಶಾಲೆಯನ್ನು ಮುಚ್ಚುವುದಿಲ್ಲ ಎಂದು ಮಾತು ಕೊಟ್ಟಿದ್ದ ಸರ್ಕಾರ ಈಗ ಯೋಜನೆಯನ್ನು ತಂದಿದೆ. ಸರ್ಕಾರಿ ಶಾಲೆಗಳಿಗೆ ಮಾರಕವಾಗಿರುವ ಈ ಯೋಜನೆಯನ್ನು ಸರ್ಕಾರ ರದ್ದುಪಡಿಸಿ ಶಾಲೆಗಳನ್ನು ಉಳಿಸಬೇಕು' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಎಂ. ಉಮಾದೇವಿ ಆಗ್ರಹಿಸಿದರು.**

## ಮಿನಿ ನ್ಯೂಸ್

### ಕಾಡಾನೆ ದಾಳಿ ರಾಗಿ ಮೆದೆ ನಾಶ

• **ಉದಯವಾಹಿನಿ, ಕನಕಪುರ**

ಕೋಡಿಹಳ್ಳಿ ಹೋಬಳಿ ಚಾಮುಂಡಿಪುರ ಗ್ರಾಮದಲ್ಲಿ ಕಾಡಾನೆಗಳ ಗುಂಪು ರಾತ್ರಿ ದಾಳಿ ನಡೆಸಿ, ಕಟಾವಿಗೆ ಬಂದಿದ್ದ ರಾಗಿ ಬೆಳೆಯನ್ನು ನಾಶಪಡಿಸಿದೆ. ಈ ಘಟನೆಯಿಂದ ಹಲವು ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ. ನಷ್ಟಕ್ಕೆ ಒಳಗಾದ ರೈತ ಗುಂಡ ನಾಯ್ಕ, ಕುಟುಂಬದವರೆಲ್ಲ ಕಷ್ಟಪಟ್ಟು ಬೆಳೆದ ರಾಗಿಯನ್ನು ಒಂದೇ ರಾತ್ರಿಯಲ್ಲಿ ಆನೆಗಳು ನಾಶ ಮಾಡಿವೆ. ಬೆಳೆ ಬೆಳೆಯುವಾಗ ಮಾತ್ರ ಅರಣ್ಯ ಇಲಾಖೆಯವರು ಕಾವಲು ನಿಂತಿದ್ದರು. ಕಟಾವಿನ ಸಮಯದಲ್ಲಿ ಈ ಕಾವಲು ಇಲ್ಲದ್ದರಿಂದ ಈ ನಷ್ಟ ಸಂಭವಿಸಿದೆ. ಸರ್ಕಾರದಿಂದ ಸಿಗುವ ಪರಿಹಾರ ನಷ್ಟಕ್ಕೆ ಸಾಕಾಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಪರಿಹಾರ ನೀಡುವ ಭರವಸೆ ನೀಡಿದರು.

# ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ: ಮಹಾನ್ ನಾಯಕನ ಸ್ಮರಣೆ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 69 ನೇ ಮಹಾಪರಿನಿಬ್ಬಾಣ ದಿನವನ್ನ ಆಚರಣೆ ಮಾಡಲಾಯಿತು.



ಉದಯವಾಹಿನಿ ಚಿತ್ರ

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ತಹಶೀಲ್ದಾರ್ ತನ್ಮಯ್, ಇಒ ಷಣ್ಮುಗಂ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್, ಸಿಒ ಸರವಣ, ಬಿಇಒ ಸ್ವಾಮಿ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಮಾತನಾಡಿದ ತಹಶೀಲ್ದಾರ್ ತನ್ಮಯ್ ಬಾಬಾ ಸಾಹೇಬರ ಪ್ರಬುದ್ಧತೆಯನ್ನ ಮೈಗೂಡಿಸಿಕೊಂಡು ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ಪ್ರತಿಯೊಬ್ಬರು ನಡೆಯಬೇಕು, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸವಲತ್ತು ಸಿಗಲು ತಮ್ಮದೇ ಆದ ಕೊಡುಗೆಗಳನ್ನ ನೀಡಿದ್ದಾರೆ, ಸಮಾಜದ ಏಳ್ಗೆಗಾಗಿ ತನುಮನ ಧಾರೆಯೆರದ ಮಹಾನ್ ಮೇರು ನಾಯಕ ಬಾಬಾ ಸಾಹೇಬರ ಸ್ಮರಣೆ ಮಾಡುತ್ತ ಹೋದಂತೆ ಸಮಯವೇ ಸಾಲುವುದಿಲ್ಲ, ವೈಜ್ಞಾನಿಕ ಮನೋಭಾವನೆ ಬಿತ್ತುವ ಜೊತೆಗೆ ಕತ್ತಲೆಯ ಬಾಳಲ್ಲಿ ಬೆಳಕು ಚೆಲ್ಲಿದ ಮಹಾನ್ ನಾಯಕ ಅಂಬೇಡ್ಕರ್ ಅವರಿಗೆ ಎಲ್ಲರೂ ಚಿರಋಣಿಗಳಾಗಿರಬೇಕು ಎಂದರು. ಬಾಬಾ ಸಾಹೇಬರ ಚಿಂತನೆ ಹಾಗೂ ಆದರ್ಶಗಳನ್ನ ಮುಖ್ಯ ಭಾಷಣಗಾರ್ತಿ ಸರೋಜ ಬೋಧಿಸಿದರು. ಈ ಸಂಧರ್ಭದಲ್ಲಿ ಇಒ ಷಣ್ಮುಗಂ, ಬಿಇಒ ಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಸರವಣ ಪುರಸಭಾ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮಾಜಿ ಸದಸ್ಯ ರಾಜ್ ಗೋಪಾಲ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್, ಮಾನವ ಬಂದುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ, ಹಾಗೂ ತಾ.ಅಧ್ಯಕ್ಷ ಆರ್.ಸೋಮಣ್ಣ, ಮುತ್ತಣ್ಣ ಹುಲಸಗುಂದಿ, ದೇವರಾಜು, ರವಿ ಸೋಮಹಳ್ಳಿ ಸೇರಿದಂತೆ ಮುಖಂಡರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಧಾರ್ಮಿಕ ಕ್ಷೇತ್ರದ ಅಭಿವೃದ್ಧಿಗೆ ರೂ.5 ಕೋಟಿ: ಶಾಸಕ

• **ಉದಯವಾಹಿನಿ, ಶ್ರೀನಿವಾಸಪುರ**

ಈಗಾಗಲೇ ನನ್ನ ಅನುದಾನದಲ್ಲಿ ರೂ. 5 ಕೋಟಿಯನ್ನು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ಕೊಟ್ಟಿದ್ದೇನೆ ಎಂದು ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ತಿಳಿಸಿದರು.ಪಟ್ಟಣ ಹೊರವಲಯದ ಹೊಗಳಗೆರ ತೋಟಗಾರಿಕೆ ಇಲಾಖೆಯ ವಿಶ್ವವಿದ್ಯಾನಿಲಯದಲ್ಲಿ ನಡೆದ ತಾಲ್ಲೂಕು ಮಟ್ಟದ ಅಧಿಕಾರಿಗಳ ಕೆಡಿಪಿ ಸಭೆಯಲ್ಲಿ ಮಾತನಾಡಿದರು. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ರೂ 100 ಕೋಟಿ ಅನುದಾನ ಬರಬೇಕಿದ್ದು, ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇನೆ. ತೀರ್ಪು ಬಂದ ನಂತರ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕ್ಷೇತ್ರಕ್ಕೆ ಸಂಬಂದಿದಂತೆ ಎಲ್ಲಾ ಬಹುತೇಕ ಗ್ರಾಮಗಳಲ್ಲಿ ಹೈಮಾಸ್ಟ್ ಲೈಟ್‌ಗಳನ್ನು ಅಳವಡಿಸಲಾಗಿದೆ.

ಕೋಲಾರ ತಾಲ್ಲೂಕು ಪಂಚಾಯಿತಿಗೆ ಸಂಬಂಧಿಸಿದಂತೆ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಕಾರ್ಯಗಳು ನಡೆಸಲು ಬೇಕಾಗಿರುವುದನ್ನ


ಉದಯವಾಹಿನಿ ಚಿತ್ರ

ಇಒ ಮಂಜುನಾಥ್ ಗಮನಿಸಬೇಕು ಎಂದರು.

ಕೆಲ ಹಳ್ಳಿಗಳಲ್ಲಿನ ರಸ್ತೆಗಳ ಬದಿಯಲ್ಲಿನ ಗಿಡಗಳು ಬೆಳೆದಿದ್ದು ಸ್ವಚ್ಛ ಮಾಡಬೇಕು. ಯಾವ ಪಂಚಾಯಿತಿಯಲ್ಲಿಯಾದರೂ ಶುದ್ಧ ನೀರಿನ ಘಟಕಗಳ ಕೆಟ್ಟು ನಿಂತಿದ್ದರೆ, ಹೈಮಾಸ್ಟ್ ಲೈಟ್‌ಗಳು ಕೆಟ್ಟುಹೋಗಿದ್ದರೆ ಸ್ಥಳೀಯ ಪಿಡಿಒಗಳು ಸರಿಪಡಿಸಬೇಕು ಎಂದು ಸೂಚನೆ ನೀಡಿದರು. ಇಲಾಖೆಯ ಅಧಿಕಾರಿಗಳು ಯಾವುದೇ ಕಾರಣಕ್ಕೂ ಸಾರ್ವಜನಿಕರನ್ನು ಕಚೇರಿಗೆ ಅಲೆದಾಡಿಸಬೇಡಿ, ತಕ್ಷಣ ಸ್ಪಂದಿಸಿ, ಹಾಗೂ ಅವರ ಕೆಲಸ ಕಾರ್ಯಗಳನ್ನು ಮಾಡಿಸಿಕೊಡಿ ಎಂದರು.

# ಧರ್ಮ ಪ್ರಭಾವದಿಂದ ಬುಡಕಟ್ಟು ಸಂಸ್ಕೃತಿ ನಾಶ: ಸಿ.ಜಿ.ಲಕ್ಷ್ಮೀಪತಿ

• **ಉದಯವಾಹಿನಿ, ತುಮಕೂರು**

ಧರ್ಮಗಳ ಪ್ರಭಾವದಿಂದ ಬುಡಕಟ್ಟು ಜನಾಂಗದ ಸಾಂಪ್ರದಾಯಿಕ ಆಚರಣೆಗಳು ಕ್ಷೀಣಿಸುತ್ತಿವೆ. ಆಹಾರ ಪದ್ಧತಿ, ದೈವಾರಾಧನೆ ನಶಿಸುತ್ತಿದೆ ಎಂದು ಬೆಂಗಳೂರು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಿ.ಜಿ.ಲಕ್ಷ್ಮೀಪತಿ ಹೇಳಿದರು. ವಿಶ್ವವಿದ್ಯಾಲಯದಲ್ಲಿ ಜುಂಜಪ್ಪ ಅಧ್ಯಯನ ಪೀಠ, ಕಲಾ ಕಾಲೇಜಿನ ಕನ್ನಡ ವಿಭಾಗದಿಂದ ಆಯೋಜಿಸಿದ್ದ ಮಧ್ಯ ಕರ್ನಾಟಕದ ಬುಡಕಟ್ಟುಗಳ ಸಾಂಸ್ಕೃತಿಕ ಅನನ್ಯತೆ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಜ್ಯದಲ್ಲಿ 45 ಬುಡಕಟ್ಟುಗಳಿದ್ದು, ಸಮುದಾಯದ ಜನರು ದಶಕಗಳಿಂದ ತಮ್ಮದೇ ಪೂಜಾರಿಯನ್ನು ಹೊಂದಿದ್ದರು.

ಆಧ್ಯಾತ್ಮಿಕತೆ ಒಪ್ಪುತ್ತಿರಲಿಲ್ಲ. ಜನಾಂಗದಲ್ಲಿ ಯಾವುದೇ ಒಂದು ಧರ್ಮ ಪಾಲಿಸುವುದು ವಿರುದ್ಧವಾಗಿದೆ. ಬುಡಕಟ್ಟು ಕಲೆ, ಹಾಗೂ ಆಚರಣೆ ದೇಶದ ಕಲೆ, ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ ನಾವು ನಮ್ಮ ಸಂಸ್ಕೃತಿಗೆ ಮರಳಬೇಕು. ಬುಡಕಟ್ಟು ಜನಾಂಗದವರು ಕೀಳರಿಮೆ ಬಿಟ್ಟು ಬದುಕು ಕಟ್ಟಿಕೊಳ್ಳಬೇಕು. ವೈಶಿಷ್ಟ್ಯತೆ ಉಳಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು. ವಿ.ವಿ ಪ್ರಾಧ್ಯಾಪಕ ಬಿ.ಕರಿಯಣ್ಣ, ಸುಧಾರಣೆಯ ಹೆಸರಲ್ಲಿ ಸಂಸ್ಕೃತಿ ಹಾಳು ಮಾಡಿಕೊಳ್ಳುತ್ತಿದ್ದೇವೆ.

ಜಾತಿ ಗಣತಿಯಲ್ಲಿ ಬುಡಕಟ್ಟು ಜನಾಂಗವನ್ನು ಬೇರೆ ಜಾತಿಗೆ ಸೇರಿಸಿ, ತಮ್ಮ ಮೂಲ ಹುಡುಕಿಕೊಂಡು ಹೋಗಬೇಕಾದ ವಾತಾವರಣ ಸೃಷ್ಟಿಸಿದ್ದಾರೆ ಎಂದರು. ಕಲಾ ಕಾಲೇಜಿನ ಪ್ರಾಂಶುಪಾಲರಾದ ಜಿ.ದಾಕ್ಷಾಯಿಣಿ, ಜುಂಜಪ್ಪ ಅಧ್ಯಯನ ಪೀಠದ ಸಂಯೋಜಕ ಎಸ್.ಶಿವಣ್ಣ ಬೆಳವಾಡಿ, ಕನ್ನಡ ವಿಭಾಗದ ಮುಖ್ಯಸ್ಥೆ ಎಚ್.ಆರ್.ರೇಣುಕಾ ಇತರರು ಉಪಸ್ಥಿತರಿದ್ದರು.

# 21 ರಂದು ಪಲ್ಸ್ ಪೋಲಿಯೊ ಅಭಿಯಾನ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೋಲಾರ**

ಇದೇ ಡಿ.21 ರಂದು ಜಿಲ್ಲೆಯಾದ್ಯಂತ 0 ರಿಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ತಿಳಿಸಿದರು.ಜಿಲ್ಲಾಡಳಿತ ಭವನದಲ್ಲಿ ಕಚೇಯಲ್ಲಿ 2025ನೇ ಸಾಲಿನ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಜಿಲ್ಲಾ ಮಟ್ಟದ ಟಾಸ್ಕ್ ಪೋರ್ಸ್ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಲಸಿಕಾ ಕಾರ್ಯಕ್ರಮದಲ್ಲಿ ಮಕ್ಕಳ ಭಾಗವಹಿಸುವಿಕೆ ಬಹಳ ಮುಖ್ಯವಾಗಿರುವುದರಿಂದ ಎಲ್ಲರೂ 0 ರಿಂದ 5 ವರ್ಷದೊಳಗಿನ ತಮ್ಮ ಮಕ್ಕಳಿಗೆ 21 ರಂದು ಎಲ್ಲಾ ತಾಲ್ಲೂಕುಗಳಲ್ಲಿನ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಹಾಕಿಸಬೇಕು ಎಂದು ಮನವಿ ಮಾಡಿದರು.

ಅಲ್ಲದೇ ವಲಸೆ, ಕಟ್ಟಡ ಕಾರ್ಮಿಕರು, ವ್ಯಾಪಾರಿಗಳು ಸಹ ಮೊಬೈಲ್ ಬೂತ್ ಕೇಂದ್ರಗಳಲ್ಲಿ ಮಕ್ಕಳಿಗೆ ಲಸಿಕೆ ಹಾಕಿಸಬಹುದಾಗಿದೆ. 21 ರಂದು ಬೂತ್‌ಗಳಲ್ಲಿ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿ.22 ರಿಂದ 24ರ ವರೆಗೆ ಮನೆಮನೆಗೆ ತೆರಳಿ ಬಿಟ್ಟು ಹೋದ ಮಕ್ಕಳಿಗೆ ಲಸಿಕೆ ಹಾಕಲಾಗುವುದು ಎಂದರು. ಮಹಿಳಾ ಮತ್ತು ಮಕ್ಕಳ, ನಗರಾಭಿವೃದ್ಧಿ, ಕಾರ್ಮಿಕ, ಶಿಕ್ಷಣ, ವೈದ್ಯಕೀಯ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಾರಿಗೆ ಹೀಗೆ ಎಲ್ಲಾ ಇಲಾಖೆಗಳು ಸಮನ್ವಯ ಸಾಧಿಸಿ ಪೋಲಿಯೊ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಜಿಲ್ಲೆಯಲ್ಲಿ ದಡಾರ ಹಾಗೂ ರುಬೆಲ್ಲಾ ನಿಯಂತ್ರಣಕ್ಕಾಗಿ ಸಹ ಲಸಿಕೆ ನೀಡಲಾಗುತ್ತಿದೆ.

2025ರ ಏಪ್ರಿಲ್ ನಿಂದ ಅಕ್ಟೋಬರ್ ವರೆಗೆ ಈ ಜಿಲ್ಲೆಯಲ್ಲಿನ ಲಸಿಕಾ ಅಭಿಯಾನದಲ್ಲಿ 97.5 ರಷ್ಟು ಸಾಧನೆಯಾಗಿದೆ ಎಂದು ಹೇಳಿದರು. ದೇಶ ಪೋಲಿಯೊ ಮುಕ್ತವಾಗಿದ್ದರೂ ಮುಂದೆ ಕೂಡ ಪ್ರಕರಣಗಳು ಮರುಕಳಿಸದಂತೆ ಮುಂಜಾಗ್ರತಾ ಕ್ರಮವಾಗಿ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

> **ಲಸಿಕಾ ಕಾರ್ಯಕ್ರಮ ಬಗ್ಗೆ ಮಾಹಿತಿ ನೀಡಿದ ಆರೋಗ್ಯ ಇಲಾಖಾಧಿಕಾರಿಗಳು, ಜಿಲ್ಲೆಯಲ್ಲಿ ಕಳೆದ ವರ್ಷ ಲಸಿಕಾ ಅಭಿಯಾನದಲ್ಲಿ ಶೇ 101.9 ಸಾಧನೆ ಮಾಡಲಾಗಿದೆ. 2025ನೇ ಸಾಲಿನಲ್ಲಿ 5ವರ್ಷದೊಳಗಿನ 1,64,991 ಮಕ್ಕಳಿದ್ದು, ಇವರಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿಯೇ ಜಿಲ್ಲೆಯಲ್ಲಿ 749 ಬೂತ್‌ಗಳು, 37 ಟ್ರಾನ್ಸಿಟ್ ಕೇಂದ್ರಗಳಿದ್ದು, 3,064 ಲಸಿಕೆದಾರರು ಹಾಗೂ 164 ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದರು. ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ, ರೈಲ್ವೆ ಸ್ಟೇಷನ್‌ಗಳಲ್ಲಿ, ಟ್ರಾನ್ಸಿಟ್ ತಂಡಗಳನ್ನು ರಚಿಸಿ ಅಲ್ಲಿಯೂ ಲಸಿಕೆ ನೀಡಲಾಗುವುದೆಂದು ತಿಳಿಸಿದರು.**

# ನೆಹರು ಉದ್ಯಾನವನದಲ್ಲಿನ ಟ್ರಾನ್ಸ್ ಪಾರ್ಮರ್ ತೆರವಿಗೆ ಒತ್ತಾಯ

• **ಉದಯವಾಹಿನಿ, ಗುಂಡ್ಲುಪೇಟೆ**

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿನ ನೆಹರು ಉದ್ಯಾನವನದಲ್ಲಿ ಚೆಸ್ಕಾಂ ನವರು ಅಳವಡಿಸುತ್ತಿರುವ ವಿದ್ಯುತ್ ಟ್ರಾನ್ಸ್ ಪಾರ್ಮರ್ ತೆರವುಗೊಳಿಸಿ ಸಾರ್ವಜನಿಕರ ಹಿತಕಾಯುವಂತೆ ಒತ್ತಾಯಿಸಿ ವಕೀಲ ರವಿ.ಡಿ. ಪುರಸಭಾ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಸದಾ ಜನಜಂಗುಳಿಯಿಂದ ಕೂಡಿರುವ ಹಳೆ ಬಸ್ ನಿಲ್ದಾಣದಲ್ಲಿನ ನೆಹರು ಉದ್ಯಾನವನದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದವರು ವಿದ್ಯುತ್ ಪರಿವರ್ತಕವನ್ನ ಅಳವಡಿಸಿರುವುದು ಸರಿಯಲ್ಲ, ಪ್ರತಿನಿತ್ಯ ಸಾವಿರಾರು ಮಂದಿ ಸಂಚರಿಸುವ ಮಾರ್ಗದಲ್ಲಿ ಅವೈಜ್ಞಾನಿಕ


ಉದಯವಾಹಿನಿ ಚಿತ್ರ

ಕಾರ್ಯಕ್ಕೆ ಮುಂದಾಗಿರುವುದು ಅಪಾಯಕ್ಕೆ ಎಡೆಮಾಡಿಕೊಟ್ಟಂತಾಗಿದೆ ಎಂದು ವಕೀಲ ರವಿ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಬಸ್ ನಿಲ್ದಾಣದ ಆಸುಪಾಸಿನಲ್ಲೇ ಅಂಗಡಿ ಮುಂಗಟ್ಟುಗಳು ಹಾಗೂ ಇತರೆ ವ್ಯಾಪಾರಸ್ಥರಿದ್ದು ಹೈ ವೋಲ್ಟೇಜ್ ಮಟ್ಟವನ್ನ ಹೆಚ್ಚಿಸುವ ಪರಿವರ್ತಕ ಅಳವಡಿಸಿರುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಸರಿತಕ್ಕದ್ದಲ್ಲ ಆದುದರಿಂದ ಚೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಸ್ಥಳಾಂತರ ಮಾಡುವಂತೆ ಆಗ್ರಹಿಸಿದ್ದಾರೆ.

> **ನೆಹರು ಪಾರ್ಕಿನಲ್ಲಿ ಈ ಹಿಂದೆಯೂ ಸಹ ಟ್ರಾನ್ ಪಾರ್ಮರನ್ನ ಅಳವಡಿಸಲಾಗಿತ್ತು ಆದರೆ ಸಾರ್ವಜನಿಕರ ಹಿತಾದೃಷ್ಟಿಯಿಂದ ಸೂಕ್ತ ಸ್ಥಳಕೆ ಸ್ಥಳಾಂತರ ಮಾಡುವಂತೆ ಚೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದು.**

# ಡಿಪಿಆರ್ ತಯಾರಿಸಲು ವಿಳಂಬ; ತರಾಟೆ

• **ಉದಯವಾಹಿನಿ, ಮೈಸೂರು**

ಆಶ್ರಯ ವಸತಿ ಯೋಜನೆಯಡಿ ಗುಂಪು ಮನೆಗಳನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ವಿಳಂಬ ಮಾಡಿರುವ ಪಾಲಿಕೆ ಅಧಿಕಾರಿಗಳನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ನಡೆದ ಆಶ್ರಯ ವಸತಿ ಸಮಿತಿ ಸಭೆಯಲ್ಲಿ ತರಾಟೆಗೆ ತೆಗೆದುಕೊಂಡರು. ತಾಲ್ಲೂಕಿನ ಹಂಚ್ಯಾ ಗ್ರಾಮದ ಸ.ನಂ. 65ರ 24.09 ಎಕರೆ ಜಮೀನಿನ ಪೈಕಿ 23 ಎಕರೆ ಜಮೀನನ್ನು ಕ್ಷೇತ್ರದ ಆಶ್ರಯ ವಸತಿ ಯೋಜನೆಗೆ ಕಾಯ್ದಿರಿಸಲಾಗಿದೆ. ಅಲ್ಲಿ 1,704 ಗುಂಪು ಮನೆಗಳನ್ನು ನಿರ್ಮಿಸುವ ಸಂಬಂಧ 2024ರ ಅ.28ರಂದು ನಡೆದ ಆಶ್ರಯ ವಸತಿ ಸಮಿತಿ ಸಭೆಯಲ್ಲಿ ಪರಿಷ್ಕೃತ ಡಿ.ಪಿ.ಆರ್. ಸಿದ್ದಪಡಿಸಲು ತಿಳಿಸಲಾಗಿತ್ತು. ಆದರೆ, 13 ತಿಂಗಳಾದರೂ ಕ್ರಮ ವಹಿಸದಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತಗೆದುಕೊಂಡರು. 'ಈ ತಿಂಗಳ ಅಂತ್ಯದೊಳಗೆ ಡಿ.ಪಿ.ಆರ್. ಪೂರ್ಣಗೊಳಿಸಿ, ಸರ್ಕಾರಕ್ಕೆ ಪ್ರಸ್ತಾವ


ಉದಯವಾಹಿನಿ ಚಿತ್ರ


ಸಲ್ಲಿಸಬೇಕು' ಎಂದು ತಾಕೀತು ಮಾಡಿದರು. 'ನಿಗದಿಪಡಿಸಿರುವ ದಿನಾಂಕದೊಳಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಅಗತ್ಯ ಕ್ರಮ ವಹಿಸಲಾಗುವುದು' ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ತಿಳಿಸಿದರು.

**ಕೂಡಲೇ ಹಸ್ತಾಂತರಿಸಿ:** ಬಂಡೀಪಾಳ್ಯ ಸರ್ವೆ ನಂಬರ್ 7ರಲ್ಲಿ ಲಭ್ಯವಿರುವ 6 ಎಕರೆ ಸರ್ಕಾರಿ ಜಮೀನನ್ನು ಆಶ್ರಯ ವಸತಿ ಯೋಜನೆಯಡಿ ಮಂಜೂರು ಮಾಡಿ ಹಸ್ತಾಂತರಿಸಲು ವಿಳಂಬವಾಗುತ್ತಿರುವ ಬಗ್ಗೆ ತಹಶೀಲ್ದಾರ್ ಅವರನ್ನು ಸ್ಪಷ್ಟನೆ ಕೇಳಿದ ಅವರು, ವಿಳಂಬಕ್ಕೆ ಆಸ್ಪದ ನೀಡದೆ ಕೂಡಲೇ ಹಸ್ತಾಂತಕ್ಕೆ ಕ್ರಮ ವಹಿಸಬೇಕು ಎಂದು ತಹಶೀಲ್ದಾರ್ ಮಹೇಶ್ ಕುಮಾರ್ ಅವರಿಗೆ ಸೂಚಿಸಿದರು.

### ಅಸಮಾಧಾನ

**ಬೋಗಾದಿ ಆಶ್ರಯ ಬಡಾವಣೆಯಲ್ಲಿ ಹಂಚಿಕೆಯಾಗಿರುವ ಮನೆ, ನಿವೇಶನವನ್ನು ಮುಡಾದಿಂದ ನ್ಯೂ ಕಾಂತರಾಜು ಅರಸು ರಸ್ತೆ ವಿಸ್ತರಣೆಗಾಗಿ 33 ಮನೆ, ನಿವೇಶನವನ್ನು ಬಳಸಿಕೊಂಡಿದ್ದು, 20 ವರ್ಷಗಳಿಂದ ಪ್ರಾಧಿಕಾರದಿಂದ ಹಂಚಿಕೆ ಮಾಡದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಶೀಘ್ರ ಇತ್ಯರ್ಥಪಡಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ಎಂಡಿಎ ಕಾರ್ಯದರ್ಶಿಗೆ ಸೂಚಿಸಿದರು.**

# ಎಚ್.ಎಂ.ಗಂಗಾಧರಯ್ಯ ಅವರ ಸ್ಮರಣೋತ್ಸವ ಕಾರ್ಯಕ್ರಮ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ತುಮಕೂರು**

ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಎಚ್.ಎಂ.ಗಂಗಾಧರಯ್ಯ ಅವರ ಸ್ಮರಣೋತ್ಸವ ಕಾರ್ಯಕ್ರಮ ನಗರ ಹೊರವಲಯದ ಗೊಲ್ಲಹಳ್ಳಿಯಲ್ಲಿ ನೆರವೇರಿತು. ಬೌದ್ಧ ಬಿಕ್ಕು ಬಂತೇಜಿ ಮಹಾಸಂಘದ ಸಮ್ಮುಖದಲ್ಲಿ ವಿಜಯಪುರದ ಬೌದ್ಧ ಬಿಕ್ಕುಗಳು ಪ್ರಾರ್ಥನೆ ಸಲ್ಲಿಸಿದರು. ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಜಿ.ಪರಮೇಶ್ವರ, ಆಡಳಿತ ಮಂಡಳಿ ಟ್ರಸ್ಟಿ ಕನ್ನಿಕಾ ಪರಮೇಶ್ವರ ಅವರು ಎಚ್.ಎಂ.ಗಂಗಾಧರಯ್ಯ, ಪತ್ನಿ ಗಂಗಮಾಳಮ್ಮ, ಪುತ್ರ ಜಿ.ಶಿವಪ್ರಸಾದ್ ಅವರ ಸಮಾಧಿಗಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ನೆರವೇರಿಸಿದರು. ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎಚ್.ಕೆ.ಕುಮಾರಸ್ವಾಮಿ, ಆಡಳಿತಾಧಿಕಾರಿ ನಂಜುಂಡಪ್ಪ, ಸಾಹೇ ವಿ.ವಿ ಕುಲಪತಿ ಕೆ.ಬಿ.ಲಿಂಗೇಗೌಡ, ಹಾಗೂ ಸಿದ್ದಾರ್ಥ ವೈದ್ಯಕೀಯ ಕಾಲೇಜಿನ ಉಪಪ್ರಾಂಶುಪಾಲ ಡಾ.ಪ್ರಭಾಕರ್, ಪರೀಕ್ಷಾಂಗ ನಿಯಂತ್ರಕ ಡಾ.ಗುರುಶಂಕರ್, ಎಸ್‌ಎಸ್‌ಐಟಿ ಕಾಲೇಜಿನ ಪ್ರಾಂಶುಪಾಲ ಎಂ.ಎಸ್.ರವಿಪ್ರಕಾಶ್ ಇತರರು ಪಾಲ್ಗೊಂಡಿದ್ದರು.

# ಸ್ವಸ್ಥ ಮೈಸೂರು ನಿರ್ಮಾಣಕ್ಕೆ ಸಂಕಲ್ಪ: ಅಭಿಯಾನಕ್ಕೆ ದಿನೇಶ್ ಗುಂಡೂರಾವ್ ಚಾಲನೆ

## ಡಿಜಿಟಲ್ ಕ್ರಾಂತಿ ಸಾಮಾಜಿಕ ಮಾಧ್ಯಮದಿಂದ ಮಕ್ಕಳು ತೀವ್ರ ತೊಂದರೆಗೆ ಒಳಗಾಗುತ್ತಿದ್ದಾರೆ ಎಂದು ದಿನೇಶ್ ಗುಂಡೂರಾವ್ ಹೇಳಿಕೆ

• **ಉದಯವಾಹಿನಿ, ಮೈಸೂರು**

ಸ್ವಸ್ಥ ಮೈಸೂರು ನಿರ್ಮಾಣಕ್ಕೆ ಸಂಕಲ್ಪ ತೊಟ್ಟ ವಿವಿಧ ಸಂಘ- ಸಂಸ್ಥೆಗಳು, ಈ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರತಿಜ್ಞೆ ಮಾಡಿದವು. ನಗರದ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿಯಾನವನ್ನು ಘೋಷಿಸಲಾಯಿತು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಧ್ಯಕ್ಷತೆಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ಹಾಗೂ ಆರೋಗ್ಯ ವರ್ಲ್ಡ್ ಇಂಡಿಯಾ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಸ್ವಸ್ಥ ಮೈಸೂರು ಅಭಿಯಾನದಲ್ಲಿ ಆರೋಗ್ಯ ಇಲಾಖೆ, ಕಾರ್ಪೊರೇಟ್ ಕಂಪನಿ, ವೈದ್ಯಕೀಯ ಸಂಸ್ಥೆ, ನಾಗರಿಕ ಸಮಾಜದ ಪ್ರತಿನಿಧಿಗಳು ಮತ್ತು ಶಿಕ್ಷಣ ಸಂಸ್ಥೆಯವರು ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಿದರು.

ಅಸಾಂಕ್ರಾಮಿಕ ರೋಗಗಳ ಹೊರೆ ಕಡಿಮೆ ಮಾಡಲು ಶ್ರಮಿಸುವುದಾಗಿ ಪ್ರಕಟಿಸಿದವು. ಆರೋಗ್ಯ ಇಲಾಖೆಯಿಂದ ಸಹಕಾರದ ಒಪ್ಪಂದ ಮಾಡಿಕೊಂಡು, ಅಭಿಯಾನಕ್ಕೆ ಚಾಲನೆ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಮ್ಮ ವಿಚಾರಗಳನ್ನು ಹಂಚಿಕೊಂಡರು.

**ಮಹತ್ತರ ಉದ್ದೇಶದ್ದು:** ಮಹತ್ತರ ಉದ್ದೇಶದ ಅಭಿಯಾನವಿದು. ಆರೋಗ್ಯ ಸ್ಥಿತಿಯನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಎಲ್ಲರೂ ಕೈಜೋಡಿಸುವುದು ಒಳ್ಳೆಯದು. ಎಲ್ಲಾವನ್ನೂ ಸರ್ಕಾರವೇ ಮಾಡಬೇಕೆಂಬ ನಿರೀಕ್ಷೆ ಸರಿಯಲ್ಲ. ಸಾರ್ವಜನಿಕರ ಸಹಭಾಗಿತ್ವವೂ ಇರಬೇಕಾಗುತ್ತದೆ. ಆಗ ನಿಜವಾದ ಸುಧಾರಣೆ ಸಾಧ್ಯವಾಗುತ್ತದೆ'



ಉದಯವಾಹಿನಿ ಚಿತ್ರ

ಎಂದು ಹೇಳಿದರು.

ಸ್ವಸ್ಥ ಮೈಸೂರು ನಿರ್ಮಾಣಕ್ಕೆ ಇಲಾಖೆಯೂ ಕೈಜೋಡಿಸಲಿದ್ದು ಒಪ್ಪಂದ ಮಾಡಿಕೊಳ್ಳಲಾಗಿದೆ. ಸಮಾಜಕ್ಕೆ ಆರೋಗ್ಯ ಬಹಳ ಮುಖ್ಯವಾದುದು. ಮಾನವ ಸಂಪನ್ಮೂಲದ ಸಾಮರ್ಥ್ಯವನ್ನು ಗರಿಷ್ಠ ಬಳಕೆಗೆ ಅವರು ಶಿಕ್ಷಿತರು ಹಾಗೂ ಆರೋಗ್ಯವಂತರು ಆಗಿರಬೇಕಾಗುತ್ತದೆ. ಇದೆಲ್ಲವೂ ಅಭಿವೃದ್ಧಿ ಹೊಂದಿದ ದೇಶಕ್ಕೆ ಅಗತ್ಯವಾಗುತ್ತದೆ. ಇದಕ್ಕಾಗಿ ಉತ್ತಮ ಆರೋಗ್ಯ ಹಾಗೂ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದರು.

**ತಿಳಿದು... ತಿಳಿದೂ...:** ಸಮಸ್ಯೆ ನಮಗೇ ಆಗುವವರೆಗೂ ನಾವು ಎಚ್ಚೆತ್ತುಕೊಳ್ಳುವುದಿಲ್ಲ. ಎಲ್ಲಾವೂ ಗೊತ್ತಿದ್ದೂ ಮಾಡುತ್ತೇವೆ. ನೋಡಿಕೊಂಡರಾಯಿತು ಎಂಬ ಮನೋಭಾವ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಅಭಿವೃದ್ಧಿ, ಹಾಗೂ ಜಿಡಿಪಿ ಹೆಚ್ಚಾದಂತೆ ಅಸಾಂಕ್ರಾಮಿಕ ರೋಗಗಳ ಪ್ರಮಾಣವೂ ಜಾಸ್ತಿಯಾಗುತ್ತಿದೆ.

ಕೇರಳ, ಕರ್ನಾಟಕ, ತೆಲಂಗಾಣ, ತಮಿಳುನಾಡು ಮೊದಲಾದ ರಾಜ್ಯಗಳು ಹೆಚ್ಚು ಆರೋಗ್ಯ ಸಮಸ್ಯೆಗೆ ಸಿಲುಕಿವೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಜಾಗೃತಿ ಮೂಡಿಸಬೇಕಾಗಿದೆ. ನಮ್ಮ ಸರ್ಕಾರದಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಪ್ರಮೋದಾದೇವಿ ಒಡೆಯರ್ ಮಾತನಾಡಿ, ಸ್ವಸ್ಥ ಮೈಸೂರು ಅಭಿಯಾನವು ಆರೋಗ್ಯ ಚಳವಳಿಯಾಗಿದೆ. ಬೆಂಗಳೂರಿನ ನಂತರ ಮೈಸೂರಿನಲ್ಲಿ ನಡೆಸಲಾಗುತ್ತಿದೆ. ಉತ್ತಮ ಆರೋಗ್ಯಕ್ಕೆ ಚಿಕಿತ್ಸೆಯೊಂದೇ ಪರಿಹಾರವಲ್ಲ, ಜಾಗೃತಿ ಬಹಳ ಮುಖ್ಯವಾಗುತ್ತದೆ. ಈ ಕೆಲಸವನ್ನು ಅಭಿಯಾನದಲ್ಲಿ ಮಾಡಲಾಗುವುದು ಎಂದರು.

ಯೋಗ ತರಬೇತುದಾರ ಹಾಗೂ ಅಭಿಯಾನದ ರಾಯಭಾರಿ ಭರತ್ ಶೆಟ್ಟಿ, ಹತ್ತು ವರ್ಷಗಳಲ್ಲಿ ಮೈಸೂರಿನಲ್ಲಿ ಬಹಳಷ್ಟು ವ್ಯತ್ಯಾಸಗಳಾಗಿವೆ.ಹಿಂದಿನ ದಶಕಗಳಂತೆ ಸಮತೋಲನದ ಪರಿಸರ ಈಗ ಇಲ್ಲ. ಜಾಗೃತಿಯ ಕೊರತೆ ಕಾರಣದಿಂದಾಗಿ ಸಮಸ್ಯೆ ಆಗುತ್ತಿದೆ. ಯೋಗವು ದೇಹದ ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದ್ದು, ಅದನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

### ಒಂದು ಕೋಟಿ ಮಂದಿ ತಪಾಸಣೆ

**ಆರೋಗ್ಯ ಇಲಾಖೆಯಿಂದ ಜಾರಿಗೊಳಿಸಿರುವ ಗೃಹ ಆರೋಗ್ಯ ಯೋಜನೆಯಡಿ ಈವರೆಗೆ ಒಂದು ಕೋಟಿ ಜನರ ತಪಾಸಣೆ ಮಾಡಿದ್ದೇವೆ' ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ವಿವಿಧ 14 ಅಸಾಂಕ್ರಾಮಿಕ ರೋಗಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಸಮಸ್ಯೆಯನ್ನು ಆರಂಭಿಕ ಹಂತದಲ್ಲೇ ಗುರುತಿಸಿದರೆ ಚಿಕಿತ್ಸೆ ನೀಡಿ ಗುಣಪಡಿಸಲು ಸಾಧ್ಯವಾಗುತ್ತದೆ ಎಂಬುದನ್ನು ಮನಗಂಡು ನಮ್ಮ ಸರ್ಕಾರ ಹೆಜ್ಜೆ ಇಟ್ಟಿದೆ. ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಮಧುಮೇಹ ಅಧಿಕ ರಕ್ತದೊತ್ತಡ ಸಮಸ್ಯೆಯುಳ್ಳವರಿಗೆ ಮಾತ್ರೆಯನ್ನು ಅವರ ಜೀವನಪರ್ಯಂತ ಇಲಾಖೆಯಿಂದಲೇ ಒದಗಿಸಲಾಗುವುದು' ಎಂದು ತಿಳಿಸಿದರು.**

### ಮಕ್ಕಳಲ್ಲೂ ಸಮಸ್ಯೆ...

**ಒತ್ತಡ ಮಾನಸಿಕ ಆರೋಗ್ಯ ಸಮಸ್ಯೆ ಹೆಚ್ಚಾಗುತ್ತಿರುವ ಸಂದರ್ಭವಿದು. ಮಕ್ಕಳು ಕೂಡ ಮಾನಸಿಕ ಸಮಸ್ಯೆಗಳಿಗೆ ಒಳಗಾಗುತ್ತಿರುವುದು ಗಂಭೀರವಾದುದು. ಡಿಜಿಟಲ್ ಕ್ರಾಂತಿ ಸಾಮಾಜಿಕ ಮಾಧ್ಯಮದಿಂದ ಮಕ್ಕಳು ತೀವ್ರ ತೊಂದರೆಗೆ ಒಳಗಾಗುತ್ತಿದ್ದಾರೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು. ಆಸ್ಟ್ರೇಲಿಯಾದಲ್ಲಿ 16 ವರ್ಷದೊಳಗಿನವರಿಗೆ ಸಾಮಾಜಿಕ ಮಾಧ್ಯಮವನ್ನು ನಿಷೇಧಿಸಲಾಗಿದೆ. ವಯಸ್ಸಿಗೆ ಮೀರಿದ ಸಂಬಂಧಗಳನ್ನು ಮಕ್ಕಳು ಬೆಳೆಸಿಕೊಳ್ಳುತ್ತಿದ್ದಾರೆ ಹಾಗೂ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಇದೆಲ್ಲದಕ್ಕೂ ಕಡಿವಾಣ ಹಾಕಬೇಕಾಗಿದೆ. ಇದಕ್ಕಾಗಿ ಜಾಗೃತಿ ಹಾಗೂ ಸುಸ್ಥಿರವಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ' ಎಂದು ಪ್ರತಿಪಾದಿಸಿದರು.**

ಅಂತರಾಳದಿಂದ..
EDITORIAL

# ಭಾರತದ ವೈಮಾನಿಕ ಕ್ಷೇತ್ರದಲ್ಲಿ ತುರ್ತುಪರಿಸ್ಥಿತಿ!


ಕಳೆದ ಜೂನ್ ತಿಂಗಳಲ್ಲಿ ಏರ್‌ಇಂಡಿಯಾ ವಿಮಾನ ಪತನ ವಿಶ್ವಾದ್ಯಂತ ಸುದ್ದಿಯಾಯಿತು. ಈ ಭಾರೀ ದುರಂತ ಸಂಭವಿಸಿದ ಬೆನ್ನಿಗೇ ಕೇಂದ್ರ ಸರಕಾರ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನ ನಡೆಸಿತು. 'ಇಂತಹ ಅಪಘಾತಗಳನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಹೇಳಿಕೆಯನ್ನು ಗೃಹ ಸಚಿವರು ನೀಡಿದರು. ಏರ್ ಇಂಡಿಯಾದ ಬೇಜಬ್ದಾರಿಯ ಬಗ್ಗೆ ತನಿಖೆ ನಡೆಸಬೇಕಾದ ಸರಕಾರವೇ ಅದಕ್ಕೆ ಕ್ಲೀನ್ ಚಿಟ್ ನೀಡಿತು. ದೋಷಪೂರಿತ ಇಂಜಿನ್‌ಗಳು ಭಾರತದ ವಿಮಾನ ಉದ್ಯಮಕ್ಕೆ ಮಾಡುತ್ತಿರುವ ನಷ್ಟವೂ ಈ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ತೀವ್ರ ಚರ್ಚೆಗೊಳಗಾಗಿದ್ದವು. ಆದರೆ ಈ ದುರಂತಕ್ಕೆ ಸಂಬಂಧಿಸಿ ಸರಕಾರದ ಯಾರೊಬ್ಬರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿಲ್ಲ. ಇದೀಗ ಭಾರತ ವಿಮಾನ ಉದ್ಯಮ ಮತ್ತೆ ಸುದ್ದಿಯಲ್ಲಿದೆ. ಈ ಸಂಕಟ ಕಾಲದಲ್ಲಿ ದೇಶದ ಜನರ ಗೊಂದಲವನ್ನು ನಿವಾರಿಸುವ ತನ್ನ ಹೊಣೆಗಾರಿಕೆಯಿಂದ ಕೇಂದ್ರ ಸರಕಾರ ಸಂಪೂರ್ಣ ನುಣುಚಿಕೊಂಡಿದೆ. ಭಾರತದ ವಾಯುಯಾನ ಕ್ಷೇತ್ರದಲ್ಲಿ ಇಂಡಿಗೊ ಅತ್ಯಧಿಕ ಪಾಲನ್ನು ಹೊಂದಿದ್ದರೆ ಬಳಿಕ ಏರ್‌ಇಂಡಿಯಾ ಹೊಂದಿದೆ. ಒಂದು ರೀತಿಯಲ್ಲಿ ಭಾರತೀಯ ವಿಮಾನ ಯಾನ ಕ್ಷೇತ್ರದಲ್ಲಿ ಈ ಸಂಸ್ಥೆಗಳು ಏಕಸ್ವಾಮ್ಯತೆಯನ್ನು ಸಾಧಿಸಿವೆ. ಇಂಡಿಗೊ ಪ್ರತಿದಿನ 2,200ಕ್ಕೂ ಅಧಿಕ ದೇಶೀಯ ಮತ್ತು ಅಂತರ್‌ರಾಷ್ಟ್ರೀಯ ವಿಮಾನಗಳನ್ನು ನಿರ್ವಹಿಸುತ್ತದೆ. ಕಡಿಮೆ ವೆಚ್ಚದಲ್ಲಿ ಸೇವೆಗಳನ್ನು ನೀಡುತ್ತದೆ ಎನ್ನುವ ಹೆಗ್ಗಳಿಕೆಯೂ ಅದಕ್ಕಿದೆ. ಆದರೆ ಏಕಾಏಕಿ ಸಿಬ್ಬಂದಿ ಸಮಸ್ಯೆಯನ್ನು ಸೃಷ್ಟಿಸಿಕೊಂಡು ಇಂಡಿಗೊ ಕೈ ಚೆಲ್ಲಿ ಕೂತಿದೆ. ಈ ವಿಮಾನಗಳನ್ನೇ ನಂಬಿ ಕೂತ ಸಾವಿರಾರು ಜನರು ಅತಂತ್ರರಾಗಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಇಂಡಿಗೊ 1,000ಕ್ಕೂ ಅಧಿಕ ವಿಮಾನಗಳ ಕಾರ್ಯಾಚರಣೆಯನ್ನು ರದ್ದುಪಡಿಸಿದೆ. ಇದಕ್ಕೆ ಸಿಬ್ಬಂದಿಯ ಕೊರತೆ ಮತ್ತು ತಾಂತ್ರಿಕ ಸಮಸ್ಯೆಗಳನ್ನು ಮುಂದೊಡ್ಡಿದೆ. ಇದು ಬಿಕ್ಕಟ್ಟು ಕೇವಲ ಒಂದೆರಡು ದಿನಗಳಿಗೆ ಸೀಮಿತವಾದುದಲ್ಲ ನಾಳೆಯೂ ಇಷ್ಟೇ ವಿಮಾನಗಳು ರದ್ದಾಗಲಿವೆ ಎಂದು ಸಂಸ್ಥೆ ಹೇಳಿಕೆ ನೀಡಿದ್ದು ಡಿಸೆಂಬರ್ 15ರವರೆಗೂ ಪರಿಸ್ಥಿತಿ ಹೀಗೆಯೇ ಮುಂದುವರಿಯಬಹುದು ಎಂದಿದೆ. ಇದು ನಿಸ್ಸಂಶಯವಾಗಿ ಭಾರತದ ವೈಮಾನಿಕ ಕ್ಷೇತ್ರದ ತುರ್ತು ಪರಿಸ್ಥಿತಿಯ ದಿನಗಳಾಗಿವೆ. ಈ ತುರ್ತುಪರಿಸ್ಥಿತಿಯು ಭಾರತದ ಎಲ್ಲಾ ಕ್ಷೇತ್ರಗಳ ಮೇಲೆ ಅತ್ಯಂತ ಹೀನಾಯ ಪರಿಣಾಮಗಳನ್ನು ಬೀರಿದೆ.

**ಕಳೆದೆರಡು ದಿನಗಳಿಂದ ವಿಮಾನ ಯಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಅಧ್ವಾನಗಳು ಯಾವುದೇ ಭೀಕರ ಅವಘಡಕ್ಕಿಂತ ಕಡಿಮೆಯಿಲ್ಲ. ದೇಶದ ವಾಯುಯಾನ ಮಾರುಕಟ್ಟೆಯಲ್ಲಿ ಶೇ. 60ಕ್ಕೂ ಅಧಿಕ ಪಾಲನ್ನು ಹೊಂದಿರುವ ಇಂಡಿಗೊ ಅಕ್ಷರಶಃ ರೆಕ್ಕೆ ಹರಿದು ನೆಲದಲ್ಲಿ ಒದ್ದಾಡುತ್ತಿದೆ. ಸಾವಿರಾರು ಪ್ರಯಾಣಿಕರು ತಮ್ಮ ಗುರಿ ತರುಪಲಾರದೆ ವಿಮಾನ ಯಾನ ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿದ್ದಾರೆ. ದೇಶದ ಔದ್ಯಮಿಕ ವಲಯವೇ ಹಾಹಾಕಾರದಲ್ಲಿರುವ ಹೊತ್ತಿಗೆ, ಇತ್ತ ನಮ್ಮ ಪ್ರಧಾನಿಯವರು ರಶ್ಯ ಅಧ್ಯಕ್ಷ ಪುಟಿನ್ ಜೊತೆಗೆ ಚಹಾಕೂಟ ನಡೆಸುತ್ತಿದ್ದಾರೆ. ಪುಟಿನ್‌ಗೆ ಭಗವದ್ಗೀತೆ ಓದುವ ಸಲಹೆ ನೀಡುತ್ತಿದ್ದಾರೆ.**

ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುವ ಉದ್ಯಮಿಗಳಿಗೆ ಅತ್ಯಂತ ಕೆಟ್ಟ ಸಂದೇಶವನ್ನು ಈ ಮೂಲಕ ವೈಮಾನಿಕ ಉದ್ಯಮವು ರವಾನಿಸಿದೆ. ಮೋದಿ ಪ್ರಧಾನಿಯಾದರೆ ಭಾರತದ ರೈಲು ನಿಲ್ದಾಣಗಳು ವಿಮಾನ ನಿಲ್ದಾಣಗಳಾಗಲಿವೆ ಎನ್ನುವ ಭರವಸೆ ತಿರುವು ಮುರುವಾಗಿದೆ. ಬದಲಿಗೆ ವಿಮಾನ ನಿಲ್ದಾಣಗಳೇ ರೈಲು ನಿಲ್ದಾಣಗಳಿಗಿಂತ ಕಳಪೆ ಮಟ್ಟಕ್ಕೆ ತಲುಪಿದೆ. ಇದು ವಿಶ್ವಮಟ್ಟದಲ್ಲಿ ಭಾರತದ ವರ್ಚಸ್ಸಿಗೆ ಭಾರೀ ಧಕ್ಕೆಯನ್ನು ತಂದಿದೆ.

ಇದಕ್ಕೆ ಹೊಣೆ ಯಾರು? ಇಂಡಿಗೊ ಇದರ ಹೊಣೆಯನ್ನು ವಿಮಾನ ಯಾನ ಮಹಾನಿರ್ದೇಶನಾಲಯ ಡಿಜಿಸಿಎ ತಲೆಗೆ ಕಟ್ಟಲು ನೋಡುತ್ತಿದೆ. ಡಿಜಿಸಿಎಯು ಇತ್ತೀಚೆಗೆ ಜಾರಿಗೆ ತಂದಿರುವ ನಿಯಮಗಳ ಕಾರಣದಿಂದ ಸಿಬ್ಬಂದಿ ಕೊರತೆ ಎದುರಾಗಿರುವುದೇ ಇಂತಹದೊಂದು ಬಿಕ್ಕಟ್ಟು ನಿರ್ಮಾಣವಾಗಲು ಕಾರಣವಾಗಿದೆ ಎಂದು ಇಂಡಿಗೊ ಹೇಳಿಕೊಳ್ಳುತ್ತಿದೆ. ಜಾರಿಗೆ ತಂದಿರುವ ರೋಸ್ಟರಿಂಗ್ ನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇಂಡಿಗೊ ವಿಫಲವಾಗಿರುವುದೇ ಈ ಎಲ್ಲಾ ಅನಾಹುತಗಳಿಗೆ ಕಾರಣ ಎನ್ನುವ ಇನ್ನೊಂದು ಆರೋಪವೂ ಇದೆ. ಇಂತಹದೊಂದು ತುರ್ತುಪರಿಸ್ಥಿತಿಯನ್ನು ಇಂಡಿಗೊ ಸಂಸ್ಥೆಯೇ ನಿರ್ಮಾಣ ಮಾಡಿ ಅದು ಡಿಜಿಸಿಎಯನ್ನು ಬ್ಲಾಕ್‌ಮೇಲ್ ಮಾಡುತ್ತಿದೆಯೆ? ಎಂದೂ ಕೆಲವರು ಅನುಮಾನಿಸುತ್ತಿದ್ದಾರೆ. ಭಾರತದ ವಿಮಾನ ಕಂಪೆನಿಗಳು ಪೈಲಟ್‌ಗಳ ಮೇಲೆ ಹೆಚ್ಚಿನ ಒತ್ತಡಗಳನ್ನು ಹಾಕುತ್ತಿವೆ ಎನ್ನುವ ಆರೋಪ ಇಂದು ನಿನ್ನೆಯದಲ್ಲ. ಪೈಲಟ್‌ಗಳ ಆರೋಗ್ಯ ಮತ್ತು ವಿಮಾನದ ಸುರಕ್ಷತೆಯ ದೃಷ್ಟಿಯಿದ ಡಿಜಿಸಿಎ ಹೊಸ ನಿಯಮಗಳನ್ನು ಜಾರಿಗೊಳಿಸಿತ್ತು. ನಿಯಮಗಳ ಪ್ರಕಾರ ಪೈಲಟ್‌ಗಳ ಕರ್ತವ್ಯದ ಅವಧಿಯನ್ನು ಇಳಿಸಲಾಗಿದ್ದು, ವಿಶ್ರಾಂತಿಯ ಸಮಯವನ್ನು ಹೆಚ್ಚಿಸಲಾಗಿತ್ತು. ನಿಯಮ ಪ್ರಕಾರ ಯಾವುದೇ ವಿಮಾನ ಸಂಸ್ಥೆಯು ಸಿಬ್ಬಂದಿಗೆ ವಿಧಿಸಿದ ಮಿತಿಗಳಿಗಿಂತ ಹೆಚ್ಚಿನ ಅವಧಿ ಕೆಲಸ ಮಾಡಿಸಬಾರದು. ಈ ನಿಯಮ ಜಾರಿಗೆ ತರುವುದಕ್ಕೆ ಸಾಕಷ್ಟು ಕಾಲಾವಧಿಯನ್ನು ಡಿಜಿಸಿಎ ನೀಡಿತ್ತು. ಹೊಸ ನಿಯಮದ ಪರಿಣಾಮವನ್ನು ಅತಿ ತೀವ್ರವಾಗಿ ಅನುಭವಿಸಿರುವುದು ಇಂಡಿಗೊ. ಯಾಕೆಂದರೆ ಈ ಕ್ಷೇತ್ರದಲ್ಲಿ ಶೇ. 67ರಷ್ಟು ಪಾಲನ್ನು ಇಂಡಿಗೊ ಹೊಂದಿದೆ. ಸಿಬ್ಬಂದಿಯ ಸಂಖ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವುದು ಅದಕ್ಕೆ ಅನಿವಾರ್ಯವಾಗಿತ್ತು. ಆದರೆ ಡಿಜಿಸಿಎ ಆದೇಶವನ್ನು ಪಾಲಿಸಲು ಇಷ್ಟವಿಲ್ಲದ ಇಂಡಿಗೊ ಅದರ ವಿರುದ್ಧ ಪರೋಕ್ಷ ಮುಷ್ಕರಕ್ಕಿಳಿದ ಪರಿಣಾಮವಾಗಿಯೇ ಇಂತಹದೊಂದು ಬಿಕ್ಕಟ್ಟು ಎದುರಾಗಿದೆ ಎನ್ನುವ ಆರೋಪ ಕೇಳಿ ಬರುತ್ತಿದೆ. ನೀವು ನಿಯಮವನ್ನು ಕಠಿಣವಾಗಿಸಿದರೆ ನಾವು ವಿಮಾನವನ್ನೇ ಹಾರಿಸುವುದಿಲ್ಲ' ಎನ್ನುವ ಎಚ್ಚರಿಕೆಯನ್ನು ನೀಡಿ, ವಿಮಾನ ನಿರ್ದೇಶನಾಲಯವು ತನ್ನ ನಿಯಮದಿಂದ ಹಿಂದೆ ಸರಿಯುವಂತೆ ಮಾಡುವಲ್ಲಿ ಅದು ಭಾಗಶಃ ಯಶಸ್ವಿಯಾಗಿದೆ.

# ರಾಮಾಯಣ



## ಶ್ರೀ ರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿದ್ದು

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ರಾಮ ನನ್ನ ಕಣ್ಣು ಒಳಕ್ಕೆ ಸೇದಿಕೊಳ್ಳುತ್ತಿದೆ. ಪ್ರಾಣ ಹೋಗುವುದರಲ್ಲಿದೆ. ಮರಣ ಸೂಚಕವಾದ ಸುವರ್ಣವೃಕ್ಷಗಳು ಕಾಣಿಸುತ್ತಿವೆ. ರಾವಣನು ವಿಂದವೆಂಬ ಮುಹೂರ್ತದಲ್ಲಿ ನಿನ್ನ ಪತ್ನಿಯನ್ನು ಅಪಹರಿಸಿದನು. ಆ ಮುಹೂರ್ತದಲ್ಲಿ ಅಪಹೃತವಾದ ವಸ್ತು, ಪುನಃ ಅದರ ಸ್ವಾಮಿಗೆ ದೊರಕುತ್ತದೆ. ಆದ್ದರಿಂದ ಸೀತಾದೇವಿಯು ನಿನಗೆ ನಿಶ್ಚಯವಾಗಿಯೂ ದೊರೆಯುತ್ತಾಳೆ: ಚಿಂತಿಸಬೇಡ. ರಾವಣನಿಗೆ ವಿನಾಶಕಾಲವು ಸಮೀಪಿಸಿತು. ರಾವಣನು ವಿಶ್ರವಸ್ಸಿನ ಮಗ, ಕುಬೇರನ ತಮ್ಮ ಎಂದು ಹೇಳುತ್ತಿರುವಾಗಲೇ ಅವನ ಬಾಯಿಯಿಂದ ರಕ್ತವು ಸುರಿಯಿತು. ಜಟಾಯುವಿನ ಪ್ರಾಣಪಕ್ಷಿ ಹಾರಿಹೋಯಿತು. ಆಮೇಲೆ ಶ್ರೀರಾಮನು ಲೋಕಾಂತರವನ್ನೈದಿದ ಜಟಾಯುವನ್ನು ಕಂಡು ಅತ್ಯಂತ ದುಃಖಪಟ್ಟು ಲಕ್ಷ್ಮಣನನ್ನು ಕುರಿತು ಈ ರೀತಿ ನುಡಿದನು: ಜಟಾಯುವು ಬಹುಮಂದಿ ರಾಕ್ಷಸರಿರುವ ಈ ಅರಣ್ಯದಲ್ಲಿ ಬಹುಕಾಲ ಯಾವ ಭಯವೂ ಇಲ್ಲದೆ ಸುಖವಾಗಿದ್ದನು. ಈತನು ಹುಟ್ಟಿ ಬಹಳ ವರುಷಗಳಾದವು. ಇವನು ಈಗ ನಮ್ಮ ಕಾರ್ಯಕ್ಕಾಗಿ ಶರೀರವನ್ನು ಬಿಟ್ಟನು. ಲೋಕದಲ್ಲಿ ಯಾರೂ ಕಾಲಗತಿಯನ್ನು ಮೀರಿದವರಿಲ್ಲ. ಜಟಾಯುವು ನಮಗೆ ಹಿತವನ್ನು ಮಾಡಿದನು. ಈತನು ಪರೋಪಕಾರಿ. ಸೀತಾದೇವಿಯ ನಿಮಿತ್ತವಾಗಿ ರಾವಣನೊಡನೆ ಯುದ್ಧವನ್ನು ಮಾಡಿ ನಮ್ಮ ಕಾರ್ಯಕ್ಕೋಸ್ಕರ ಪ್ರಾಣವನ್ನು ಬಿಟ್ಟನು. ಲಕ್ಷ್ಮಣ, ಲೋಕದಲ್ಲಿ ಧರ್ಮಿಷ್ಠರಾಗಿ ಪರೋಪಕಾರಿಗಳಾದ ಮಹಾತ್ಮರು ಅನೇಕರಿದ್ದಾರೆ. ಪಕ್ಷಿಜಾತಿಗಳಲ್ಲಿಯೂ ಪರೋಪಕಾರಕ್ಕಾಗಿ ತಮ್ಮ ಪ್ರಾಣಗಳನ್ನು ಬಿಡುವ ಉತ್ತಮಜೀವಿಗಳಿವೆ. ನನಗೆ ಸೀತಾದೇವಿಯ ವಿಯೋಗದುಃಖಕ್ಕೆ ಸಮಾನವಾದ ಇನ್ನೊಂದು ದುಃಖವು ಪ್ರಾಪ್ತವಾಯಿತು. ಜಟಾಯುವಿನ ಮರಣದಿಂದ ದಶರಥರಾಯನ ಮರಣದಿಂದ ಬಂದ ದುಃಖಕ್ಕೆ ಸಮಾನವಾದ ದುಃಖವು ಸಂಭವಿಸಿತು. ಲಕ್ಷ್ಮಣ,ನಮಗೆ ಜಟಾಯುವು ಪೂಜ್ಯನೂ ಮಾನ್ಯನೂ ಆದಕಾರಣ ಈತನಿಗೆ ದೇಹ ಸಂಸ್ಕಾರವನ್ನು ಮಾಡಬೇಕು. ನೀನು ಕಾವ್ಯಗಳನ್ನು ಕೂಡಿಸಿ ಚಿತೆಯನ್ನು ನಿರ್ಮಿಸು. ನಮ್ಮ ಕಾರಕ್ಕೋಸುಗ ಶರೀರವನ್ನು ಬಿಟ್ಟ ಜಟಾಯುವನ್ನು ಚಿತೆಯಮೇಲಿಟ್ಟು ದಹಿಸೋಣ. ಜಟಾಯುವು ಯಜ್ಞಾದಿ ಸತ್ಕರ್ಮಗಳನ್ನು ಮಾಡಿದ ಪುಣ್ಯಾತ್ಮರಿಗೆ ಯಾವ ಲೋಕಗಳುಂಟಾಗುವುವೋ ಅಂಥ ಲೋಕಗಳಿಗೆ ನನ್ನ ಅಪ್ಪಣೆಯಿಂದ ಹೋಗಲಿ ಎಂದು ಹೇಳಿದನು. ಆನಂತರ ಜಟಾಯು, ನನ್ನಿಂದ ಸತ್ಕರಿಸಲ್ಪಟ್ಟ ನೀನು ಉತ್ತಮವಾದ ಪುಣ್ಯಲೋಕಗಳಿಗೆ ಹೋಗು ಎಂದು ನುಡಿದು ತಂದೆಗೆ ಮಾಡುವಂತೆ ಆತನಿಗೆ ಅಗ್ನಿ ಸಂಸ್ಕಾರಗಳನ್ನು ಮಾಡಿದನು. ಶ್ರೀರಾಮನು ದುಃಖಾಕ್ರಾಂತನಾಗಿ ಅರಣ್ಯಕ್ಕೆ ಹೋಗಿ ಒಂದು ಕೃಷ್ಣಸಾರಂಗ ಮೃಗವನ್ನು ಕೊಂದು ತಂದು ಅದರ ಮಾಂಸವನ್ನು ಜಟಾಯುವಿಗೆ ಅರ್ಪಿಸಿ ಎಳೆಯ ಹುಲ್ಲಿನಮೇಲೆ ವಾಯಸಪಿಂಡವನ್ನಿಕ್ಕಿ ತಂದೆಗೆ ಪಿತೃಕಾರವನ್ನು ಮಾಡುವಂತೆ ಪಿತೃಕಾರವನ್ನು ಮಾಡಿ ಸ್ವರ್ಗಾರೋಹಣಸೂಕ್ತಗಳನ್ನು ಜಪಿಸಿ ಲಕ್ಷ್ಮಣನ ಸಮೇತನಾಗಿ ಗೋದಾವರೀನದಿಗೆ ಹೋಗಿ ವಿಧ್ಯುಕ್ತ ಪ್ರಕಾರದಲ್ಲಿ ಸ್ನಾನವನ್ನು ಮಾಡಿ ಜಟಾಯುವಿಗೆ ತರ್ಪಣವನ್ನು ಕೊಟ್ಟನು.

ಮುಂದುವರಿಯುವುದು...



☛ ವಿಶ್ವಾಸ್.ಡಿ.ಗೌಡ

............ಮುಂದುವರೆದ ಭಾಗ

# ಹಾಸನ ದೇವಾಲಯಗಳ ವೈಭವಯಾನ

**ಅರಕಲಗೂಡು ತಾಲ್ಲೂಕು ಅರಕಲಗೂಡು** : ಐತಿಹಾಸಿಕವಾಗಿ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಶ್ರೀಮಂತಿಕೆಯುಳ್ಳ ಅರೆಮಲೆನಾಡು ಪ್ರದೇಶ. ಲಕ್ಷ್ಮೀನರಸಿಂಹ, ವೀರಭದ್ರ, ಊರಬಾಗಿಲ ಆಂಜನೇಯ, ಕೊತ್ತಲ ಗಣಪತಿ ಮುಂತಾದ ಪುರಾತನ ದೇವಾಲಯಗಳಿವೆ. ಪಾಳೆಗಾರ ಕೃಷ್ಣಪ್ಪನಾಯಕನ 1560ರ ಕೋಟೆಯ ಅವಶೇಷಗಳಿವೆ. ಕಾದಂಬರಿ ಸಾರ್ವಭೌಮ ಕರ್ನಾಟಕ ಏಕೀಕರಣ ಹೋರಾಟಗಾರ ಅನಕೃ, ಖ್ಯಾತ ವೈದ್ಯ ಡಾ. ಸಂಪತ್ ಕುಮಾರ್, ಪ್ರಸಾರಭಾರತಿಯ ಅಧ್ಯಕ್ಷ ಡಾ.ಅರಕಲಗೂಡು ಸೂರ್ಯಪ್ರಕಾಶ್ ಇವರುಗಳೂ ಇದೇ ಊರಿನವರು. (ಹಾಸನದಿಂದ 30ಕಿ.ಮೀ. ಶ್ರವಣಬೆಳಗೊಳದಿಂದ ಹೊ.ನ.ಪುರ ಮಾರ್ಗ 65ಕಿ.ಮೀ)

**ರಾಮನಾಥಪುರ:** ಕಾವೇರೀತಟದಲ್ಲಿರುವ ಪುಣ್ಯಕ್ಷೇತ್ರ. ಕಾಲದ ಹೊಯ್ಸಳ 2ನೇ ಸೋಮೇಶ್ವರನ ಚತುರ್ಯುಗಮೂರ್ತಿ ಶ್ರೀ ರಾಮೇಶ್ವರ ದೇವಾಲಯ, ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿತವಾದ ಅಗಸ್ತ್ಯೇಶ್ವರ, ಸುಬ್ರಹ್ಮಣ್ಯ, ಪಟ್ಟಾಭಿರಾಮ, ಲಕ್ಷ್ಮೀನರಸಿಂಹ ಹೀಗೆ 64 ಕ್ಕೂ ಹೆಚ್ಚು ದೇವಾಲಯಗಳಿರುವ ಈ ಊರು 'ದಕ್ಷಿಣಕಾಶಿ''ದೇವಾಲಯಗಳ ಬೀಡು' ಎಂದೇ ಖ್ಯಾತವಾಗಿದೆ. ರಾಮೇಶ್ವರ ದೇವಾಲಯದ ಗೋಪುರ, ಕಾವೇರಿನದಿಯಲ್ಲಿರುವ ಗಾಯತ್ರಿ ಶಿಲೆ, ಗೋಗರ್ಭ, ಮೀನುಗಳು ಮುಂತಾದವು ಪ್ರವಾಸಿ ಆಕರ್ಷಣೆಯಾಗಿವೆ. (ಹಾಸನದಿಂದ 52 ಕಿ.ಮೀ. ಶ್ರವಣಬೆಳಗೊಳದಿಂದ ಅರಕಲಗೂಡು ಮಾರ್ಗ 70ಕಿ.ಮೀ).

**ರುದ್ರಪಟ್ಟಣ** : ಸಂಗೀತಗ್ರಾಮ ಎಂದೇ ಖ್ಯಾತವಾದ ಕರ್ನಾಟಕದ ಸಾಂಸ್ಕೃತಿಕ ಗ್ರಾಮ.2008ರಲ್ಲಿ ತಂಬೂರಿ ಆಕಾರದ 55 ಅಡಿ ಎತ್ತರದ, ಸಂಗೀತದ ಸಪ್ತಸ್ವರಗಳನ್ನು ಪ್ರತಿನಿಧಿಸುವ ಶ್ರೀ ಸಪ್ತಸ್ವರ ದೇವತಾ ಧ್ಯಾನಮಂದಿರವು ಇಲ್ಲಿ ವಿದ್ವಾನ್ ಆರ್.ಕೆ. ಪದ್ಮನಾಭರವರ ನೇತೃತ್ವದಲ್ಲಿ ನಿರ್ಮಿತವಾಗಿದೆ. 'ವಿಶ್ವದಮೊದಲ ನಾದಮಂಟಪ' ಎಂದು ಖ್ಯಾತವಾಗಿರುವ ಈ ಕಟ್ಟಡದಲ್ಲಿ ವಿದ್ಯಾಧಿದೇವತೆ ಸರಸ್ವತಿ, ಸಂಗೀತಾಚಾರ್ಯರುಗಳಾದ ಪುರಂದರದಾಸರು, ಕನಕದಾಸರು, ವಾದಿರಾಜರು, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾ ಶಾಸ್ತ್ರಿಗಳು ಮುಂತಾದವರಮೂರ್ತಿಗಳಿವೆ. (ಹಾಸನದಿಂದ 59 ಕಿ.ಮೀ. ಶ್ರವಣಬೆಳಗೊಳದಿಂದ ಅರಕಲಗೂಡು ಮಾರ್ಗ 77ಕಿ.ಮೀ.

**ಕೊಣನೂರು:** ಕಾವೇರಿ ನದಿಗೆ ಅಡ್ಡಲಾಗಿ 1997-98ರಲ್ಲಿ ಕಟ್ಟಿರುವ ತೂಗುಸೇತುವೆ ಇಲ್ಲಿನ ಆಕರ್ಷಣೆಗಳಲ್ಲಿ ಒಂದು.

180 ಮೀಟರ್ ಉದ್ದವಿರುವ ಕರ್ನಾಟಕದ ಎರಡನೇ ಅತಿ ಉದ್ದದ ಈ ತೂಗುಸೇತುವೆಯು ಸಮೀಪದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತದೆ. (ಹಾಸನದಿಂದ 56 ಕಿ.ಮೀ. ಶ್ರವಣಬೆಳಗೊಳದಿಂದ 72ಕಿ.ಮೀ) ಇವಲ್ಲದೆ ತಾಲ್ಲೂಕಿನಲ್ಲಿ ಹೇಮಾವತಿ ಆಣೆಕಟ್ಟಿನ ಹಿನ್ನೀರಿನ ಸೊಬಗನ್ನು ವೀಕ್ಷಿಸಬಹುದಾದ ಮಲ್ಲಿಪಟ್ಟಣ, 700 ವರ್ಷಗಳಷ್ಟು ಪುರಾತನ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯವಿರುವ ನಿವೃತ್ತ ಐ.ಜಿ.ಪಿ ಕಸ್ತೂರಿ ರಂಗನ್‌ರವರ ತವರು ಹುಲಿಕಲ್ಲು, ಹೊಯ್ಸಳರ ಕಾಲದ ಶ್ರೀ ಸ್ವಯಂಭುನಾಥೇಶ್ವರ ದೇವಾಲಯ ಹಾಗೂ ಸುಂದರವಾದ ಕಲ್ಯಾಣಿಯನ್ನುಳ್ಳ ಶಂಭುನಾಥಪುರ (ಅರಕಲಗೂಡಿಗೆ 1 ಕಿಮೀ ಸಮೀಪ) ಮುಂತಾದವೂ ಈ ತಾಲ್ಲೂಕಿನ ಸಂದರ್ಶನೀಯ ಕ್ಷೇತ್ರಗಳು.







........... ಮುಂದುವರೆಯುತ್ತದೆ

# ಸಾಧನ ಸಂಗಮದ ಯಶಸ್ವಿ ಮುಕುಲ ನೃತ್ಯೋತ್ಸವ

ಕಲಾ ಸಾಹಿತ್ಯ



ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು




ಉದಯೋನ್ಮುಖ ನೃತ್ಯ ಕಲಾವಿದರ ಸಮಗ್ರ ಅಭಿವೃದ್ಧಿಗಾಗಿ ನೃತ್ಯ ಕ್ಷೇತ್ರದಲ್ಲಿ ಅವಿರತ ಶ್ರಮಿಸುತ್ತಿರುವ ಖ್ಯಾತ ನೃತ್ಯಶಾಲೆ 'ಸಾಧನ ಸಂಗಮ' ಕಳೆದ 25 ವರ್ಷಗಳಿಂದ ಪ್ರತಿವರ್ಷ ಉದಯೋನ್ಮುಖ ನೃತ್ಯ ವಿದ್ಯಾರ್ಥಿಗಳಿಗೆ ನಡೆಸುವ ಮುಕುಲೋತ್ಸವ' ಒಂದು ವಿಶಿಷ್ಟ ಪ್ರಾಯೋಗಿಕ ಯಶಸ್ವೀ ಪ್ರಯತ್ನ. ಬಸವೇಶ್ವರನಗರದಲ್ಲಿರುವ ಅವರ ನೃತ್ಯ ಕೇಂದ್ರ ರಂಗೋಪನಿಷತ್' ನೃತ್ಯಾಂಗಣದಲ್ಲಿ ಮುಕುಲ ನೃತ್ಯೋತ್ಸವದಲ್ಲಿ ಮನೋಹರ ನೃತ್ಯ ಕಾರ್ಯಕ್ರಮಗಳು ಹಾಗೂ ಬುದ್ಧಿಮತ್ತೆಗೆ ಕಸರತ್ತು ನೀಡುವ ನೃತ್ಯ-ಯೋಗ ಮತ್ತು ಸಾಮಾನ್ಯ ಜ್ಞಾನದ ರಸಪ್ರಶ್ನೆ ಕಾರ್ಯಕ್ರಮ ಬಹು ಸ್ವಾರಸ್ಯಕರವಾಗಿದ್ದವು.

ಸ್ಥಿತ, ನಾದ ನರ್ತನ ಮತ್ತು ಮಾತಂಗಿ ನೃತ್ಯಕ್ಷೇತ್ರ ಮೂರು ನೃತ್ಯಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಸುಮನೋಹರ ನೃತ್ಯ ಪ್ರದರ್ಶಿಸಿದರು. ಅನಂತರ ಮಕ್ಕಳ ಮನೋವಿಕಾಸಕ್ಕಾಗಿ ಅನೇಕ ಬಗೆಯ ಪದಬಂಧ, ರಾಮಾಯಣ- ಮಹಾಭಾರತಕ್ಕೆ ಸಂಬಂಧಿಸಿದ ಪ್ರಶ್ನೆಗಳು, ರ್ಯಾಪಿಡ್ ಫೈರ್ ಮತ್ತು ನೃತ್ಯಜ್ಞಾನ ಪರೀಕ್ಷೆಯ ವಿವಿಧ ಬಗೆಗಳ ಅನ್ವೇಷಕ ವಿಧಾನಗಳನ್ನು ರೂಪಿಸಿ ಸ್ಪರ್ಧೆ ಏರ್ಪಡಿಸಲಾಗಿತ್ತು.
ಮಾತಂಗಿ ನೃತ್ಯಕ್ಷೇತ್ರ ನೃತ್ಯಶಾಲೆಯ ಗುರು ವಿ. ಮಾತಂಗಿ ಪ್ರಸನ್ ಅವರ ಶಿಷ್ಯೆಯರು ಮುಕುಲ ಬಾಲ ತಂಡ ಪ್ರಶಸ್ತಿಯನ್ನುಗಳಿಸಿ ಜಯಶಾಲಿಗಳಾದರು. ಮುಖ್ಯ ಅತಿಥಿಗಳಾಗಿ ರಂಗಭೂಮಿಯ ನಟಿ ರೋಹಿಣಿ ರಘುನಂದನ್ ಮಾತು ಲೇಖಕಿ ವೈ.ಕೆ.ಸಂಧ್ಯಾ ಶರ್ಮ ಭಾಗವಹಿಸಿದ್ದರು.

# ವೈಜ್ಞಾನಿಕತೆ ಹರಡಲಿ, ಅಂಧ ವಿಶ್ವಾಸಕ್ಕೆ ಅಂಕುಶವಿರಲಿ

## ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಅಧ್ಯಕ್ಷ ಹುಲಿಕಲ್ ನಟರಾಜ್ ಆಗ್ರಹ

**-ಹುಲಿಕಲ್ ನಟರಾಜ್**



ಕರ್ನಾಟಕ ರಾಜ್ಯವು ದೇಶದಲ್ಲೇ ಪ್ರಥಮ ಬಾರಿಗೆ ಮೂಢನಂಬಿಕೆಗಳ ಪ್ರತಿಬಂಧಕ ಕಾಯ್ದೆ ಜಾರಿಯಾಗಿ ದೇಶದಲ್ಲಿಯೇ ಅಂಧ ವಿಶ್ವಾಸ, ಜ್ಯೋತಿಷ್ಯ, ಮಾಟ ಮಂತ್ರಗಳ ವಿರುದ್ಧ ದಿಟ್ಟಕ್ರಮ ಕೈಗೊಂಡಿದೆ. ನಂಬಿಕೆ ಮತ್ತು ಮೂಢನಂಬಿಕೆಗಳ ತೆಳು ಗೆರೆಯಿಂದ ಅದರ ಸ್ಪಷ್ಟ ಚಿತ್ರಣ ಯಾರಿಗೂ ದಕ್ಕುತ್ತಿಲ್ಲ. ಆದರೂ ಈ ಪ್ರಯತ್ನ ದೇಶದ ಎಲ್ಲಾ ವೈಚಾರಿಕ ಪ್ರಜ್ಞೆಯುಳ್ಳವರ ಸಂತೋಷಕ್ಕೆ ಕಾರಣವಾಗಿತ್ತು.

ಭಾರತೀಯ ಜಾಹೀರಾತು ಮಂಡಳಿಯು ಭವಿಷ್ಯ ಹೇಳುವವರು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕೆ ಭವಿಷ್ಯ ನುಡಿಯುವವರು, ಅಂಧ ವಿಶ್ವಾಸ ಇತ್ಯಾದಿ ಕುರಿತಾದ ಜಾಹೀರಾತುಗಳನ್ನು ಪ್ರಸಾರ ಮಾಡುವಂತಿಲ್ಲ ಎಂದು ನಿಯಮ ಹೊಂದಿದೆ. ಆದರೆ ದಿನೇ ದಿನೇ ಹೆಚ್ಚಾಗುತ್ತಿರುವ ಜ್ಯೋತಿಷ್ಯ, ಮಾಟ ಮಂತ್ರ, ತಂತ್ರ, ಸಂಖ್ಯಾಜ್ಯೋತಿಷ್ಯಗಳ ಜಾಹೀರಾತುಗಳು ಮಾಧ್ಯಮಗಳಲ್ಲಿ ಮುಖ್ಯವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅಡೆತಡೆಯಿಲ್ಲದೆ ಪ್ರಸಾರವಾಗುತ್ತಿರುವುದು ವಿಷಾದನೀಯ.

ದೇಶದ ಜಾಹೀರಾತು ನಿಯಮಗಳಲ್ಲಿಯೇ ಅಂಧ ವಿಶ್ವಾಸಗಳನ್ನು ಸಮೂಹ ಮಾಧ್ಯಮಗಳ ಪ್ರಚಾರದಿಂದ ನಿರ್ಬಂಧಿಸುವ ಪರಿಚ್ಛೇದವಿದೆ. ಆದರೆ ಅವುಗಳನ್ನು ಕಿಂಚಿತ್ತೂ ಲೆಕ್ಕಿಸದಂತೆ ಸಾಮಾಜಿಕ ಮಾಧ್ಯಮಗಳನ್ನು ಸಾಧನವಾಗಿಸಿಕೊಂಡು ಜ್ಯೋತಿಷ್ಯ, ಪೂಜೆ, ಪುನಸ್ಕಾರಗಳು, ಮಾಟ ಮಂತ್ರ, ಹಸ್ತ ಸಾಮುದ್ರಿಕೆ, ಸಂಖ್ಯಾ ಜ್ಯೋತಿಷ್ಯದ ಅಂಧ ವಿಶ್ವಾಸ ಹರಡುವ ಕಾರ್ಯಗಳನ್ನು ಪ್ರಚಾರ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ರಾಜ್ಯ ಸರ್ಕಾರವನ್ನು ಕಠಿಣವಾಗಿ ಕರ್ನಾಟಕ ರಾಜ್ಯ ಸರ್ಕಾರವನ್ನು ಮೂಢನಂಬಿಕೆಗಳ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಜ್ಯೋತಿಷ್ಯ, ಸಂಖ್ಯಾ ಜ್ಯೋತಿಷ್ಯ ಇತ್ಯಾದಿ ಅಂಧ ವಿಶ್ವಾಸಗಳ ಪ್ರಚಾರವನ್ನು ನಿರ್ಬಂಧಿಸಲು ಒತ್ತಾಯಿಸುತ್ತದೆ. ಸ್ವತಃ ವೈಚಾರಿಕ ಪ್ರಜ್ಞೆಯನ್ನು ಅನುಸರಿಸುವ ಮುಖ್ಯಮಂತ್ರಿಗಳಲ್ಲೂ ಈ ಕುರಿತು ಕಾಳಜಿ ವಹಿಸಲು ಕೋರುತ್ತಿದೆ. ಸಮೂಹ ಮಾಧ್ಯಮಗಳಲ್ಲಿನ ಜಾಹೀರಾತು ನಿರ್ಬಂಧವು ಸಾಮಾಜಿಕ ಮಾಧ್ಯಮಗಳಿಗೂ ಅನ್ವಯಿಸುತ್ತದೆ. ಆದರೆ ಅದರ ಕಟ್ಟುನಿಟ್ಟಿನ ಜಾರಿ ಇಲ್ಲವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಂಧ ವಿಶ್ವಾಸ ಹರಡುವವರ ವಿರುದ್ಧ ತೀವ್ರ ಕ್ರಮಕ್ಕೆ ಸರ್ಕಾರ ಮುಂದಾಗಬೇಕಿದೆ.

ಸಾಮಾಜಿಕ ಮಾಧ್ಯಮಗಳು ಅಂಧ ವಿಶ್ವಾಸವನ್ನು ಹರಡುವ ವಾಹಕಗಳಾಗಿವೆ. ಹಲವು ಬಗೆಯ ಪೂಜೆಗಳನ್ನು ಮಾಡಿಸಿದರೆ ದೋಷ ನಿವಾರಣೆಯಾಗುತ್ತದೆ ಎಂದು ಬಿತ್ತರಿಸಲಾಗುತ್ತದೆ. ಅವುಗಳಿಗೆ ಯಾವುದೇ ವೈಜ್ಞಾನಿಕ ಪುರಾವೆ ಇರುವುದಿಲ್ಲ. ಆದ್ದರಿಂದ ಜನರಲ್ಲಿ ವೈಜ್ಞಾನಿಕ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಎಲ್ಲಾ ಸಾಮಾಜಿಕ ಮಾಧ್ಯಮಗಳಲ್ಲೂ ಈ ಬಗೆಯ ಜಾಹೀರಾತುಗಳಿಗೂ ಕಠಿಣ ನಿರ್ಬಂಧ ವಿಧಿಸಬೇಕೆಂದು ಕೋರುತ್ತೇನೆ.

# ಇದ್ದಕ್ಕಿದಂತೆ ಕಣ್ಣುಗಳಲ್ಲಿ ನೀರು?



ಕಣ್ಣುಗಳಲ್ಲಿ ಪದೇ ಪದೇ ನೀರು ಬರುವುದು ಒಳ್ಳೆಯ ಲಕ್ಷಣವಲ್ಲ ಎನ್ನುತ್ತಾರೆ ಆರೋಗ್ಯ ತಜ್ಞರು ಯಾಕೆಂದ್ರೆ, ಇವೆಲ್ಲಾ ರೋಗಲಕ್ಷಣಗಳು, ಕಣ್ಣುಗಳಲ್ಲಿ ಗಂಭೀರ ಕಾಯಿಲೆ ರೋಗ ಲಕ್ಷಣಗಳನ್ನು ಸೂಚಿಸುತ್ತದೆ ಹೀಗಾಗಿ ಕಾರಣಗಳಿಲ್ಲದೆ, ಕಣ್ಣುಗಳಲ್ಲಿ ಪದೇ ಪದೇ ನೀರು ಬರುತ್ತಲೇ ಇದ್ದರೆ ಕೂಡಲೇ ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿಕೊಂಡರೆ ಒಳ್ಳೆಯದು ಎನ್ನುತ್ತಾರೆ ಆರೋಗ್ಯ ತಜ್ಞರು. ನಮ್ಮ ದೇಹದ ಎಲ್ಲಾ ಅಂಗಾಂಗ ಗಳಂತೆ ಕಣ್ಣುಗಳಿಗೆ ಕೂಡ ಪ್ರಮುಖ ಸ್ಥಾನವನ್ನು ನೀಡಲಾಗಿದೆ. ದೇಹದ ಬೇರೆ ಅಂಗಾಂಗಗಳಿಗೆ ಹೋಲಿಸಿದರೆ ಬಹಳ ಸೂಕ್ಷ್ಮವಾದ ಅಂಗಗಳು ಎಂದರೆ ಅದು ನಮ್ಮ ಕಣ್ಣು ಹಾಗೂ ಕಿವಿಗಳು ಆಗಿರುತ್ತವೆ ಎಂದರೆ ತಪ್ಪಾಗಲಾರದು. ದಿನನಿತ್ಯ ನಾವು ಹಾಸಿಗೆಯಿಂದ ಮೇಲೆದ್ದ ತಕ್ಷಣದಿಂದ ಹಿಡಿದು ರಾತ್ರಿ ಕಣ್ಣು ಮುಚ್ಚಿ ಮಲಗುವವರೆಗೂ ಕಣ್ಣುಗಳ ಕೆಲಸ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಇಂತಹ ಕಣ್ಣುಗಳ ಆರೋಗ್ಯವನ್ನು ನಾವು ಕೊನೆಯವರೆಗೂ ಅಚ್ಚುಕಟ್ಟಾಗಿ ಕಾಪಾಡಿಕೊಳ್ಳಬೇಕು ಎಂದರೆ ಅದಕ್ಕೆ ಬೇಕಾದ ಪೂರ್ವ ತಯಾರಿಯನ್ನು ಮಾಡಿಕೊಳ್ಳಬೇಕು. ಆದರೆ ಕೆಲವೊಮ್ಮೆ ನಾವು ಮಾಡುತ್ತಿರುವ ಕೆಲವೊಂದು ತಪ್ಪಿನಿಂದಾಗಿ ಹಾಗೂ ಅನುವಂಶೀಯ ಕಾರಣಗಳಿಂದಾಗಿ ನಮ್ಮ ಕಣ್ಣುಗಳಲ್ಲಿ ಸಮಸ್ಯೆ ಕಾಣಿಸಿಕೊಳ್ಳಲು ಶುರುವಾಗುತ್ತಿದೆ..

**ಕಣ್ಣುಗಳಲ್ಲಿ ಇದ್ದಕ್ಕಿದಂತೆ ನೀರು ಬರುವುದು:** ಕಣ್ಣುಗಳಲ್ಲಿ ಇದ್ದಕ್ಕಿದಂತೆ ನೀರು ಬರುವುದು ಕೂಡ ಹಲವಾರು ರೋಗಗಳ ಲಕ್ಷಣಗಳನ್ನು ಸೂಚಿಸುತ್ತದೆ. ಒಂದು ವೇಳೆ ಈ ರೀತಿಯ ರೋಗ ಲಕ್ಷಣಗಳು ಕಾಣಿಸಿಕೊಂಡರೆ, ಕೂಡಲೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಳ್ಳಿ, ಯಾಕೆಂದ್ರೆ ಇವೆಲ್ಲಾ ಲಕ್ಷಣಗಳು ಗಂಭೀರ ಕಾಯಿಲೆಯ ರೋಗಲಕ್ಷಣಗಳು ಆಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಅದರಲ್ಲೂ ನಿರಂತರ ಕಂಪ್ಯೂಟರ್, ಲ್ಯಾಪ್‌ಟಾಪ್ ಅಥವಾ ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರೆ, ಕಣ್ಣುಗಳು ಒಣಗುವ ಸಮಸ್ಯೆ ಉಂಟಾಗಬಹುದು. ಕಣ್ಣುಗಳು ಒಣಗು ವುದರಿಂದ ಆಗಾಗ್ಗೆ ನೀರು ಬರುವ ಸಾಧ್ಯತೆ ಕೂಡ ಹೆಚ್ಚಿರುತ್ತದೆ ಎನ್ನುತ್ತಾರೆ ಆರೋಗ್ಯ ತಜ್ಞರು.

**ಇದು ಗಂಭೀರ ಕಾಯಿಲೆಯ ಲಕ್ಷಣಗಳಾಗಿರಬಹುದು**

ಆಗಾಗ್ಗೆ ಯಾವುದೇ ಕಾರಣವಿಲ್ಲದೆ ಕಣ್ಣುಗಳಲ್ಲಿ ನೀರು ಬರಲು ಪ್ರಾರಂಭಿಸಿದರೆ ಆದಷ್ಟು ಎಚ್ಚರಿಕೆ ವಹಿಸಬೇಕು. ಇದು ಕಣ್ಣಿನಲ್ಲಿ ಕಾಣಿಸಿಕೊಂಡಿರುವ ಗಂಭೀರ ಕಾಯಿಲೆಯ ಲಕ್ಷಣವಾಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಕೆಲವೊಮ್ಮೆ ಕಣ್ಣುಗಳಿಗೆ ಧೂಳು, ಅಥವಾ ಗಾಳಿಯ ಮೂಲಕ ಸಣ್ಣಗೆ ಇರುವ ಕಸ ಹೋದರೂ ಕೂಡ ಈ ರೀತಿಯ ಸಮಸ್ಯೆ ಕಾಣಿಸಿಕೊಳ್ಳಬಹುದು ಇನ್ನು ಕೆಲವೊಮ್ಮೆ ಧೂಳಿನ ಕಣಗಳು ಕಣ್ಣುಗಳಲ್ಲಿ ತುರಿಕೆ ಅಥವಾ ಅಸ್ವಸ್ಥತೆಯನ್ನು ಉಂಟುಮಾಡದ ಸ್ಥಳದಲ್ಲಿ ಇರುತ್ತವೆ, ಆದರೆ ಕಣ್ಣಿನ ವ್ಯವಸ್ಥೆಯು ಅವುಗಳನ್ನು ತೆಗೆದುಹಾಕಲು ನೀರಿನ ಸಹಾಯವನ್ನು ಪಡೆಯುತ್ತದೆ. ಇದಲ್ಲದೆ, ಕಣ್ಣಿನಿಂದ ಪದೇ ಪದೇ ನೀರು ಬರಲು ಕಾರಣವಾಗುವ ಕೆಲ ವೊಂದು ಆರೋಗ್ಯ ಸಮಸ್ಯೆಗಳು ಇವೆ, ಅವುಗಳ ಬಗ್ಗೆ ನೋಡೋಣ....



**ಈ ಕಾಯಿಲೆಗಳಲ್ಲಿ, ಕಣ್ಣುಗಳು ಪದೇ ಪದೇ ನೀರು ಹರಿಸುತ್ತವೆ:** ಎಂಎಂಜಿ ಆಸ್ಪತ್ರೆಯ ಹಿರಿಯ ಕಣ್ಣಿನ ಶಸ್ತ್ರಚಿಕಿತ್ಸಕ ಡಾ. ನರೇಂದ್ರ ಕುಮಾರ್, ಅವರು ಹೇಳುವ ಪ್ರಕಾರ ಯಾವುದೇ ಕಾರಣವಿಲ್ಲದೆ ಕಣ್ಣುಗಳು ನೀರು ಬರುತ್ತಲೇ ಇದ್ದರೆ ಕಣ್ಣೀರಿನ ಗ್ರಂಥಿಗಳ ಸಮಸ್ಯೆಗಳ ಲಕ್ಷಣವಾಗಿದೆ ಎಂದು ಹೇಳಲಾಗುತ್ತದೆ. ಕಣ್ಣೀರಿನ ನಾಳದಲ್ಲಿ ಯಾವುದೇ ಅಡಚಣೆ ಇದ್ದರೆ, ಕಣ್ಣುಗಳು ಪದೇ ಪದೇ ನೀರು ಹರಿಸುತ್ತವೆ ಎನ್ನುತ್ತಾರೆ ವೈದ್ಯರು

**Bell's palsy ಎನ್ನುವ ಆರೋಗ್ಯ ಸಮಸ್ಯೆ:** ಇದಲ್ಲದೆ, ಕಣ್ಣು ರೆಪ್ಪೆಗಳಲ್ಲಿ ಏನಾದರೂ ಸಮಸ್ಯೆ ಇದ್ದರೆ, ಕಣ್ಣುಗಳಿಂದ ನೀರು ಬರುತ್ತದೆ. ಕಣ್ಣುರೆಪ್ಪೆಗಳು ಹೊರಕ್ಕೆ ಅಥವಾ ಒಳಮುಖವಾಗಿ ತಿರುಗುವುದರಿಂದಲೂ ಇದು ಸಂಭವಿಸುತ್ತದೆ. ಇನ್ನೂ ಕೆಲವೊಮ್ಮೆ Bell's palsyಎನ್ನುವ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಾಗಲೂ ಕೂಡ, ಕಣ್ಣುಗಳಲ್ಲಿ ಈ ರೀತಿಯಾಗಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆಯಂತೆ Bell's palsy ಎನ್ನುವುದು ನರ ವೈಜ್ಞಾನಿಕ ಅಸ್ವಸ್ಥತೆಯಾಗಿದ್ದು ಮುಖದ ಸ್ನಾಯುಗಳ ಮೇಲೆ ಪರಿಣಾಮ ಬೀರುತ್ತವೆ. ಇದರಿಂದಾಗಿ ಕಣ್ಣುಗಳು ಮುಚ್ಚುವ ಅಥವಾ ಕಣ್ಣುರೆಪ್ಪೆಗಳು ಸರಿಯಾಗಿ ಮುಚ್ಚದಿರುವ ಸಮಸ್ಯೆ ಉಂಟಾಗಬಹುದು. ಇದರಿಂದಾಗಿ ಕಣ್ಣುಗಳು ಪದೇ ಪದೇ ನೀರು ಬರುತ್ತವೆಯಂತೆ

**ಕೊನೆ ಮಾತು:** ಕಣ್ಣುಗಳ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಬೇಕು ಎಂದರೆ ನಮ್ಮ ಆಹಾರ ಪದ್ಧತಿಯಲ್ಲಿ ಕಣ್ಣುಗಳಿಗೆ ಅಗತ್ಯವಾದ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ ಆಹಾರಗಳನ್ನು ಸೇರಿಸಿ ಕೊಳ್ಳಬೇಕು ಹಾಗೂ ವೈದ್ಯರ ಸಲಹೆಗಳನ್ನು ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಕಣ್ಣುಗಳ ಪರೀಕ್ಷೆ ಮಾಡಿಸಿಕೊಳ್ಳಬೇಕು

**ವೈದ್ಯರಿಂದ ತಪಾಸಣೆ ಮಾಡಿಸಿ**

**ನಿಮ್ಮ ಕಣ್ಣುಗಳು ಪದೇ ಪದೇ ನೀರು ಬರುತ್ತಿದ್ದರೆ, ಕೂಡಲೇ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಬೇಕು ಎನ್ನುತ್ತಾರೆ ಡಾ. ನರೇಂದ್ರ ಕುಮಾರ್ ಅವರು. ಅಲ್ಲದೆ ಈ ಸಮಸ್ಯೆಗೆ ನುರಿತ ತಜ್ಞರ ಸಲಹೆ ಪಡೆದುಕೊಳ್ಳದೆ ಮನೆ ಮದ್ದುಗಳನ್ನು ಮಾಡುವುದು ಹಾಗೂ ನಿರ್ಲಕ್ಷ್ಯ ಮಾಡುವುದರಿಂದ ಕೂಡ ಕಣ್ಣುಗಳಿಗೆ ಹಾನಿಕಾರಕವಾಗಬಹುದು. ವೈದ್ಯರು ನಿಮ್ಮನ್ನು ಪರೀಕ್ಷಿಸಿ, ಕಣ್ಣುಗಳಿಂದ ಆಗಾಗ್ಗೆ ನೀರು ಬರುವುದಕ್ಕೆ ನಿಜವಾದ ಕಾರಣವನ್ನು ಕಂಡುಹಿಡಿದು ನಂತರ ನಿಮಗೆ ಚಿಕಿತ್ಸೆ ನೀಡುತ್ತಾರೆ. ನೆನಪಿಡಿ ಈ ಸಮಸ್ಯೆಯನ್ನು ನಿರ್ಲಕ್ಷ್ಯ ಮಾಡುತ್ತಾ ಹೋದರೆ ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸಿ ಕೊಳ್ಳುವ ಸಾಧ್ಯತೆ ಇರುತ್ತದೆ**

# ಗರ್ಭಿಣಿಯರು ಸೀಬೆಹಣ್ಣು ತಿನ್ನಬಹುದಾ?

ಸೀಬೆ ಅಥವಾ ಪೇರಲೆ ಹಣ್ಣಿನ ವಿಷಯಕ್ಕೆ ಬಂದರೆ, ಈ ಹಣ್ಣಿನಲ್ಲಿ ಪೌಷ್ಟಿಕಾಂಶದ ಅಧಿಕ ಪ್ರಮಾಣದಲ್ಲಿ ಕಂಡುಬರುವುದರಿಂದ, ಈ ಹಣ್ಣನ್ನು ಆಗಾಗ ಸೇವನೆ ಮಾಡುವ ಅಭ್ಯಾಸ ಮಾಡುತ್ತಾ ಬಂದರೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ಆದಾಗ್ಯೂ, ನೀವು ಈ ಹಣ್ಣನ್ನು ಮಿತವಾಗಿ ಸೇವಿಸಬೇಕು. ಗರ್ಭಿಣಿಯರು ಪ್ರತಿದಿನ 100-125 ಗ್ರಾಂ ಸೀಬೆಹಣ್ಣು ಸೇವಿಸುವುದು ಸುರಕ್ಷಿತವೆಂದು ಪರಿಗಣಿಸಲಾಗಿದೆ. ಬಡವರ ಸೇಬು ಎಂದೇ ಕರೆಯಲ್ಪಡುವ ಸೀಬೆ ಅಥವಾ ಪೇರಳೆ ಹಣ್ಣು, ಮನುಷ್ಯನ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು ತಜ್ಞರು ಕೂಡ ಸಲಹೆ ನೀಡುತ್ತಾರೆ. ಅದರಲ್ಲೂ ಚಳಿಗಾಲದಲ್ಲಿ ಹೇರಳವಾಗಿ ಸಿಗುವ ಈ ಹಣ್ಣನ್ನು ಆಗಾಗ ಮಿತವಾಗಿ ಸೇವನೆ ಮಾಡುವ ಅಭ್ಯಾಸ ಮಾಡಿಕೊಂಡರೆ, ದೀರ್ಘಕಾಲದ ಆರೋಗ್ಯ ಸಮಸ್ಯೆಗಳನ್ನು ದೂರ ಮಾಡಬಹುದು ಎನ್ನಲಾಗುತ್ತದೆ. ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡು ಬರುವ ವಿಟಮಿನ್ ಸಿ ಹಾಗೂ ಆಂಟಿ ಆಕ್ಸಿಡೆಂಟ್ ಪ್ರಮಾಣ ಹೇರಳವಾಗಿ ಕಂಡುಬರುವುದರಿಂದ ದೇಹದ ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಈ ಹಣ್ಣು ಪ್ರಮುಖ ಪಾತ್ರವಹಿಸುತ್ತದೆ. ಇನ್ನೂ ಮುಖ್ಯವಾಗಿ ಆರೋಗ್ಯ ತಜ್ಞರು ಹೇಳುವ ಪ್ರಕಾರ ಕಿತ್ತಳೆ ಹಣ್ಣುಗಳಿಗೆ ಹೋಲಿಸಿದರೆ ಈ ಹಣ್ಣಿನಲ್ಲಿ ವಿಟಮಿನ್ ಸಿ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆಯಂತೆ! ಆದರೆ ಇಷ್ಟೆಲ್ಲಾ ಪ್ರಯೋಜನಗಳನ್ನು ಒಳಗೊಂಡಿರುವ ಈ ಹಣ್ಣನ್ನು ಗರ್ಭಿಣಿಯರು ಸೇವನೆ ಮಾಡಬಹುದಾ ಈ ಬಗ್ಗೆ ತಜ್ಞರು ಹೇಳುವುದೇನು ನೋಡೋಣ ಬನ್ನಿ



**ವೈದ್ಯರು ಏನು ಹೇಳುತ್ತಾರೆ?:** ಇನ್‌ಸ್ಟಾಗ್ರಾಮ್ ವಿಡಿಯೋದಲ್ಲಿ, ಸ್ತ್ರೀರೋಗ ತಜ್ಞೆ ಡಾ. ಮನೀಷಾ ಮೀನಾ ಗುಪ್ತಾ ಅವರು ಹೇಳುವ ಪ್ರಕಾರ ಚಳಿಗಾಲದಲ್ಲಿ ಗರ್ಭಿಣಿಯರು ತಮ್ಮ ಆಹಾರದಲ್ಲಿ ಪೇರಳೆಯನ್ನು ಖಂಡಿತವಾಗಿ ಸೇರಿಸಿಕೊಳ್ಳಬೇಕು ಎಂದು ಸಲಹ ನೀಡುತ್ತಾರೆ. ಅವರ ಪ್ರಕಾರ, ಪೇರಳೆ ಅಥವಾ ಸೀಬೆಹಣ್ಣು ಚಳಿಗಾಲದಲ್ಲಿ ಅತ್ಯಂತ ಪ್ರಯೋಜ ನಕಾರಿ ಹಣ್ಣುಗಳಲ್ಲಿ ಒಂದಾಗಿದೆ. ಪೇರಳೆಯು ಉತ್ತಮ ಪ್ರಮಾಣದ ವಿಟಮಿನ್ ಸಿ ಅನ್ನು ಹೊಂದಿರುತ್ತದೆ, ಇದು ದೇಹದಲ್ಲಿ ಕಬ್ಬಿಣದ ಹೀರಿಕೊಳ್ಳುವಿಕೆಯನ್ನು ಸುಧಾರಿಸುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದು ಗರ್ಭಿಣಿಯರಿಗೆ ಶೀತ ಮತ್ತು ಜ್ವರದಂತಹ ಸಮಸ್ಯೆಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಪೇರಳೆ ಹಣ್ಣಿನಲ್ಲಿ ನೀರಿನಾಂಶ ಸಮೃದ್ಧವಾಗಿದೆ, ಇದು ದೇಹವನ್ನು ಹೈಡ್ರೀಕರಿಸಲು ಸಹಾಯ ಮಾಡುತ್ತದೆ ಮತ್ತು ನಿರ್ಜಲೀಕರಣವನ್ನು ತಡೆಯುತ್ತದೆ. ಇನ್ನೂ ಪ್ರಮುಖವಾಗಿ ಗರ್ಭಿಣಿಯರ ದೇಹದ ರಕ್ತದಲ್ಲಿನ ಸಕ್ಕರೆಯ ಅಂಶ ಏರಿಕೆ ಆಗದಂತೆ ತಡೆಯುತ್ತದೆ

## ಬೆಳೆ ಕಟಾವು ಪ್ರಯೋಗ ಹಾಗೂ ಜನನ-ಮರಣ ನೊಂದಣಿ, ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ

# ಕೃಷಿ ಅಂಕಿ ಅಂಶಗಳ 2ನೇ ತ್ರೈಮಾಸಿಕ ಸಭೆ ಹಾಗೂ ನಾಗರಿಕ ನೋಂದಣಿ ಪದ್ಧತಿ

• ಉದಯವಾಹಿನಿ ಚಿತ್ರದುರ್ಗ

ಬೆಳೆ ಕಟಾವು ಪ್ರಯೋಗ ಹಾಗೂ ಜನನ-ಮರಣ ನೋಂದಣಿ ಕಾರ್ಯ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ತೋರುವ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಕೃಷಿ ಅಂಕಿ ಅಂಶಗಳ ಎರಡನೇ ತ್ರೈಮಾಸಿಕ ಸಭೆ ಹಾಗೂ ನಾಗರಿಕ ನೋಂದಣಿ ಪದ್ಧತಿ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


☛ ಉದಯವಾಹಿನಿ ಚಿತ್ರ

**ಲೋಪ ಉಂಟಾದರೆ ಅಧಿಕಾರಿಗಳೆ ಹೊಣೆ**

ಸಮಯಕ್ಕೆ ಸರಿಯಾಗಿ ಕಟಾವು ಪ್ರಯೋಗ ಮಾಡದೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿ ರೈತರಿಗೆ ಸಮಸ್ಯೆ ಅಥವಾ ನಷ್ಟ ಉಂಟಾದರೆ ಸಂಬಂಧಪಟ್ಟವರಿಂದಲೇ ನಷ್ಟ ಭರಿಸಲು ಕ್ರಮ ಕೈಗೊಳ್ಳಲಾಗುವುದು. ನಿಯೋಜಿಸಿದ ಅಧಿಕಾರಿಗಳೇ ಖುದ್ದಾಗಿ ಜಮೀನುಗಳಿಗೆ ಭೇಟಿ ನೀಡಿ, ಬೆಳೆ ಕಟಾವು ಪ್ರಯೋಗ ನಡೆಸಬೇಕು. ಈ ಹಿಂದೆ ಬೆಳೆ ಕಟಾವು ಪ್ರಯೋಗದಲ್ಲಿ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಈ ಹಿಂದೆ ಅಕ್ರಮವಾಗಿ ಬೆಳೆ ಪರಿಹಾರ ಧನವನ್ನು ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಪೊಲೀಸ್ ದೂರು ದಾಖಲಾಗಿದೆ. ಪ್ರಕರಣದ ತನಿಖೆಗೆ ಸಮಿತಿ ನೇಮಿಸಲಾಗಿದೆ. ವರದಿ ಆಧರಿಸಿ ಶೀಘ್ರದಲ್ಲೇ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಆಗಲಿದೆ. ತಹಶೀಲ್ದಾರ್ ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಬೆಳೆ ಕಟಾವು ಪ್ರಯೋಗದ ಕುರಿತು ತಮ್ಮ ಹಂತದಲ್ಲಿ ಸಮನ್ವಯ ಸಭೆಯನ್ನು ನಡೆಸಬೇಕು. ಸಭೆ ನಡೆಸದೆ ಲೋಪ ಉಂಟಾದರೆ ಅಂತಹ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ತಿಳಿಸಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ನಮೂನೆ-1ರ 3,824 ಬೆಳೆ ಕಟಾವು ಪ್ರಯೋಗ ಪೂರ್ಣಗೊಂಡಿವೆ. ನಮೂನೆ-2ರಲ್ಲಿ 3,495 ಬೆಳೆ ಕಟಾವು ಪ್ರಯೋಗಗಳಲ್ಲಿ 329 ಪ್ರಯೋಗಗಳು ಪೂರ್ಣಗೊಂಡಿಲ್ಲ. ಈ ಪೈಕಿ ಕಂದಾಯ ಇಲಾಖೆಗೆ 185, ಗ್ರಾಮೀಣಾಭಿವೃದ್ಧಿ ಇಲಾಖೆಗೆ 79, ಕೃಷಿ ಇಲಾಖೆಗೆ 42, ತೋಟಗಾರಿಕೆ ಇಲಾಖೆಗೆ 23 ಪ್ರಯೋಗಗಳು ಬಾಕಿಯಿವೆ. ಪ್ರಸಕ್ತ ಹಿಂಗಾರು ಹಂಗಾಮಿನಲ್ಲಿ ಅಧಿಸೂಚಿತ 1,026 ಮತ್ತು ಅಧಿಸೂಚಿತವಲ್ಲದ 50 ಸೇರಿ ಒಟ್ಟು 12 ಬೆಳೆಗಳಿಗೆ 1,076 ಬೆಳೆ ಕಟಾವು ಪ್ರಯೋಗ ಕೈಗೊಳ್ಳಲು ಆಯ್ಕೆಯಾಗಿವೆ.

ಕೃಷಿ ಅಂಕಿ ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಸಹಾಯಕ ಕೃಷಿ ನಿರ್ದೇಶಕರು ಹಾಗೂ ತಹಶೀಲ್ದಾರ್ ಅವರ ಜಂಟಿ ದೃಢೀಕರಣದ ಪ್ರಸ್ತಾವದ ಮೇರೆಗೆ 'ಬೆಳೆ ಸಮೀಕ್ಷೆ' ಆ್ಯಪ್‌ನಲ್ಲಿ ಬೆಳೆ ಕ್ಷೇತ್ರ, ವಿಸ್ತೀರ್ಣ, ಮರು ಹೊಂದಾಣಿಕೆ ಮಾಡಲು ಅವಕಾಶ ನೀಡಲಾಗಿದೆ. ಜಿಲ್ಲೆಯ 1,117 ಹಳ್ಳಿಗಳಲ್ಲಿ 7ನೇ ಸಣ್ಣ ನೀರಾವರಿ ಸಮೀಕ್ಷೆಯನ್ನು ಈಗಾಗಲೇ ಆರಂಭಿಸಲಾಗಿದೆ ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ರವಿಕುಮಾರ್.ಎನ್ ಸಭೆಯಲ್ಲಿ ಮಾಹಿತಿ ನೀಡಿದರು.

**ಜನನ ಪ್ರಮಾಣ ಪತ್ರ ವಿತರಣೆ ಆಂದೋಲನಕ್ಕೆ ಸೂಚನೆ**

ಜಿಲ್ಲೆಯಲ್ಲಿ ಶೇ.99 ರಷ್ಟು ಸಾಂಸ್ಥಿಕ ಹೆರಿಗೆಗಳು ಆಗುತ್ತಿವೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮಗು ಜನನವಾದ ದಿನದಂದೇ ನೊಂದಣಿ ಮಾಡಲು ಕ್ರಮ ವಹಿಸಬೇಕು. ಹೆರಿಗೆ ನಂತರ ಆಸ್ಪತ್ರೆಯಿಂದ ತಾಯಿ ಮಗು ಬಿಡುಗಡೆಯಾಗುವ ಸಮಯದಲ್ಲಿಯೇ ಮಗುವಿನ ಜನನ ಪ್ರಮಾಣ ಪತ್ರವನ್ನು ನೀಡಬೇಕು. ಈ ಸಂಬಂಧ ಜಿಲ್ಲೆಯಾದ್ಯಂತ ಜನನ ಪ್ರಮಾಣ ಪತ್ರ ವಿತರಣೆ ಆಂದೋಲನೆ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಆರೋಗ್ಯ ಇಲಾಖೆ ಅಧಿಕಾರಿಗಳಗೆ ಸೂಚಿಸಿದರು. ಜನನ ಹಾಗೂ ಮರಣ ದಿನದಿಂದ 21 ದಿನದ ಒಳಗಾಗಿ ನೊಂದಣಿ ಮಾಡುವುದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯವಾಗಿದೆ. ಬಳಿಕ ವಿಳಂಬವಾಗಿ ಜನನ ಹಾಗೂ ಮರಣ ನೊಂದಣಿಯನ್ನು ಮಾಡಿದ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ತಾಲ್ಲೂಕು ಮಟ್ಟದ ನಾಗರಿಕ ನೊಂದಣಿ ಪದ್ಧತಿಯ ಸಮನ್ವಯ ಸಮಿತಿ ಸಭೆ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ನಿರ್ದೇಶನ ನೀಡಿದರು.

**ಕಠಿಣ ಕ್ರಮಕ್ಕೆ ಶಿಫಾರಸ್ಸಿಗೆ ಸೂಚನೆ**

ಪ್ರಸಕ್ತ ವರ್ಷದ ಕಳೆದ ಜುಲೈ ಮಾಹೆಯಿಂದ ಅಕ್ಟೋಬರ್ ವರೆಗೆ ಪ್ರತಿ ತಾಲ್ಲೂಕಿನಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಕೃಷಿ ಅಂಕಿ ಅಂಶಗಳ ಸಮನ್ವಯ ಸಮಿತಿ 04 ಸಭೆ ನಡೆಸಬೇಕಿತ್ತು, ಆದರೆ ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕಿನಲ್ಲಿ 2 ಸಭೆಗಳನ್ನು ಮಾತ್ರ ನಡೆಸಲಾಗಿದೆ. ಸಭೆ ನಡೆಸಲು ವಿಫಲರಾದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಬೇಕು. ಕಳೆದ ಸಭೆಯಲ್ಲಿ ಈ ಸೂಚನೆ ನೀಡಿದ್ದರೂ, ಹೊಸದುರ್ಗ ತಾಲ್ಲೂಕು ಅಂಕಿ ಸಂಖ್ಯೆ ಸಂಗ್ರಹಣೆ ಇಲಾಖೆ ಅಧಿಕಾರಿ ನಿರ್ಲಕ್ಷ್ಯ ತೋರಿದ್ದಾರೆ. ಇವರ ವಿರುದ್ಧ ಕಠಿಣ ಕ್ರಮಕ್ಕೆ ಶಿಫಾರಸ್ಸು ಮಾಡುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ನಿರ್ದೇಶನ ನೀಡಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ರವಿಕುಮಾರ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ 1,347 ಹಾಗೂ ನಗರ ಪ್ರದೇಶದಲ್ಲಿ 14 ನೋಂದಣಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ಜನವರಿಯಿಂದ ನವೆಂಬರ್ ವರೆಗೆ 17,861 ಜನನ ಹಾಗೂ 15,239 ಮರಣ ನೊಂದಣಿಯಾಗಿವೆ. ಜಿಲ್ಲೆಯಲ್ಲಿ ಬಾಕಿಯಿದ್ದ ಹಳೆಯ 32,650 ಜನನ ಮತ್ತು ಮರಣ ದಾಖಲೆಗಳ ಸ್ಕ್ಯಾನಿಂಗ್ ಹಾಗೂ ಡಿಜಟಲೀಕರಣ ಕಾರ್ಯವನ್ನು ಖಾಸಗಿ ಕಂಪನಿಗೆ ಟೆಂಡರ್ ನೀಡಲಾಗಿದೆ ಎಂದು ಹೇಳಿದರು. ಸಭೆಯಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ಸವಿತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಸಹಾಯಕ ಅಂಕಿ-ಸಂಖ್ಯೆ ಸಂಗ್ರಹಣಾಧಿಕಾರಿ ಅಶ್ವತ್ಥಾಮ, ವೀಣಾ, ಚಂದ್ರಪ್ಪ, ಸಹಾಯಕ ನಿರ್ದೇಶಕರುಗಳಾದ ಶಶಿರೇಖಾ, ಯಾಸಿನ್ ಅಧಿಕಾರಿಗಳು ಇದ್ದರು.

# ಮಂತ್ರಿಗಳು ಭ್ರಷ್ಟರಾದರೆ ಲಕ್ಷಾಂತರ ರೂಪಾಯಿಗಳ ವಾಚ್ ಉಡುಗೊರೆ ಲಭಿಸುತ್ತದೆ

• ಉದಯವಾಹಿನಿ ಚಿಕ್ಕಮಗಳೂರು

ಸರಳವಾಗಿ ಹೇಳುವುದಾದರೆ, ಜನರ ಕಷ್ಟಕ್ಕೆ ನೆರವಾಗದ ಸರ್ಕಾರ ಇದ್ದೂ ಸತ್ತಂತೆ. ರೈತರ ಆತ್ಮಹತ್ಯೆಯಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಕಬ್ಬು, ಭತ್ತ, ಮೆಕ್ಕೆಜೋಳ, ತೊಗರಿ ಬೆಳೆಗಾರರು ಸರ್ಕಾರದ ದೆಸೆಯಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಇದಾವುದಕ್ಕೂ ಸ್ಪಂದಿಸುತ್ತಿಲ್ಲ. ಇನ್ನು ಮಲೆನಾಡಿನಲ್ಲಿ ಕಾಡುಪ್ರಾಣಿಗಳ ಕಾಟದಿಂದ ರೈತರು ಬೇಸತ್ತಿದ್ದಾರೆ. ಸರ್ಕಾರದ ವಿರುದ್ಧ ಚಳುವಳಿಗೆ ಸಿದ್ಧರಾಗಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಹೇಳಿದ್ದಾರೆ. ಅವರು ಇಂದು ಉತ್ತರ ಕನ್ನಡದ ಶಿರಸಿಯಲ್ಲಿ ಮಾಧ್ಯಮಗಳೊಡನೆ ಮಾತನಾಡುತ್ತಿದ್ದರು.



ನೆರೆ ಪರಿಹಾರವೂ ರೈತರ ಖಾತೆಗಳಿಗೆ ಪೂರ್ಣ ಪ್ರಮಾಣದಲ್ಲಿ ಪಾವತಿಯಾಗಿಲ್ಲ. ಖರೀದಿ ಕೇಂದ್ರಗಳನ್ನೂ ತೆರೆದಿಲ್ಲ. ಕಬ್ಬು ಬೆಳೆಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ ಎಫ್‌ಆರ್‌ಪಿ ಒದಗಿಸುವ ಸಾಮರ್ಥ್ಯ ಮತ್ತು ಯೋಗ್ಯತೆ ಎರಡೂ ರಾಜ್ಯ ಸರ್ಕಾರಕ್ಕಿಲ್ಲ. ಇದು ಕೇವಲ ದಲ್ಲಾಳಿಗಳ, ಲೂಟಿಕೋರರ ಪಾಲಿಗೆ ಬದುಕಿದೆ. ಉಪ ಲೋಕಾಯುಕ್ತರು ಇದು 63% ಕಮಿಷನ್ ಹೊಡೆಯುತ್ತಿರುವ ಸರ್ಕಾರ ಎಂದಿದ್ದಾರೆ. ಗುತ್ತಿಗೆದಾರರನ್ನು ಕೇಳಿದರೆ ಅವರು ಈ ಸರ್ಕಾರ 80% ಕಮಿಷನ್ ಹೊಡೆಯುತ್ತಿದೆ ಎಂಬ ಸತ್ಯ ಹೇಳುತ್ತಾರೆ. ಭ್ರಷ್ಟಾಚಾರ, ಬೆಲೆ ಏರಿಕೆಗೆ ಸುದ್ದಿಯಾಗಿದ್ದು ಬಿಟ್ಟರೆ, ಯಾವುದೇ ಒಳ್ಳೆಯ ವಿಚಾರಕ್ಕೆ ಸರ್ಕಾರ ಸುದ್ದಿಯಾಗಿಲ್ಲ ಎಂದರು. ಮುಖ್ಯಮಂತ್ರಿಗಳು ನಾಟಿಕೋಳಿ ತಿಂದದ್ದು ರಾಜ್ಯದ ಜನರಿಗೆ ಶುಭ ಸುದ್ದಿಯಲ್ಲ. ಡಿಕೆ ಶಿವಕುಮಾರ್ ಅಥವಾ ಸಿದ್ದರಾಮಯ್ಯನವರು ಎಷ್ಟು ಲಕ್ಷ ಬೆಲೆಯ ವಾಚ್ ಕಟ್ಟಿದ್ದಾರೆ ಎನ್ನುವುದು ಜನರಿಗೆ ಸಂತೋಷ ಕೊಡುವ ವಿಚಾರವಲ್ಲ. ಸರ್ಕಾರ ಒಳ್ಳೆ ರಸ್ತೆ ಮಾಡಿದರೆ, ಕೈಗಾರಿಕೆಗಳನ್ನು ತೆರೆದರೆ, ಉದ್ಯೋಗ ಸೃಷ್ಟಿಸಿದರೆ ಅದು ಒಳ್ಳೆಯದಾಗುತ್ತದೆ ಅಷ್ಟೇ ಎಂದು ಅಭಿಪ್ರಾಯ ಪಟ್ಟರು.

ಅನುದಾನ ಬಿಡುಗಡೆಯಾಗುತ್ತಿದೆ. ಆದರೆ, ಅದರ ಅನುಷ್ಠಾನ ಆಗುವ ಬದಲು ಲೂಟಿಯಾಗುತ್ತಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ 187 ಕೋಟಿ ರೂಪಾಯಿ ಬಿಡುಗಡೆಯಾಗಿತ್ತು. ಅದನ್ನು ಕಾಂಗ್ರೆಸ್ ಪಕ್ಷ ಚುನಾವಣೆಗೆ ಖರ್ಚು ಮಾಡಿದೆ. ಮಂತ್ರಿಗಳು ಪ್ರಾಮಾಣಿಕವಾಗಿದ್ದರೆ ಅವರಿಗೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವಾಚ್ ಕೊಡುತ್ತಾರಾ? ಅವರು ಭ್ರಷ್ಟರಾಗಿದ್ದರೆ, ಅವರಿಗೆ ಲಕ್ಷಾಂತರ ರೂಪಾಯಿಯ ವಾಚ್, ಫೋನ್ ಇಷ್ಟವಿದ್ದರೆ ಅದನ್ನು ತಂದು ಕೊಡುತ್ತಾರೆ. ಗೆಜ್ಜೆ ಸದ್ದು, ಬಳೆ ಸದ್ದು ಇಷ್ಟಪಡುವವರಾಗಿದ್ದರೆ ಅದನ್ನೂ ತರುತ್ತಾರೆ ಎಂದು

> ರೈತರ, ನಾಗರಿಕರ ಸಮಸ್ಯೆಗೆ ಇವರು ಕಣ್ಣೂ ಹಾಯಿಸುವುದಿಲ್ಲ, ಕಿವಿಯೂ ಕೊಡುವುದಿಲ್ಲ. ಆದರೆ, ಒಳ್ಳೆ ನಾಟಿ ಕೋಳಿ ಇದೆ ಎಂದರೆ ಬಾಯಿ ಚಪ್ಪರಿಸಿಕೊಂಡು, ವಿಧಾನಸಭೆ ಅಧಿವೇಶನವನ್ನೂ ಬಿಟ್ಟು, ರೈತರ ಹೋರಾಟವನ್ನೂ ಕಡೆಗಣಿಸಿ ಓಡೋಡಿ ಬರುತ್ತಾರೆ. ನಿಮಗೆ ಅನುದಾನ ಬೇಕೆಂದಾದರೆ, ಒಳ್ಳೆ ನಾಟಿಕೋಳಿ ಬಾಡೂಟ ಮಾಡಿಕೊಡುತ್ತೇವೆಂದು ಕರೆಯಿರಿ. ಆಗಾದರೂ ಮುಖ್ಯಮಂತ್ರಿಗಳು ಬರುತ್ತಾರೆಂದು ರಸ್ತೆಗಳು ಸರಿಯಾಗಬಹುದೇನೋ. ಇಲ್ಲವಾದರೆ ಯಾವ ಊರುಗಳ ರಸ್ತೆಗಳೂ ಸರಿಯಾಗಲು ಸಾಧ್ಯವಿಲ್ಲ. -ಸಿ.ಟಿ ರವಿ

ರವಿ ವ್ಯಂಗ್ಯವಾಡಿದರು. ಈ ಸರ್ಕಾರ ಈಗಾಗಲೇ ರಾಜ್ಯದ ಜನರ ವಿಶ್ವಾಸ ಕಳೆದುಕೊಂಡಿದೆ. ತಾಂತ್ರಿಕವಾಗಿ, ಸಂಖ್ಯೆಯ ಲೆಕ್ಕಾಚಾರದಲ್ಲಿ ಸರ್ಕಾರ ಉಳಿದುಕೊಂಡಿದೆ. ಅವರಿಗೆ ಅಷ್ಟು ವಿಶ್ವಾಸವಿದ್ದರೆ, ನನ್ನ ಸವಾಲು ಸ್ವೀಕರಿಸಿ ಚುನಾವಣೆಗೆ ಹೋಗಲಿ. ಮುಖ್ಯಮಂತ್ರಿ ಉಪ ಮುಖ್ಯಮಂತ್ರಿಗಳೇ ಚುನಾವಣೆಯಲ್ಲಿ ಗೆಲ್ಲಲು ಕಷ್ಟವಿದೆ. ಜನರೇ ಈಗ ಬೀದಿಯಲ್ಲಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿದಿದ್ದಾರೆ ಎಂದು ರವಿ ಹೇಳಿದರು.

# ಸಿಬ್ಬಂದಿ ಮೇಲೆ ಕೈದಿಗಳಿಂದ ಹಲ್ಲೆ

• ಉದಯವಾಹಿನಿ ಕಾರವಾರ

ಇಲ್ಲಿನ ಜಿಲ್ಲಾಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳಿಬ್ಬರು ಶನಿವಾರ ಕಾರಾಗೃಹ ಅಧಿಕಾರಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ.

ಮಂಗಳೂರು ಮೂಲದ ರೌಡಿ ಶೀಟರ್‌ಗಳಾದ ಮೊಹ್ಮದ್ ಅಬ್ದುಲ್ ಫಯಾನ್ ಹಾಗೂ ಕೌಶಿಕ ನಿಹಾಲ್ ಹಲ್ಲೆ ನಡೆಸಿದ ಆರೋಪಿಗಳು. ಡಕಾಯತಿ ಸೇರಿದಂತೆ 12ಕ್ಕೂ ಹೆಚ್ಚು ಗಂಭೀರ ಪ್ರಕರಣಗಳಲ್ಲಿ ಆರೋಪಿಗಳಾಗಿರುವ ಇವರನ್ನು, ಮಂಗಳೂರು ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆ ಹೆಚ್ಚಾದ ಕಾರಣ ಕಾರವಾರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು. ಮಾದಕ ವಸ್ತು ಒದಗಿಸುವಂತೆ ಗಲಾಟೆ ಮಾಡಿದ ಕೈದಿಗಳು ಪರಸ್ಪರ ಹಲ್ಲೆ ನಡೆಸಿಕೊಂಡಿದ್ದಾರೆ.


☛ ಉದಯವಾಹಿನಿ ಚಿತ್ರ

ನಂತರ ಜೈಲರ್ ಕಲ್ಲಪ್ಪ ಗಸ್ತಿ, ಇತರ ಮೂವರು ಸಿಬ್ಬಂದಿ ಮೇಲೆ ಹಲ್ಲೆಗೈದಿದ್ದಾರೆ ಎಂದು ಕಾರಾಗೃಹ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರಾಗೃಹದಲ್ಲಿ ಕದ್ದುಮುಚ್ಚಿ ಮಾದಕ ದ್ರವ್ಯಗಳನ್ನು ಕೈದಿಗಳು ಪಡೆದುಕೊಳ್ಳುತ್ತಿದ್ದರು. ಕೆಲ ದಿನಗಳಿಂದ ಇದಕ್ಕೆ ಕಡಿವಾಣ ಬಿದ್ದಿದೆ. ಇದೇ ಕಾರಣಕ್ಕೆ ಮಂಗಳೂರು ಕಾರಾಗೃಹದಿಂದ ಇಲ್ಲಿಗೆ ಸ್ಥಳಾಂತರಗೊಂಡಿದ್ದ ಕೈದಿಗಳಿಬ್ಬರು ಗಲಾಟೆ ಮಾಡಿದ್ದಾರೆ' ಎಂದೂ ಹೇಳಿದರು.

# 18.98 ಲಕ್ಷ ಮೌಲ್ಯದ ಅಕ್ರಮ ಪಡಿತರ ಅಕ್ಕಿ ವಶ

• ಉದಯವಾಹಿನಿ ಕಲಬುರಗಿ

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಅಕ್ರಮವಾಗಿ ಅನ್ಯ ರಾಜ್ಯಕ್ಕೆ ಪಡಿತರ ಅಕ್ಕಿಸಾಗಿಸುತ್ತಿದ್ದ ವಾಹನಗಳ ಮೇಲೆ ದಾಳಿ ನಡೆಸಿದ ನಗರ ಪೊಲೀಸರು 18.98 ಲಕ್ಷ ರೂ ಮೌಲ್ಯದ 55 ಕ್ವಿಂಟಾಲ್ ಅಕ್ಕಿ ವಶ ಪಡಿಸಿಕೊಂಡಿದ್ದಾರೆ.


☛ ಉದಯವಾಹಿನಿ ಚಿತ್ರ

ಕಲಬುರಗಿ ನಗರದ ಸಬ್ ಅರ್ಬನ್ ಪೊಲೀಸ ಠಾಣೆ ವ್ಯಾಪ್ತಿಯ ಅಳಂದ ಚೆಕ್ ಪೋಸ್ಟ್ ಹತ್ತಿರ ಆರೋಪಿ ಬೀದರ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿ ನಿವಾಸಿ ಚಾಲಕ ನಸಿರೋದ್ದೀನ್ ಪಾಷಾಮೀಯಾ ಚಿದರಿ( 38 ) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆರೋಪಿ ಅಕ್ಕಿ ಚೀಲಗಳು ಮಲ್ಲಿಕಾರ್ಜುನ ಖೇಮಜಿ ಹಾಗೂ ಇತರರಿಗೆ ಸಂಬಂಧಿಸಿದ್ದು ಎಂದು ತಿಳಿಸಿದ್ದು ಅಕ್ಕಿ ಚೀಲಗಳನ್ನು ಗುಜರಾತ ರಾಜ್ಯದ ಅಹ್ಮದಬಾದಗೆ ಸಾಗಿಸುತ್ತಿರುವುದಾಗಿ ತಿಳಿಸಿದ್ದಾನೆ.

ಇನ್ನೊಂದು ಪ್ರಕರಣದಲ್ಲಿ ಕಲಬುರಗಿ ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಸೇಡಂ ರಸ್ತೆ ಗೀತಾ ನಗರದ ಬಳಿ ದಾಳಿ ನಡೆಸಿ ಆರೋಪಿತನಾದ ಚಾಲಕ ಬೀದರ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿ ನಿವಾಸಿ ರಾಜು ನರಸಿಂಗರಾವ್ ( 28 )ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆರೋಪಿತನು ಅಕ್ಕಿ ಚೀಲಗಳು ದುಬಲಗುಂಡಿಯ ಜಾಕೀರ ಪಾಷಾಮೀಯಾ ಚಿದ್ರಿ ಎಂಬುವವರಿಗೆ ಸಂಬಂಧಿಸಿದ್ದು ಎಂದು ತಿಳಿಸಿದ್ದು ಅಕ್ಕಿ ಚೀಲಗಳನ್ನು ಯಾದಗಿರಿಯಿಂದ ಮಹಾರಾಷ್ಟ್ರ ಹಾಗೂ ಗುಜರಾತ ರಾಜ್ಯಕ್ಕೆ ಸಾಗಿಸುತ್ತಿರುವುದಾಗಿ ತಿಳಿಸಿದ್ದಾನೆ. ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರ ನಿರ್ದೇಶನದಂತೆ, ಉಪ ಪೊಲೀಸ್ ಆಯುಕ್ತರಾದ ಕನ್ನಿಕಾ ಸಿಕ್ರಿವಾಲ್, ಪ್ರವೀಣ ಹೆಚ್. ನಾಯಕ್, ಸಹಾಯಕ ಪೊಲೀಸ್ ಆಯುಕ್ತ ಬಸವೇಶ್ವರ ಹೀರಾ ಅವರ ಮಾರ್ಗದರ್ಶನದಲ್ಲಿ ಭಾಗವಹಿಸಿತ್ತು.


# ಡಾ.ಅಂಬೇಡ್ಕರ್ ರವರ 69ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ ಗೌರವ ಸಮರ್ಪಣೆ

• ಉದಯವಾಹಿನಿ ಯಾದಗಿರಿ

ಸಂಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ 69ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ನಗರದ ಅಂಬೇಡ್ಕರ್ ಸರ್ಕಲ್ ದಲ್ಲಿರುವ ಡಾ.ಬಿ. ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು , ಜಗತ್ತೇ ಮೆಚ್ಚುವಂತಹ ಮತ್ತು ಸರ್ವ ಸಮುದಾಯಗಳಿಗೆ ಸಮಾನ ಅವಕಾಶ, ನ್ಯಾಯ ಸಿಗುವಂತಹ ಶ್ರೇಷ್ಠ ಸಂಧಾನ ನೀಡಿದವರು ಡಾ.ಬಿ.ಆರ್. ಅಂಬೇಡ್ಕರ್ ಅವರು ಎಂದು ಬಣ್ಣಿಸಿದರು. ನ್ಯಾಯವಾದಿ, ಅರ್ಥಶಾಸ್ತ್ರಜ್ಞ, ತತ್ವಜ್ಞಾನಿ, ಸಮಾಜ ಸುಧಾರಕ ಮತ್ತು ರಾಷ್ಟ್ರನಿರ್ಮಾಣಕಾರರಾಗಿ ಅವರ ಅರತ ಶ್ರಮ ಮತ್ತು ಪ್ರಯತ್ನಗಳು ಆಧುನಿಕ ಭಾರತಕ್ಕೆ ಭದ್ರ ಬುನಾದಿ ಹಾಕಿವೆ ಎಂದರು.

ಜಿಲ್ಲಾಡಳಿತದ ಪರವಾಗಿ ಮಾಲಾರ್ಪಣೆ ಮಾಡಿ ಮಾತನಾಡಿದ ಡಿಸಿ ಹರ್ಷಲ್ ಭೋಯರ್ ಅವರು, ಪ್ರಜಾಪ್ರಭುತ್ವದ ವ್ಯವಸ್ಥೆಗೆ ಡಾ.ಅಂಬೇಡ್ಕರ್ ಅವರು ಅತ್ಯುತ್ತಮ ಸಂಧಾನ ನೀಡುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಭದ್ರ ಬುನಾದಿಹಾಕಿದ್ದಾರೆ. ದೇಶದ ಸರ್ವ ಜನಾಂಗದ ತ ಕಾಯುವ ಅಂಶಗಳು ಅಡಗಿವೆ ಎಂದರು.


☛ ಉದಯವಾಹಿನಿ ಚಿತ್ರ

ಡಾ. ಬಿ .ಆರ್. ಅಂಬೇಡ್ಕರ್ ಅವರ 69 ಪರಿನಿರ್ವಾಣ ದಿನದ ಅಂಗವಾಗಿ ಈ ಸಂದರ್ಭದಲ್ಲಿ ಸುರೇಂದ್ರ ಬಬಲಾದಿ, ಸುರೇಶ್ ಬೊಮ್ಮನವರು ಪಂಚಶೀಲ ಮತ್ತು ನೀಲಿ ಧ್ವಜವನ್ನು ನೆರವೇರಿಸಲಾಯಿತು.

ನಗರಸಭೆ ಪೌರಾಯುಕ್ತ ಉಮೇಶ ನಾಯಕ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಸಕರಾದ ಎಸ್ ಎಸ್ ಚನ್ನಬಸಪ್ಪ, ತಹಶೀಲ್ದಾರ ಸುರೇಶ್ ಅಂಕಲಗಿ, ಸಹಾಯಕ ನಿರ್ದೇಶಕರಾದ ಬೆಬಿ ಲಕ್ಷ್ಮಣ ಹುಲಸವಾರ್, ನಿಲಯ ಮೇಲ್ವಿಚಾರಕರಾದ ದೇಂದ್ರಪ್ಪ, ಮೋಹ್ಮದ್ ಹುಸೇನಿ, ನಿಂಗಣ್ಣ ಸೇರಿ, ಸುನೀಲ್ ಪವಾರ್, ನ್ಯಾಯವಾದಿ ಮಹೇಶ ಎಸ್ ಕುರಕುಂಬಳ, ಕುಪೇಂದ್ರ ವಠಾರ್, ಶ್ಯಾಮಸನ್ ಮಾಲಿಕೆರಿ. ಮಲ್ಲಣ್ಣ ದಾಸನಕೇರಿ, ಭೀಮರಾಯ ಬೊಮ್ಮನ್, ಮಲ್ಲಿಕಾರ್ಜುನ್ ಈಟಿ, ಮಹೇಶ್ ಕುರುಕುಂಬಳ, ಕೈಲಾಸ ಅನ್ವರ್, ಶರಣು ನಾಟೇಕರ್, ಸ್ವಾದೇವ್ ದಾಸನ ಕೇರಿ, ಮಂಜುನಾಥ್ ದಾಸನಕೇರಿ, ನಿಂಗಪ್ಪ ಬೀರ್ನಾಳ್, ಭೀಮಪ್ಪ ಕಾಗಿ, ಮಲ್ಲಿಕಾರ್ಜುನ್, ಶ್ರೀಮಂತ ಚಿನ್ನ ಕರ್, ಗಾಲಿ ಪಟೇಲ್, ಚಂದ್ರಕಾಂತ್ ಚಲವಾದಿ, ಅನಾಶ್ ಅನ್ವರ್, ವಸಂತ್ ಕುಮಾರ್, ಸಂಪತ್ ಕುಮಾರ್ ಇದ್ದರು.

> ಡಾ.ಅಂಬೇಡ್ಕರ್ ಅವರು ರಚಿಸಿದ್ದು ಕೇವಲ ಸಂಧಾನವಲ್ಲ. ಆ ಮೂಲಕ ಪ್ರತಿಯೊಬ್ಬ ನಾಗರಿಕನೂ ಘನತೆ ಮತ್ತು ಅವಕಾಶವನ್ನು ಅನುಭಸುವ ಸಮಗ್ರ ಸಬಲೀಕರಣಗೊಂಡ ರಾಷ್ಟ್ರಕ್ಕೆ ನೀಲಿನಕ್ಷೆ ಒದಗಿಸಿದ ಶ್ರೇಷ್ಠ ಜ್ಞಾನಿಯಾಗಿದ್ದಾರೆಂದು ಅವರು ಮಾರ್ಮಿಕವಾಗಿ ನುಡಿದರು. ದೀನದಲಿತರ, ಕಾರ್ಮಿಕರ, ನೊಂದವರ ಧ್ವನಿಯಾಗಿ ಮತ್ತು ಅವರ ಕಲ್ಯಾಣಕ್ಕಾಗಿ ಹೋರಾಟ ಮಾಡುವ ಮೂಲಕ ನ್ಯಾಯ ಒದಗಿಸಿದ್ದಾರೆಂದ ಅವರು ಡಾ.ಅಂಬೇಡ್ಕರ್ ಅವರ ಮೌಲ್ಯಗಳು, ಜೀವನ ಅನುಭವ ಪ್ರತಿಯೊಬ್ಬರು ಅನುಸರಿಸುವ ಮೂಲಕ ಜಾತ್ಯಾತೀತ ರಾಷ್ಟ್ರ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸೋಣ. -ಚನ್ನಾರೆಡ್ಡಿ, ಶಾಸಕ

# ಮಹಿಳೆಯರಲ್ಲಿ ಸೈಬರ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದು ಇಂದಿನ ತುರ್ತು ಅಗತ್ಯ

• ಉದಯವಾಹಿನಿ ವಿಜಯಪುರ

ಡಿಜಿಟಲೀಕರಣ ವೇಗವಾಗಿ ಹೆಚ್ಚುತ್ತಿರುವ ಇಂದಿನ ಯುಗದಲ್ಲಿ ಸೈಬರ್ ಅಪರಾಧಗಳೂ ಆತಂಕಕಾರಿ ಮಟ್ಟಕ್ಕೆ ಏರಿದ್ದು, ಅದಕ್ಕೆ ಬಲಿಯಾಗುತ್ತಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರಲ್ಲಿ ಸೈಬರ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಮಹಿಳಾ ವಿವಿಯ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮತ್ತು ಯುಜಿ ಬ್ಲಾಕ್ ಹಾಗೂ ಪ್ರಧಾನಮಂತ್ರಿ ಉಚ್ಚತರ ಶಿಕ್ಷಣ ಅಭಿಯಾನ, ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಸಹಯೋಗದೊಂದಿಗೆ ಶುಕ್ರವಾರ ಆಯೋಜಿಸಿದ್ದ ಡಿಜಿಟಲ್ ಸುರಕ್ಷತೆ ಮತ್ತು ಸೈಬರ್ ಜಾಗೃತಿ ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಯುವಜನತೆ ಡಿಜಿಟಲ್ ವೇದಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದು, ಡಿಜಿಟಲ್ ಸುರಕ್ಷತೆಯ ನಿರ್ಲಕ್ಷ್ಯದಿಂದ ಹಲವು ಗಂಭೀರ ದುಷ್ಪರಿಣಾಮಗಳು ಕಂಡು ಬರುತ್ತಿವೆ. ಹೆಚ್ಚಾಗಿ ಮಹಿಳೆಯರೇ ಇದಕ್ಕೆ ಬಲಿಯಾಗುತ್ತಿದ್ದು, ಅವರು ದೌರ್ಜನ್ಯ ಮತ್ತು ಕಿರುಕುಳಕ್ಕೆ ಒಳಗಾಗುತ್ತಿರುವುದು ಆತಂಕಕಾರಿ. ಆದ್ದರಿಂದ ಇಂತಹ ಉತ್ತಮ ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ಮಹಿಳೆಯರಲ್ಲಿ ಸೈಬರ್ ಕ್ರೈಮ್ ಕುರಿತು ಅರಿವು ಮೂಡಿಸುವುದು ಅತ್ಯಂತ ಉಪಯುಕ್ತವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಸೈಬರ್ ಕಮಾಂಡ್ ಕೇಂದ್ರದ ವಿಶೇಷ ಕೋಶದ ಪೊಲೀಸ್ ವರಿಷ್ಠಾಧಿಕಾರಿ ಸವಿತಾ ಶ್ರೀನಿವಾಸ್ ಅವರನ್ನು ವಿಭಾಗದ ವತಿಯಿಂದ ಸನ್ಮಾನಿಸಲಾಯಿತು.

# ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ನಿಯಮ ಪಾಲನೆ ಕಡ್ಡಾಯ: ಶಶಿಧರ ಕೋಸಂಬೆ

## • ನಿರ್ಲಕ್ಷಿಸಿದರೇ ಅಂತವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸೆಂಟರ್ ಮುಚ್ಚಲು ಕ್ರಮ ವಹಿಸಲಾಗುವುದು

• ಉದಯವಾಹಿನಿ ಹೊಸಪೇಟೆ

ಜಿಲ್ಲೆಯಲ್ಲಿ 5 ಸರ್ಕಾರಿ ಮತ್ತು 75 ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ಪಿಸಿಪಿಎನ್‌ಡಿಟಿ 1994 ಕಾಯ್ದೆಯಡಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿರ್ಲಕ್ಷಿಸಿದರೇ ಅಂತವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸೆಂಟರ್ ಮುಚ್ಚಲು ಕ್ರಮ ವಹಿಸಲಾಗುವುದು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಹೇಳಿದರು.

**ಸ್ಕ್ಯಾನಿಂಗ್ ಕೊಠಡಿಯಲ್ಲಿ ಸಿಸಿ ಕ್ಯಾಮೆರಾಗಳ ಬಳಕೆ**

ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿವಿಧ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ಆರ್‌ಟಿಇ ಅನುಷ್ಠಾನದ ಕುರಿತು ಶಿಕ್ಷಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಕ್ಕಳ ಹಿತ ಮತ್ತು ಹಕ್ಕುಗಳ ರಕ್ಷಣೆಗಾಗಿ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕಿದೆ. ರಾಜ್ಯದಲ್ಲಿ ಮಕ್ಕಳ ಸಹಾಯವಾಣಿಗೆ ವಿವಿಧ ಜಿಲ್ಲೆಗಳಿಂದ ದೂರುಗಳು ಹೆಚ್ಚಾಗಿ ಬರುತ್ತಿವೆ. ವಿಜಯನಗರ ಜಿಲ್ಲೆಯಿಂದ ಹೆಚ್ಚಾಗಿ ಆರೋಗ್ಯ ಮತ್ತು ಶಿಕ್ಷಣ ಸಂಬಂಧಿತ ದೂರುಗಳು ಹೆಚ್ಚಾಗಿವೆ. ರಾಜ್ಯದಲ್ಲೇ ಅಪೌಷ್ಠಿಕತೆಯಿಂದ ಬಳಲುತ್ತಿರುವವರ ಸಂಖ್ಯೆ ವಿಜಯನಗರ ಜಿಲ್ಲೆಯಲ್ಲಿ ಹೆಚ್ಚಿದೆ ಎಂಬ ಮಾಹಿತಿ ಇದೆ.


☛ ಉದಯವಾಹಿನಿ ಚಿತ್ರ

**ಆರೋಗ್ಯ ಇಲಾಖೆ :** ಜಿಲ್ಲೆಯಲ್ಲಿ 580 ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ನಗರದ ನೂರು ಹಾಸಿಗೆ ಆಸ್ಪತ್ರೆಯ ಅಪೌಷ್ಠಿಕ ಮಕ್ಕಳ ಪುನಶ್ಚೇತನ ಘಟಕದಲ್ಲಿ ಕಳೆದ ಆರು ತಿಂಗಳ ದಾಖಲೆ ವೀಕ್ಷಿಸಿದರೇ ಒಬ್ಬರು ಸಹಿತ ನೊಂದಾಣಿ ಆಗದಿರುವುದು ಆಶ್ಚರ್ಯ ಮೂಡಿಸಿದೆ. ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ತಂಡದ ವೈದ್ಯರು, ಆರ್‌ಸಿಹೆಚ್ ಅಧಿಕಾರಿಗಳಾಗಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸೇರಿ ಯಾವುದೇ ಒಂದು ಮಗುವನ್ನು ದಾಖಲಿಸಿರದಿರುವುದು ಕಂಡು ಬಂದಿದೆ. ಶೀಘ್ರವೇ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ತಂಡ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸಭೆ ನಡೆಸಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಮೀಕ್ಷೆ ನಡೆಸಿ ಪುನಶ್ಚೇತನ ಘಟಕಕ್ಕೆ ದಾಖಲಿಸಲು ಕ್ರಮ ವಹಿಸಬೇಕು. ಜಿಲ್ಲೆಯ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ನಿಯಮಗಳನ್ನು ಪಾಲಿಸಬೇಕು ನಿರ್ಲಕ್ಷಿಸಿದರೇ ಕಾನೂನು ಕ್ರಮ ಜರುಗಿಸಲಾಗುವುದು. ಕೂಡಲೇ ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಆರ್‌ಸಿಹೆಚ್ ಮತ್ತು ನೋಡಲ್ ಅಧಿಕಾರಿಗಳ ಮೂರು ತಂಡಗಳನ್ನು ರಚಿಸಿ ಪ್ರತಿ ತಂಡಗಳು 25 ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಒಂದು ವಾರದಲ್ಲಿ ತಪಾಸಣೆ ಮಾಡುವ ಮೂಲಕ ವಿಸ್ತೃತ ವರದಿಯನ್ನು ಸಲ್ಲಿಸಬೇಕು. ನಿಯಮ ಉಲ್ಲಂಘಿಸಿದವರ ವಿರುದ್ಧ ಕಾರಣ ಕೇಳಿ ನೋಟಿಸ್ ವಿತರಣೆ. ತಪಾಸಣೆಯಲ್ಲಿ ಅಪರಾಧ ಕಂಡು ಬಂದರೆ ಸೆಂಟರ್ ಬಂದ್ ಮಾಡಲು ಕ್ರಮ ವಹಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

**ಶಿಕ್ಷಣ ಇಲಾಖೆ :** ಕಳೆದ ವರ್ಷದಲ್ಲಿ ಜಿಲ್ಲೆಯಲ್ಲಿ 9ನೇ ತರಗತಿ ಉತ್ತೀರ್ಣವಾದ ಮಕ್ಕಳ ಸಂಖ್ಯೆ 23000 ಆದರೆ 10 ತರಗತಿಗೆ ಪರೀಕ್ಷೆ ನೊಂದಾಣಿಯಾದ ಮಕ್ಕಳಿಗೆ 4000 ಮಕ್ಕಳ ವ್ಯತ್ಯಾಸ ಕಂಡು ಬಂದಿದೆ. ಈ 4000 ಮಕ್ಕಳ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳಲ್ಲಿ ಮಾಹಿತಿಯಿಲ್ಲ ಇದೊಂದು ದುರಂತವೇ ಸರಿ. ನಗರದ ಅಮರಾವತಿಯಲ್ಲಿನ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಭೇಟಿ ನೀಡಿದ ವೇಳೆ ಮಕ್ಕಳು ಮನೆಯಿಂದಲೇ ಊಟದ ತಟ್ಟೆಯನ್ನು ತರುತ್ತಿದ್ದಾರೆ. ಬಿಸಿಯೂಟ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ಊಟದ ತಟ್ಟೆಗಳನ್ನು ನೀಡಬೇಕಿದೆ. ಹಾಗಾಗೀ ಸೋಮವಾರ ಮಧ್ಯಾಹ್ನದ ಊಟಕ್ಕೆ ವಿದ್ಯಾರ್ಥಿಗಳಿಗೆ ಹೊಸ ತಟ್ಟೆಗಳನ್ನು ಖರೀದಿಸಿ ಸರಬರಾಜು ಮಾಡಬೇಕು ಎಂದು ಎಚ್ಚರಿಕೆ ನೀಡಿದರು.

**ನೋಟಿಸ್ ನೀಡುವಂತೆ ಸೂಚನೆ**

ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಧೀಡಿರ್ ಭೇಟಿ ನೀಡಿ ಪರಿಶೀಲಿಸಿದಾಗ ಸಹಾಯ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಸ್ಕ್ಯಾನಿಂಗ್ ಕೊಠಡಿಯಲ್ಲಿ ಸಿಸಿ ಕ್ಯಾಮೆರಾಗಳ ಬಳಕೆ ಮಾಡಿರುವುದು ಕಾನೂನು ಬಾಹಿರ ಐಟಿ ಕಾಯ್ದೆ ಪ್ರಕಾರ ಅಪರಾಧವಾಗಲಿದೆ. ಪಿಸಿಪಿಎನ್‌ಡಿಟಿ 1994 ಕಾಯ್ದೆಯಡಿ ಪ್ರತಿ ಸ್ಕ್ಯಾನಿಂಗ್‌ನಲ್ಲಿ ಕಡ್ಡಾಯವಾಗಿ ವೈದ್ಯರು ಒಬ್ಬರೇ ಒಳಗಡೆ ಇದ್ದು ಸ್ಕ್ಯಾನ್ ಮಾಡಬೇಕು. ಆದರೆ ಈ ಎರಡು ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಈ ನಿಯಮ ಉಲ್ಲಂಘಿಸಿರುವುದು ಕಂಡು ಬಂದಿದೆ.

ಉದಯ UV ವಾಹಿನಿ

ಪ್ರಾದೇಶಿಕ

ಭಾನುವಾರ 07 ಡಿಸೆಂಬರ್ 2025



## ಮಿನಿ ನ್ಯೂಸ್

### ಡಾ.ಬಿ.ಆರ್.ಅಂಬೇಡ್ಕರ್ ರವರ ಮಹಾಪರಿನಿರ್ವಾಣ ದಿನ ಆಚರಣೆ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ತಹಶೀಲ್ ಕಾರ್ಯಾಲಯದಲ್ಲಿ ತಾಲ್ಲೂಕಾಡಳಿತ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ 69ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ,ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್, ಸಮಾಜ ಕಲ್ಯಾಣ ಅಧಿಕಾರಿ ಡಾ.ಶೃತಿ,ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್, ಮುಖ್ಯಾಧಿಕಾರಿ ನಿಂಗಮ್ಮ ಬಿರಾದಾರ, ತಾಲ್ಲೂಕಾ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ,ಜಿ.ಬಿ.ಪಾತ್ರೆ, ಉಲ್ಲಾಸಕುಮಾರ ಕೆರೋಳ್ಳಿ, ಶ್ರೀಕಾಂತ ಜಾನಕಿ, ಗಣಪತರಾವ, ಆರ್.ಐ ಮಹ್ಮದ್ ಆರೀಫ್,ಅನೇಕರಿದ್ದರು.

### ಮೆಡಿಕಲ್ ಶಾಪ್ ಮಾಲೀಕನಿಗೆ 1.15 ಕೋಟಿ ವಂಚನೆ

• ಉದಯವಾಹಿನಿ ಕಲಬುರಗಿ

ಸ್ಟಾಕ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಹಣ ಗಳಿಸಬಹುದು ಎಂದು ನಂಬಿಸಿ ಮೆಡಿಕಲ್ ಶಾಪ್ ಮಾಲೀಕ ಮತ್ತು ಅವರ ಸಹೋದರನಿಗೆ 1.15 ಕೋಟಿ ರೂಪಾಯಿ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ನಗರದ ನ್ಯೂ ರಾಘವೇಂದ್ರ ಕಾಲೋನಿಯ ಸಿದ್ದಿ ಹನುಮಾನ ಮೆಡಿಕಲ್ ಶಾಪ್ ಮಾಲೀಕ ಅನಿಲದಾಸ ದೇಶಮುಖ ಮತ್ತು ಅವರ ಸಹೋದರ ಪ್ರಮೋದ ದೇಶಮುಖ ವಂಚನೆಗೆ ಒಳಗಾಗಿದ್ದು, ಅವರು ಈ ಸಂಬಂಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಅನುಶ್ರೀ ಷಾ ಎಂಬುವವರು ಸ್ಟಾಕ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಹಣ ಗಳಿಸಬಹುದು ಎಂದು ನಂಬಿಸಿ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ 1,15,38,400 ರೂ.ವರ್ಗಾವಣೆ ಮಾಡಿಕೊಂಡು ವಂಚನೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

### ಗಾಂಧೀಜಿ ಸಂದೇಶ ಸಾರಿದ ಗಾಂಧಿ ಗಿಡ

• ಉದಯವಾಹಿನಿ ಹಾವೇರಿ

ಇಲ್ಲಿಯ ಗುದ್ದೆಪ್ಪ ಹಳ್ಳಿಕೇರಿ (ಜಿ.ಎಚ್.) ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿರುವ ಗಾಂಧಿ ವಿಚಾರ ಪ್ರಣೀತ ರಾಜ್ಯಮಟ್ಟದ ಎನ್.ಎಸ್.ಎಸ್. ನಾಯಕತ್ವ ತರಬೇತಿ ಶಿಬಿರ'ದಲ್ಲಿ ಗಾಂಧಿ ಗಿಡ' ನಾಟಕ ಪ್ರದರ್ಶಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಶಿಬಿರದಲ್ಲಿ ಹಾವೇರಿ ಕಲಾ ಬಳಗದಿಂದ ನಾಟಕ ಪ್ರದರ್ಶಿಸಿದರು. ನಾಟಕ ಬರೆದಿದ್ದ ಸಾಹಿತಿ ಸತೀಶ ಕುಲಕರ್ಣಿ ಅವರೇ ನಿರ್ದೇಶನ ಮಾಡಿದರು.

ಗಾಂಧೀಜಿ ಅವರ ಸ್ವಾತಂತ್ರ್ಯ, ಸಮಾನತೆ ಮತ್ತು ಸೌಹಾರ್ದತೆಗಳ ಸಂದೇಶವನ್ನು ಸಾರುವಲ್ಲಿ ನಾಟಕ ಯಶಸ್ವಿಯಾಯಿತು. ಹಳ್ಳಿಯೊಂದಕ್ಕೆ ಪಾದಯಾತ್ರೆಯ ಮೂಲಕ ಬರುವ ಗಾಂಧೀಜಿಯವರು ಗಿಡವೊಂದನ್ನು ನೆಡುತ್ತಾರೆ. ಅದು ಬೆಳೆದಂತೆ ಅದರ ಫಲಗಳನ್ನು ಬೇರೆ ಬೇರೆ ಜನಪ್ರತಿನಿಧಿಗಳು ದುರುಪಯೋಗಪಡಿಸಿಕೊಳ್ಳುತ್ತ, ಗಾಂಧೀಜಿ ಗಿಡಕ್ಕೆ ಕಾವಲು ಮತ್ತು ಬೇಲಿಯನ್ನು ಹಾಕುತ್ತಾರೆ. ಕೊನೆಯಲ್ಲಿ ಜನ ಸಾಮಾನ್ಯರು, ಎಲ್ಲರನ್ನೂ ವಿರೋಧಿಸಿ ಗಾಂಧಿ ಗಿಡವನ್ನು ಮುಕ್ತಗೊಳಿಸುತ್ತಾರೆ ಎಂಬುದು ನಾಟಕದ ಆಶಯವಾಗಿತ್ತು.

### ದೇಶದ ಬಡಜನತೆಗೆ ದೊರೆತಿಲ್ಲ ಸ್ವಾತಂತ್ರ್ಯ

• ಉದಯವಾಹಿನಿ ಗಂಗಾವತಿ

ದೇಶದಲ್ಲಿನ ಕೆಲ ರಾಜಕೀಯ ಪಕ್ಷಗಳ ಮತ್ತು ಬಂಡವಾಳ ಶಾಹಿಗಳ ಆಡಳಿತದಿಂದ ಬಡ ಜನರ ಬದುಕು ದುಸ್ತರವಾಗಿದೆ. ಜನರಿಗೆ ಸ್ವಾತಂತ್ರ್ಯವೇ ಇಲ್ಲದಂತಾಗಿದೆ. ಜನರು ಎಚ್ಚೆತ್ತು ರಾಜಕೀಯ ಪಕ್ಷಗಳಿಗೆ ತಕ್ಕಪಾಠ ಕಲಿಸಬೇಕಿದೆ' ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ ಹೇಳಿದರು. ನಗರದ ಡಾ.ಬಾಬು ಜನಜೀವನರಾಮ್ ವೃತ್ತದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವ ಜಾಥಾ ಅಂಗವಾಗಿ ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದುಡಿಯುವ ವರ್ಗದ ಪರ, ಜಮೀನ್ದಾರಿ, ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಲು ಹುಟ್ಟಿಕೊಂಡಿದ್ದು ಭಾರತ ಕಮ್ಯುನಿಸ್ಟ್ ಪಕ್ಷ. ಬ್ರಿಟಿಷ್, ಪೋರ್ಚುಗೀಸ್, ಫ್ರೆಂಚ್ ಸಾಮ್ರಾಜ್ಯ ಶಾಹಿಗಳ ಜೊತೆಗೆ ಕೈ ಜೋಡಿಸದೆ ಅವರ ವಿರುದ್ಧ ನಿರಂತರ ಹೋರಾಟ ನಡೆಸಿಕೊಂಡು ಬಂದಿದೆ. ಪಕ್ಷದ ಸಾವಿರಾರು ನಾಯಕರು ದೇಶಕ್ಕಾಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ ಎಂದರು.

### ಬೆಳೆಗೆ ತೊಡಕಾದ ಮೋಡ, ಮಳೆ

• ಉದಯವಾಹಿನಿ ಹಳೇಬೀಡು

3 ದಿನಗಳಿಂದ ಮೋಡ ಮುಸುಕಿದ ವಾತಾವರಣ ಇದ್ದು, ಸಂಜೆ ಸುರಿದ ಅಕಾಲಿಕ ಮಳೆಯಿಂದ ಈ ಭಾಗದಲ್ಲಿ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ. ಅವರೆ ಹೂವು ಉದುರುತ್ತಿದ್ದು, ಫಸಲು ಕುಂಠಿತವಾಗಲಿದೆ. ಮುದುರುಗುಡಿ ಹಾಗೂ ಕೊಳೆ ರೋಗ ಬರುವ ಸಾಧ್ಯತೆ ಇದೆ. ಅವರೆ ಹೂವಾಗಿ ಕಾಯಿ ಕಟ್ಟುತ್ತಿರುವ ಸಂದರ್ಭದಲ್ಲಿ ಮಳೆ ಬೇಕಿರಲಿಲ್ಲ. ಸಂಜೆ ಸುರಿದ ಮಳೆಯ ಹೊಡೆತಕ್ಕೆ ಸಾಕಷ್ಟು ಹೊಲದಲ್ಲಿ ಹೂವು ಉದುರಿದ್ದು, ಗಿಡದ ಕುಡಿಗಳೆ ಮುರಿದು ಹೋಗಿವೆ.

ಬಿಸಿಲು ಕಾಣದೆ ನಿರಂತರ ಮೋಡದ ವಾತಾವರಣ ಮುಂದುವರಿದರೆ ಅವರೆ ಫಸಲು ಕಾಣಲು ಸಾಧ್ಯವಿಲ್ಲ. ಒಂದು ವೇಳೆ ಹೂವು ನಿಂತು ಕಾಯಿ ಕಟ್ಟಿದರೂ ಗುಣಮಟ್ಟದ ಅವರೆ ಉತ್ಪಾದನೆ ಆಗುವುದಿಲ್ಲ. ನಿರೀಕ್ಷಿತ ಪ್ರಮಾಣದ ಫಸಲು ಸಹ ದೊರಕುವುದಿಲ್ಲ ಎಂಬ ಆತಂಕ ರೈತರದ್ದಾಗಿದೆ. ರಾಗಿ ಕೊಯ್ಲು ಮಾಡುವುದಕ್ಕೂ ಈಗಿನ ವಾತಾವರಣ ತೊಡಕಾಗಿದೆ. ಒಂದು ವೇಳೆ ಕೊಯ್ಲು ಮಾಡಿದರೂ ಕಣಕ್ಕೆ ಸಾಗಿಸಿ, ಒಕ್ಕಣೆ ಮಾಡುವುದು ಸುಲಭ ಸಾಧ್ಯವಿಲ್ಲ. ಸಂಜೆ ಮಳೆ ಬಿದ್ದಿದ್ದರಿಂದ ಕಣಗಳಲ್ಲಿ ತೇವಾಂಶ ಹೆಚ್ಚಾಗಿದೆ. ಕಣ ಒಣಗುವುದಕ್ಕೆ ಬಿಸಿಲು ಬರುತ್ತಿಲ್ಲ. ಕೆಲವು ಕಡೆ ಕೊಯ್ಲು ಮಾಡುವುದಕ್ಕೆ ತೆನೆಯಲ್ಲಿರುವ ರಾಗಿ ಹಾಲು ತುಂಬಿ ಬಲಿಯಬೇಕಾಗಿದೆ. ನಿರಂತರ ಮೋಡದ ವಾತಾವರಣಕ್ಕೆ ತೆನೆ ಆರೋಗ್ಯಕರವಾಗಿ ಬೆಳೆಯದೇ ರಾಗಿ ಜೊಳ್ಳಾಗುತ್ತಿದೆ ಎಂದು ಹುಲಿಕೆರೆ ಗ್ರಾಮದ ರೈತರ ಸುರೇಶ್ ಹೇಳಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಇಂದು ನೀವು ನಿಮ್ಮ ಗಳಿಕೆಯ ಶಕ್ತಿಯನ್ನು ಹೆಚ್ಚಿಸಲು ತ್ರಾಣ ಮತ್ತು ಜ್ಞಾನವನ್ನು ಹೊಂದಿರುತ್ತೀರಿ. ನಿಮ್ಮ ಕುಟುಂಬದ ಯಾವುದೇ ಸದಸ್ಯ ಇಂದು ನಿಮ್ಮೊಂದಿಗೆ ಸಮಯವನ್ನು ಕಳೆಯಲು ಒತ್ತಾಯಿಸಬಹುದು.

**ವೃಷಭ** ನೀವು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ, ನೀವು ನೋವಿ ಗಿಡಾಗುವುದರ ಸಂದರ್ಭಗಳಿಂದ ದೂರ ಉಳಿಯಿರಿ. ಸಂಪ್ರದಾಯ ಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

**ಮಿಥುನ** ಪತ್ನಿಯ ವ್ಯವಹಾರಗಳಲ್ಲಿ ನಿಮ್ಮ ಹಸ್ತಕ್ಷೇಪ ಅವಳಿಗೆ ಕಿರಿಕಿರಿ ಮಾಡ ಬಹುದು. ಕೋಪ ಭುಗಿಲೇಳುವುದನ್ನು ತಪ್ಪಿಸಲು ಅವಳ ಅನುಮತಿ ತೆಗೆದುಕೊಳ್ಳಿ. ನೀವು ಸುಲಭವಾಗಿ ಸಮಸ್ಯೆಯನ್ನು ತಪ್ಪಿಸಬಹುದು.

**ಕರ್ಕಾಟಕ** ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ. ನಿಮ್ಮ ಪಾಲುದಾರರು ನೀವು ಅವರ ಅಭಿಪ್ರಾಯಗಳನ್ನು ನಿರ್ಲಕ್ಷಿಸಿದರೆ ತಾಳ್ಮೆ ಕಳೆದುಕೊಳ್ಳುತ್ತಾರೆ. ಹಠಾತ್ ಪ್ರಣಯ ಪ್ರಸಂಗಗಳು ನಿಮ್ಮನ್ನು ಗೊಂದಲಕ್ಕೀಡು ಮಾಡುತ್ತವೆ.

**ಸಿಂಹ** ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ನಿಮ್ಮ ಸಹೋದರನಿಗೆ ವಿಷಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಸಹಾಯ ಮಾಡಿ.

**ಕನ್ಯಾ** ಇವತ್ತು ನೀವು ಪಡೆಯುವ ಉಚಿತ ಸಮಯದ ಪ್ರಯೋಜನ ಪಡೆದುಕೊಳ್ಳಿ ಮತ್ತು ಕುಟುಂಬದ ಸದಸ್ಯರೊಂದಿಗೆ ಪ್ರೀತಿಯ ಕ್ಷಣಗಳನ್ನು ಕಳೆಯಿರಿ. ನಿಮ್ಮ ಪ್ರೀತಿಯನ್ನು ಅಮೂಲ್ಯ ವಸ್ತುಗಳಂತೆ ಹೊಸತನದಿಂದಿಡಿ.

**ತುಲಾ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ, ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ವೃಶ್ಚಿಕ** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಧನಸ್ಸು** ತಿರುವುಗಳಲ್ಲಿ ವಾಹನ ಚಾಲನೆ ಮಾಡುವಾಗ ಎಚ್ಚರಿಕೆಯಿಂದಿರಿ. ಬೇರೆಯವರ ಉದಾಸೀನತೆ ನಿಮಗೆ ಸಮಸ್ಯೆಗಳನ್ನು ಉಂಟು ಮಾಡ ಬಹುದು. ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ.

**ಮಕರ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ನಿಮ್ಮ ಸ್ವಾರ್ಥದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.

**ಕುಂಭ** ಇಂದು ನಿಮಗೆ ನಿಮ್ಮ ಕುಟುಂಬದ ಬೆಂಬಲದಿಂದ ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಅರಿವಾಗುತ್ತದೆ. ಬಿಡಿವೇಳೆಯಲ್ಲಿ ನೀವು ಯಾವುದೇ ಚಲನಚಿತ್ರವನ್ನು ನೋಡಬಹುದು.

**ಮೀನ** ನೀವು ಮನೆಯಿಂದ ಹೊರ ಇದ್ದು ಉದ್ಯೋಗ ಅಥವಾ ಅಧ್ಯಯನ ಮಾಡುತ್ತಿದ್ದರೆ, ನಿಮ್ಮ ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವಂತಹ ಜನರಿಂದ ದೂರವಿರುವುದು ಕಲಿತುಕೊಳ್ಳಬೇಕು.

### ಸಾರ್ವಜನಿಕರು ಕ್ಯೂನಲ್ಲಿ ನಿಂತು ಹೈರಾಣ, ಸಮಸ್ಯೆಗಳಿಗೆ ಕೊನೆ ಎಂದು ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸುವವರು ಯಾರು ?

# ಆರ್‌ಟಿ ಓ ಕಚೇರಿ ಅವಾಂತರ: ಕಂಪ್ಯೂಟರ್ ಸರ್ವರ್ ಸದಾ ಬ್ಯುಸಿ

• ಉದಯವಾಹಿನಿ ಚಿತ್ರದುರ್ಗ

ನಗರದ ಆರ್ ಟಿ ಓ ಮತ್ತು ರಾಜ್ಯಾದ್ಯಂತ ಆರ್‌ಟಿಓ ಕಚೇರಿಗಳಲ್ಲಿ ಕಂಪ್ಯೂಟರ್ ಕರಣದಿಂದ ಆಗಿರುವ ಸಮಸ್ಯೆಗಳನ್ನ ಅಧ್ಯಯನ ಮಾಡಿ, ಅವುಗಳು ನಿಸ್ತೇಜನವಾದಾಗ, ಕೆಟ್ಟು ನಿಂತು, ಸಮಸ್ಯೆಗಳಾದಾಗ, ಅವುಗಳನ್ನು ನಿಭಾಯಿಸಿ, ಸಾರ್ವಜನಿಕರಿಗೆ, ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆ ಒಂದು ಇಟ್ಟುಕೊಳ್ಳಬೇಕಾಗಿದೆ.

ಬೆಳಗ್ಗೆ 10:30ಕ್ಕೆ ಬಂದಂತಹ ಕಲಿಕಾ ಲೈಸೆನ್ಸ್, ಡ್ರೈವಿಂಗ್ ಲೈಸೆನ್ಸ್ ಪಡೆಯುವಂತರು, ಸರ್ವರ್ ಬ್ಯುಸಿ, ಸರ್ವರ್ ಕೆಲಸ ಮಾಡುತ್ತಿಲ್ಲ ಎಂದು ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲಿಸಿ, ನಂತರ ಅವರನ್ನ ಪರೀಕ್ಷೆಗೆ ಒಳಪಡಿಸುತ್ತಿರುವುದರಿಂದ ಸಾಮಾನ್ಯ ಜನರಿಗೆ, ಕೆಲಸಕ್ಕೆ ಹೋಗುವವರಿಗೆ, ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿದ್ದು, ಅತಿಯಾದ ಕಂಪ್ಯೂಟರ್ ಗಳಿಂದ ಹೊರಬಂದು, ಜನರಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ಸಹ ನಾವು ಇಟ್ಟುಕೊಳ್ಳಬೇಕಾಗಿದೆ.

ಚಿತ್ರದುರ್ಗ ನಗರದ ಆರ್ ಟಿ ಓ ಕಚೇರಿಯಲ್ಲಿ ಡ್ರೈವಿಂಗ್ ಲೈಸೆನ್ಸ್ ಮತ್ತು ಕಲಿಕಾ ಲೈಸನ್ಸ್ ಪಡೆಯಲು ಬಂದಂತ ಅಭ್ಯರ್ಥಿಗಳಿಗೆ, ಕಂಪ್ಯೂಟರ್‌ಗಳಲ್ಲಿ ಕೆಲಸ ನಡೆಯುತ್ತಿಲ್ಲ, ಸರ್ವರ್ ಬ್ಯುಸಿ ಇದೆ ಮತ್ತು ಕಂಪ್ಯೂಟರ್‌ಗಳು ಕಾರ್ಯ ಸ್ಥಗಿತವಾಗಿವೆ, ಆಧುನೀಕರಿಸಲಾಗುತ್ತಿದೆ ಎಂದು ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಗಿದೆ. ವಿದ್ಯಾರ್ಥಿಗಳು, ಕೆಲಸದಲ್ಲಿರುವ ಪುರುಷರು, ಮಹಿಳೆಯರು, ರಜಾ ಹಾಕಿ, ಕೆಲಸ ಬಿಟ್ಟು ಆರ್‌ಟಿಓಗೆ ನಿಗದಿಪಡಿಸಿದ ಸಮಯದಲ್ಲಿ ಹಾಜರಾಗಿ, ಪರೀಕ್ಷೆ ತೆಗೆದುಕೊಂಡು, ಡ್ರೈವಿಂಗ್ ಲೈಸೆನ್ಸ್ ಪಡೆಯಲು ಬಂದಂತವರಿಗೆ, ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲಿಸಿ, ಕುಳಿತುಕೊಳ್ಳಲು ವ್ಯವಸ್ಥೆ ಸಹ ಇಲ್ಲದೆ, ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಶೋಚನೀಯ.

ಬೆಳಗ್ಗೆ ಹತ್ತುವರೆಗೆ ಬಂದಂತವರು ಮಧ್ಯಾಹ್ನ 1:30 ರವರೆಗೂ ಡ್ರೈವಿಂಗ್ ಲೈಸೆನ್ಸ್ ಪಡೆಯಲು, ಸರದಿಯಲ್ಲಿ ನಿಂತು, ನಿಂತು ಕಾಲು ನೋಹಿಸಿಕೊಂಡು, ಪರದಾಡುವಂತಹ ಅಭ್ಯರ್ಥಿಗಳನ್ನ ವಿಚಾರಿಸಿ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ, ಕುಳಿತುಕೊಳ್ಳುವ ವ್ಯವಸ್ಥೆ ಕಲ್ಪಿಸಿ, ತಡವಾದದ್ದಕ್ಕೆ ಕ್ಷಮೆಯಾಚಿಸುವಷ್ಟು ಮಟ್ಟಿಗಾದರೂ ವಿನಯತೆಯನ್ನ ಆರ್‌ಟಿಓದಲ್ಲಿ ಅಳವಡಿಸಿಕೊಳ್ಳಬೇಕು.

ಎಲ್ಲಾ ತೊಂದರೆಗಳಿಗೂ, ಕೆಲಸಗಳಿಗೂ, ಕಂಪ್ಯೂಟರ್‌ಗಳ ಮೇಲೆ ಹಾಕಿ, ಮಾನವ ನಿಸ್ತೇಜನವಾಗಿರುವುದು, ನಮ್ಮ ವ್ಯವಸ್ಥೆಗೆ ಕೈ ಕನ್ನಡಿಯಾಗಿದೆ, ಮಾನವ ಶಕ್ತಿಯನ್ನು ಬಳಕೆ ಮಾಡಿ, ವ್ಯಕ್ತಿಗಳಿಗೆ, ಅಭ್ಯರ್ಥಿಗಳಿಗೆ, ಪರೀಕ್ಷೆ ನಡೆಸಿ, ಲೈಸೆನ್ಸ್ ನೀಡುವಂತಹ ಹಳೆ ಪದ್ಧತಿಯೇ ಎಷ್ಟೋ ಉತ್ತಮ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ.





ಉದಯವಾಹಿನಿ ಚಿತ್ರ

**ಲೈಸೆನ್ಸ್ ನೀಡುವುದು ಅಸಾಧ್ಯ**

**ಸರ್ವರ್‌ಗಳು ಕೆಲಸ ಮಾಡುತ್ತಿಲ್ಲ, ಒತ್ತಡದಲ್ಲಿವೆ**

**ಕಂಪ್ಯೂಟರ್ನಲ್ಲಿ, ಆನ್ಲೈನಲ್ಲಿ ಅಭ್ಯರ್ಥಿಗಳು ಅರ್ಜಿ ಹಾಕಿ, ನಿಗದಿಪಡಿಸಿದ ದಿನಾಂಕದ ಸಮಯವನ್ನು ಆಯ್ಕೆ ಮಾಡಿಕೊಂಡು, ಆರ್‌ಟಿಓ ಕಚೇರಿಗೆ ಬಂದಾಗ, ಸರ್ವರ್‌ಗಳು ಕೆಲಸ ಮಾಡುತ್ತಿಲ್ಲ, ಒತ್ತಡದಲ್ಲಿವೆ, ಆಧುನಿಕರಣಗೊಳ್ಳುತ್ತಿವೆ, ಹಾಗಾಗಿ ಲೈಸೆನ್ಸ್ ನೀಡುವುದು ಅಸಾಧ್ಯವಾಗಿದೆ ಎಂದು ಜನರನ್ನ ಸರದಿಯಲ್ಲಿ ನಿಲ್ಲಿಸಿ, ಗಂಟೆಗಟ್ಟಲೆ, ಅವರ ದೈನಂದಿನ ಚಟುವಟಿಕೆಗಳಿಗೆ ತೊಂದರೆ ಉಂಟು ಮಾಡುವಂತಹ ಅವ್ಯವಸ್ಥೆ ಆನ್ಲೈನಲ್ಲಿ ಅನುಮತಿ ಪಡೆದಂತಹ ಅರ್ಜಿಗಳನ್ನು ಕಲಿಕಾ ಪರೀಕ್ಷೆಯಲ್ಲಿ ತೇರ್ಗಡೆ ಮಾಡಿ, ನಂತರ ಅವುಗಳನ್ನ ಕಚೇರಿಯಲ್ಲಿ ಅಪ್ಲೋಡ್ ಮಾಡಿ, ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ರೂಢಿಸಿಕೊಳ್ಳಬೇಕಾಗಿದೆ.**

**ಚುರುಕುತನ ಇದ್ದಂತೆ ಕಾಣುತ್ತಿಲ್ಲ**

**ಕೇವಲ ಅರ್ಧ ಗಂಟೆಯಲ್ಲಿ ಆನ್ಲೈನಲ್ಲಿ ಪರೀಕ್ಷೆ ಪಾಸ್ ಆಗಬಹುದು, ಡ್ರೈವಿಂಗ್ ಲೈಸೆನ್ಸ್ ಪಡೆಯಬಹುದು ಎಂಬುದೆಲ್ಲ ಸುಳ್ಳಾಗಿದೆ, ಗಂಟೆಗಟ್ಟಲೆ ಅರ್ಜಿಗಳನ್ನ ತುಂಬಿ, ಮತ್ತೊಮ್ಮೆ ಆರ್‌ಟಿಓ ಮುಂದೆ ಗಂಟೆಗಟ್ಟಲೆ ಕಾದು ನಿಂತು, ಲೈಸೆನ್ಸ್ ಪಡೆಯುವುದರಲ್ಲಿ ಯಾವುದೇ ಚುರುಕುತನ ಇದ್ದಂತೆ ಕಾಣುತ್ತಿಲ್ಲ, ಮೊದಲಿಗಿಂತ ಈಗ ಇನ್ನೂ ಹೆಚ್ಚು ತಡವಾಗಿ, ಲೈಸೆನ್ಸ್ ಪಡೆಯುವ ವ್ಯವಸ್ಥೆ ಬಂದಿದೆ, ಇದನ್ನ ಬದಲಾಯಿಸುವ ನಿಟ್ಟಿನಲ್ಲಿ ಆರ್ ಟಿ ಓ ದಲ್ಲಿರುವ ಅಧಿಕಾರಿಗಳು, ತಂತ್ರಜ್ಞರು ಪ್ರಯತ್ನಿಸಬೇಕಿದೆ.**

## ಅಕ್ರಮ ಮಾನವ ಕಳ್ಳಸಾಗಣೆ ನಿವಾರಣೆಗೆ ಜಾಗೃತಿ ಅಗತ್ಯ : ಜೈಬುನ್ನಿಸಾ

• ಉದಯವಾಹಿನಿ, ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕ ತಡೆ ಕುರಿತು ತರಬೇತಿ ಕಾರ್ಯಕ್ರಮ ಮಂಗಳೂರು ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಬುನ್ನಿಸಾ ಮಾತನಾಡಿ, ಅಕ್ರಮ ಮಾನವ ಕಳ್ಳ ಸಾಗಣೆ ಒಂದು ಸಾಮಾಜಿಕ ಪಿಡುಗು, ಮಕ್ಕಳು ಮತ್ತು ಮಹಿಳೆಯರು ಈ ಜಾಲಕ್ಕೆ ಸಿಲುಕುತ್ತಿರುವುದು ವಿಷಾದನೀಯ. ಸಾರ್ವಜನಿಕರು ಜಾಗೃತರಾಗಬೇಕೇ ಹೊರತು ಕಾನೂನು ಜಾರಿಗೆ ತಂದರೂ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ಡಾ.ಅಕ್ಷತ ಆದರ್ಶ್ ಮಾತನಾಡಿ, ದೇಶದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದೆ. ಮಹಿಳೆ ವೈಚಾರಿಕವಾಗಿ ಬೆಳೆಯುತ್ತಾ ವಿಚಾರಶೀಲರಾಗಬೇಕು. ಕಾನೂನುಗಳ ಬಗ್ಗೆ ಅರಿವಿದ್ದಾಗ ಮಾತ್ರ ಎಲ್ಲವೂ ಸುವ್ಯವಸ್ಥಿತವಾಗಿರುತ್ತದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ ರೋಹಿತ್ ಸಿ.ಜೆ ಅವರು ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆಯ ಕುರಿತು ಹಾಗೂ, ಅನೈತಿಕ ಸಂಚಾರ ತಡೆ ಕಾಯ್ದೆ, ಬಾಲ್ಯ ನ್ಯಾಯ ಕಾಯ್ದೆ-2015 ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಬಗ್ಗೆ ಮಾಹಿತಿ ನೀಡಿದರು.

## ಕರ್ನಾಟಕ ರಕ್ಷಣಾ ವೇದಿಕೆಯ 21ನೇ ವರ್ಷದ ಸಂಭ್ರಮಾಚರಣೆ

• ಉದಯವಾಹಿನಿ, ಕೆಂಭಾವಿ

ಕನ್ನಡ ರಕ್ಷಣಾ ವೇದಿಕೆಯು ಇಡೀ ಜಿಲ್ಲೆಯಲ್ಲಿ ನಿರಂತರವಾಗಿ ನಾಡು ನುಡಿ ಬಗ್ಗೆ ಹಲವಾರು ಸಮಸ್ಯೆಗಳ ಬಗ್ಗೆ, ಜನರ ಪರ ಕೆಲಸ ಮಾಡುತ್ತಾ ಬಂದಿದೆ. ಜನಪ್ರತಿನಿಧಿಗಳಿರಲಿ, ಯಾರೇ ಇರಲಿ ಕನ್ನಡದ ಬಗ್ಗೆ ಮೊದಲು ಕಾಳಜಿ ಇದ್ದವರಿಗೆ ಆದ್ಯತೆ ನೀಡಿ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿ ಎನ್ ಭೀಮು ನಾಯಕ್ ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ 21ನೇ ವರ್ಷದ ಸಂಭ್ರಮಾಚರಣೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕರ್ನಾಟಕ ರಕ್ಷಣಾ ವೇದಿಕೆ ರೈತರ, ಜನ ಸಾಮಾನ್ಯರ ಸಮಸ್ಯೆಗಳಿಗೆ ಬೆಂಬಲ ನೀಡುವ ಕನ್ನಡಪರ ಸಂಘಟನೆಯಾಗಿದ್ದು, ನೆಲ-ಜಲ ರಕ್ಷಣೆಗಾಗಿ ಹೋರಾಟಗಳನ್ನು ನಡೆಸುತ್ತಿದೆ. ರೈತ ಪರವಾಗಿ ನೆಲ-ಜಲ ಸಮಸ್ಯೆಗಳ ವಿರುದ್ಧ ಹೋರಾಡುತ್ತಾ ಸಾಮಾಜಿಕ ಕಾರ್ಯಕ್ರಮಗಳ ಮೂಲಕ ರೈತರ ಕುಂದು ಕೊರತೆಗಳನ್ನು ಪರಿಹರಿಸುತ್ತಿದೆ.

ನಾವೆಲ್ಲರೂ ಮೊದಲು ಕರ್ನಾಟಕದವರು, ನಾಡು ನುಡಿಯ ಬಗ್ಗೆ ಕಾಳಜಿ ಇಲ್ಲದ ಆಡಳಿತ ಪಕ್ಷ ಆಗಲಿ, ವಿರೋಧ ಪಕ್ಷ ಆಗಲಿ,ನಮಗೆ ಅವಶ್ಯಕತೆ ಇಲ್ಲ ಇಡೀ ಜಿಲ್ಲೆಯಲ್ಲಿ ಇರುವಂತಹ ಎಲ್ಲಾ ಜನಪ್ರತಿನಿಧಿಗಳು ತಮ್ಮ ಸ್ವಾರ್ಥಕ್ಕಾಗಿ ರಾಜಕಾರಣ ಮಾಡ್ತಾರೆ ಹೊರತು, ಸಾರ್ವಜನಿಕರ ಪರ, ರೈತರ ಪರ ಕಾರ್ಮಿಕರ ಪರ ಜಿಲ್ಲೆಯಲ್ಲಿ ಒಬ್ಬ ಪ್ರತಿನಿಧಿ ಯಾರು ಧ್ವನಿಯೆತ್ತುವುದಿಲ್ಲ, ನಮ್ಮ ಜಿಲ್ಲೆಯನ್ನು ಶೈಕ್ಷಣಿಕವಾಗಿ ಮೂಲಭೂತ ಸೌಕರ್ಯದಿಂದ ಅಭಿವೃದ್ಧಿ ಪಡಿಸುವಲ್ಲಿ ರಾಜಕಾರಣಿಗಳು ವಿಫಲರಾಗಿದ್ದಾರೆ ಎಂದು ಜನಪ್ರತಿನಿಧಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ನಾವು ನಾಡಿನ ರಕ್ಷಣೆಗಾಗಿ ರೈತರ ರಕ್ಷಣೆಗಾಗಿ ಕಾರ್ಮಿಕರ ರಕ್ಷಣೆಗಾಗಿ ಗಟ್ಟಿಯಾಗಿ ನಿಂತಿದ್ದೇವೆ ಜೈಲಿಗೆ ಹೋಗುವುದು ನಮಗೇನು ಹೊಸದಾಗಿಲ್ಲ ಕನ್ನಡದ ವಿರೋಧಿ ರಾಜಕಾರಣಿಗಳಿಗೆ ಆಮಂತ್ರಣ ನೀಡಬೇಡಿ ಎಂದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಷ. ಬ್ರ. ಶ್ರೀ ಚನ್ನಬಸವ ಶಿವಾಚಾರ್ಯರು ಹಿರೇಮಠ ಸಂಸ್ಥಾನ, ಕೆಂಭಾವಿ, ಪ. ಪೂ ಶ್ರೀ ಶಾಂತರುದ್ರಮುನಿ ಶಿವಾಚಾರ್ಯರು ಕೋರಿಸಿದ್ದೇಶ್ವರ ಶಾಖಾಮಠ, ಕರಡಕಲ್, ತಪೋಭಾಸ್ಕರ, ಷ. ಬ್ರ. ಶ್ರೀ ಸಿದ್ಧಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ಮಹಾಸ್ವಾಮಿಗಳು ಕಂಠಿಮಠ, ಮುದನೂರ. ವಹಿಸಿದರು. ಯುವ ಮುಖಂಡ ಆದಿತ್ಯ ಗೌಡ ಪೊಲೀಸ್ ಪಾಟೀಲ್, ಪುರಸಭೆ ಅಧ್ಯಕ್ಷ ಶ್ರೀಮತಿ ಪ್ರಿಯ ರಾಮನಗೌಡ ಪೊಲೀಸ್ ಪಾಟೀಲ್,ಮಹಿಪಾಲ್ ರೆಡ್ಡಿ ಡಿಗ್ಗಾವಿ, ಆರಿಫ ನಾನಾ, ರವಿಶಂಕರ್ ಸೊನ್ನದ, ರಾಘವೇಂದ್ರ ದೇಶ್ಪಾಂಡೆ, ಶರಣಪ್ಪ ಯಾಳಗಿ,ಖಾಜಾ ಪಟೇಲ್ ಕಾಚೂರು, ಕೃಷ್ಣಾರೆಡ್ಡಿ ಮುದ್ನೂರ್ ಇದ್ದರು.



ಉದಯವಾಹಿನಿ ಚಿತ್ರ

**ಧರ್ಮದ ಭಾವ್ಯಕ್ಯತೆಯ ನಾಡು ಕರ್ನಾಟಕ. ಕನ್ನಡ ನೆಲ,ಜಲ ,ಬೆಳಸುವ, ಉಳಿಸುವ, ಕಾರ್ಯ ನಮ್ಮದಾಗಲಿ ಮಹದಾಯಿ, ಕಾವೇರಿ, ಬೆಳಗಾವಿ ಗಡಿ ವಿವಾದ, ರೈಲ್ವೆ ಇಲಾಖೆಯಲ್ಲಿ ಕನ್ನಡ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ನಾರಾಯಣಗೌಡ ಅವರ ಸಮ್ಮುಖದಲ್ಲಿ ಕನ್ನಡ ನಾಡಿಗಾಗಿ ಹೋರಾಟ ಮಾಡುವಲ್ಲಿ ನಮ್ಮ ಸಂಘಟನೆ ಮುಂಚೂಣಿಯಲ್ಲಿದೆ. ಕನ್ನಡ ನಾಮಫಲಕ ವಿಷಯದಲ್ಲಿ ಬೆಂಗಳೂರು ನಗರದಲ್ಲಿ ದೊಡ್ಡ ಹೋರಾಟ ಮಾಡಲಾಯಿತು ನಾಡ ನುಡಿ ರಕ್ಷಣೆಯ ವಿಷಯದಲ್ಲಿ ಯಾರೊಂದಿಗೂ ರಾಜಿ ಆಗುವುದಿಲ್ಲ. -ವೆಂಕಟೇಶ ಬೈರಿಮಡ್ಡಿ ಸರ್ವ, ಕರವೇ ತಾಲ್ಲೂಕ ಅಧ್ಯಕ್ಷ**

## 84 ವರ್ಷಗಳ ಹಿಂದಿನ ಫೋಟೊ ಶ್ರೀಮಠಕ್ಕೆ ಅರ್ಪಿಸಿದ ಶಿವಶರಣಪ್ಪ

• ಉದಯವಾಹಿನಿ, ಚಿಂಚೋಳಿ

ವಿಧಾನಸಭಾ ಮತಕ್ಷೇತ್ರದ ಕೋಡ್ಲಿ ಗ್ರಾಮದಲ್ಲಿ 1941ರಲ್ಲಿ ಜರುಗಿದ ಲಿಂ.ಸಿದ್ರಾಮಪ್ಪ ಕಮಲಾಬಾಯಿ ಸಜ್ಜನಶೆಟ್ಟಿರವರ ಮದುವೆಗೆ ಅಂದಿನ ಹಾರಕೂಡ ಸಂಸ್ಥಾನದ ಪೀಠಾಧಿಪತಿ ಚನ್ನಬಸವ ಶಿವಯೋಗಿಗಳನ್ನು ಕುದುರೆ ಮೇಲೆ ಬಂದು ಗ್ರಾಮದಲ್ಲಿ ನಡೆಸಿದ ಮೆರವಣಿಗೆಯ ಫೋಟೊ ಇಂದಿನ ಶ್ರೀಮಠದ ಚನ್ನವೀರ ಶಿವಾಚಾರ್ಯರಿಗೆ ಭಕ್ತರಾದ ಭುವನೇಶ್ವರಿ ಶಿವಶರಣಪ್ಪ ಸಜ್ಜನಶೆಟ್ಟಿ ದಂಪತಿ ಮಠಕ್ಕೆ ಹಸ್ತಾಂತರಿಸಿದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಪತ್ರಕರ್ತ ಜಗನ್ನಾಥ ಶೇರಿಕಾರ, ವಿಲಾಸವತಿ ನಾಗಪ್ಪ ಸಜ್ಜನ,ಮಲ್ಲಿಕಾರ್ಜುನ,ರೇವಣಸಿದ್ದಪ್ಪ ಹುಡಗಿ,ಭೀಮರಾವ ಚೇಂಗಟಿ,ರಮೇಶ ಪೆದ್ದಿ ಇದ್ದರು.

## ಶೀಘ್ರದಲ್ಲಿ ಏತ ನೀರಾವರಿ ನೀರು ರೈತರ ಭೂಮಿಗೆ : ನೇಮಿರಾಜ್


• ಉದಯವಾಹಿನಿ, ಹಗರಿಬೊಮ್ಮನಹಳ್ಳಿ

ರೈತರ ಬಹುದಿನಗಳ ಕನಸು ತಾಲ್ಲೂಕಿನ ಚಿಲವಾರ ಬಂಡಿ ಏತ ನೀರಾವರಿ ಯೋಜನೆ ನನಸಾಗಿದೆ ಎಂದು ಶಾಸಕ ಕೆ ನೇಮಿರಾಜ್ ನಾಯ್ಕ್ ಹೇಳಿದರು. ಮಠಾಧೀಶರೊಂದಿಗೆ ಶಾಸಕರು ಏತಾ ನೀರಾವರಿ ಯೋಜನೆಗೆ ಪ್ರಾಯೋಗಿಕವಾಗಿ ಶುಕ್ರವಾರ ಬಟನ್ ಒತ್ತುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಬಹು ವರ್ಷದ ಹೋರಾಟದ ಫಲದಿಂದ ರೈತರ ಬದುಕು ಹಸನಾಗುತ್ತದೆ. ಕಡಲ ಬಾಳು, ಆನಂದ ದೇವನಹಳ್ಳಿ ಬ್ಯಾಲಾಳು ಬಾಚಿಗೊಂಡನಹಳ್ಳಿ ಗ್ರಾಮದ ರೈತರ ಹೋರಾಟದ ಭಾಗವಾಗಿ ನಾನು 2008ರಲ್ಲಿ ಶಾಸಕನಾಗಿರುವಾಗ 2012ರಲ್ಲಿ ತುಂಗಭದ್ರಾ ಬೋರ್ಡಿಂಗ್‌ನಿಂದ ನೀರಿಗಾಗಿ ಪರವಾನಿಗೆ ತೆಗೆದುಕೊಂಡು ಮಠಾಧೀಶರು ಮತ್ತು ರೈತರ ಜೊತೆ ಎತ್ತು ಬಂಡಿಗಳಲ್ಲಿ ಆಗಮಿಸಿ ಜಾಕ್ವೆಲ್ ಸ್ಥಳದಲ್ಲಿ ಅಡಿಗಲ್ಲು, ಕಡಲಬಾಳು ಗ್ರಾಮದಲ್ಲಿ ಫಲಕ ಹಾಕಿ ಪೂಜೆ ಮಾಡಲಾಯಿತು.


ಉದಯವಾಹಿನಿ ಚಿತ್ರ

50 ಕೋಟಿ ರೂ. ವೆಚ್ಚದಲ್ಲಿ ಸುಮಾರು 5 ಸಾವಿರ ಎಕರೆ ಕೃಷಿ ಭೂಮಿಗೆ ನೀರುಣಿಸಬಹುದು. ಮುಂದಿನ ಜೂನ್ ತಿಂಗಳಿಂದ ರೈತರಿಗೆ ನಿರಂತರ ನೀರು ಒದಗಿಸಿ ಎರಡು ಬೆಳೆಗಳನ್ನು ಬೆಳೆಯುವ ಸಾಮರ್ಥ್ಯದ ಜೊತೆಗೆ 15 ಸಾವಿರ ಎಕರೆಯಷ್ಟು ಭೂಮಿಯಲ್ಲಿ ಅಂತರ್ಜಲ ಹೆಚ್ಚಾಗುತ್ತದೆ ಎಂದರು.

## ಮೆಕ್ಕೆಜೋಳ ಖರೀದಿ ಕೇಂದ್ರಕ್ಕೆ ಮನವಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ನವಲಗುಂದ

ತಾಲ್ಲೂಕಿನಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ಪ್ರಾರಂಭಿಸುವಂತೆ ಒತ್ತಾಯಿಸಿ ಧಾರವಾಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಕರ್ನಾಟಕ ರೈತ ಸೇನೆ ಹೋರಾಟಗಾರರು ಮನವಿ ಸಲ್ಲಿಸಿದರು.ಕರ್ನಾಟಕ ರೈತ ಸೇನೆಯಿಂದ ನವಲಗುಂದದಲ್ಲಿ ಉಪವಾಸ ಕೈಗೊಂಡ ಸಂದರ್ಭ ತಾವು ಮೆಕ್ಕೆಜೋಳ ಖರೀದಿ ಪ್ರಾರಂಭಿಸುವ ಬಗ್ಗೆ ರೈತರಿಗೆ ಅನುಕೂಲಕರವಾಗಿ ಜಿಲ್ಲಾಡಳಿತ ಕಾರ್ಯನಿರ್ವಹಿಸುತ್ತದೆ ಎಂದು ಭರವಸೆಯಿಂದ ಹೋರಾಟ ಕೈಬಿಡಲಾಗಿತ್ತು.

ಸರ್ಕಾರ ಪ್ರಾರಂಭದಲ್ಲಿ ರೈತರೊಬ್ಬರಿಂದ 25 ಕ್ವಿಂಟಲ್ ಎಂದು ಪ್ರಚಾರ ಮಾಡಿ ಈಗ ಒಬ್ಬ ರೈತರಿಂದ 5 ಕ್ವಿಂಟಲ್ ಖರೀದಿಗೆ ಆದೇಶ ನೀಡಿದೆ. ಅದನ್ನು ಹೋರಾಟಗಾರರು ಖಂಡಿಸುತ್ತೇವೆ. ಈಗಿರುವ 20 ಕ್ವಿಂಟಲ್ ಬದಲಿಗೆ 40 ಕ್ವಿಂಟಲ್ ತೆಗೆದುಕೊಳ್ಳಬೇಕು. ಜಿಲ್ಲೆಯ ಕೊನೆಯ ಗ್ರಾಮದವರು ಧಾರವಾಡ ಕೆಎಂಎಫ್ ಗೆ ಮೆಕ್ಕೆಜೋಳ ತಂದು ಕೊಡುವುದು ವೆಚ್ಚದಾಯಕ. ಪಕ್ಕದ ಗದಗ, ಬಾಗಲಕೋಟೆ ತಾಲ್ಲೂಕಿಗೆ ಹೊಂದಿಕೊಂಡಿರುವ ಬೇರೆ ಜಿಲ್ಲೆಗಳಲ್ಲಿನ ತಾಲ್ಲೂಕಿನಲ್ಲಿ ಖರೀದಿ ಕೇಂದ್ರವನ್ನು ಈಗಾಗಲೇ ಸ್ಥಾಪಿಸಿದ್ದು, ಅದರಂತೆ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಖರೀದಿ ಕೇಂದ್ರವನ್ನು ಕೂಡಲೇ ಸ್ಥಾಪಿಸಬೇಕು ಎಂದು ಮನವಿ ಮೂಲಕ ಒತ್ತಾಯಿಸಿದರು.

## ಆಹಾರವೇ ಆರೋಗ್ಯ : ನಿತ್ಯ ಸಿರಿಧಾನ್ಯ ಬಳಕೆಗೆ ಆದ್ಯತೆ ನೀಡಿ

• ಉದಯವಾಹಿನಿ, ವಿಜಯನಗರ

ದೈನಂದಿನ ಆಹಾರದಲ್ಲಿ ಪ್ರತಿಯೊಬ್ಬರು ಸಿರಿಧಾನ್ಯಗಳ ಬಳಕೆಯನ್ನು ಹೆಚ್ಚಿಸಿ ಕೌಟುಂಬಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಪ್ರಸ್ತುತದಲ್ಲಿ ಆಹಾರವೇ ಆರೋಗ್ಯವಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಹೇಳಿದರು.

ನಗರದ ಕನಕದಾಸರ ವೃತ್ತದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ ವತಿಯಿಂದ ಅಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯ ನ್ಯೂಟ್ರಿ ಸಿರಿಧಾನ್ಯಗಳ ಕಾರ್ಯಕ್ರಮದಲ್ಲಿ ಆಹಾರ ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಸಾವಯವ ಮೇಳದ ಪ್ರಯುಕ್ತ ಏರ್ಪಡಿಸಿದ್ದ 'ಸಿರಿಧಾನ್ಯಗಳ ನಡಿಗೆ, ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಅವರು ಶುಕ್ರವಾರ ಮಾತನಾಡಿದರು, ದೇಶದಲ್ಲಿನ ಸಿರಿಧಾನ್ಯಗಳು ಸಾಂಪ್ರದಾಯಿಕ ಭಾರತೀಯ ಕೃಷಿಯಲ್ಲಿ ಅತ್ಯಂತ ಪೌಷ್ಠಿಕಾಂಶಯುಕ್ತವಾದ ಧಾನ್ಯಗಳಾಗಿವೆ. ಇವುಗಳನ್ನು ಆಹಾರ ಪದ್ದತಿಯಲ್ಲಿ ಹೆಚ್ಚಾಗಿ ಬಳಕೆ ಮಾಡುವುದರಿಂದ ಉತ್ತಮ ಆರೋಗ್ಯವನ್ನು ಪಡೆಯಬಹುದು. ಸಿರಿಧಾನ್ಯಗಳಲ್ಲಿ ನಾರು, ಕಬ್ಬಿಣದ ಅಂಶಗಳು ಹಾಗೂ ಕಾರ್ಬೋಹೈಡ್ರೇಟ್‌ಗಳು ಹೆಚ್ಚಾಗಿವೆ.


ಉದಯವಾಹಿನಿ ಚಿತ್ರ

**ಸಿರಿಧಾನ್ಯಗಳ ನಡಿಗೆ, ಜಾಗೃತಿ ಜಾಥಾ**

ಇವುಗಳಲ್ಲಿ ಶಕ್ತಿಶಾಲಿ ಆ್ಯಂಟಿ ಆಕ್ಸಿಡೆಂಟ್ ಗಳು ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚಾಗಿರುವ ಹಿನ್ನಲೆಯಲ್ಲಿ ರೋಗಗಳನ್ನು ದೂರವಿಡಲು ಮತ್ತು ದೀರ್ಘಕಾಲದ ಕಾಯಿಲೆಗಳಿಂದ ರಕ್ಷಿಸಲು ಸಹಾಯಕವಾಗುತ್ತವೆ. ಅಕ್ಕಿ, ಗೋಧಿ ಧಾನ್ಯಗಳಿಗಿಂತ ಐದು ಪಟ್ಟು ಪ್ರೊಟೀನ್, ವಿಟಮಿನ್‌ಗಳನ್ನು ಹೊಂದಿವೆ. ಸಿರಿಧಾನ್ಯಗಳ ಮಹತ್ವವನ್ನು ಜಾಗೃತಿಗೊಳಿಸಲು ಈ ಸಿರಿಧಾನ್ಯಗಳ ನಡಿಗೆ ಕಾರ್ಯಕ್ರಮ ಸಹಕಾರಿಯಾಗಲಿದೆ. ರಾಸಾಯನಿಕ ಗೊಬ್ಬರಗಳನ್ನು ಬಳಸದೇ ಬೆಳೆಯುವ ಸಾವಯವ ಬೆಳೆಗಳು ಸಿರಿಧಾನ್ಯಗಳಾಗಿವೆ ಎಂದರು.

## 'ಮಹಡಿ ಪ್ರದೇಶ' ಅನುಪಾತ ಹೆಚ್ಚಳಕ್ಕೆ ರೈ ಆಗ್ರಹ

• ಉದಯವಾಹಿನಿ, ಪುತ್ತೂರು

ಮಂಗಳೂರಿನಲ್ಲಿರುವಂತೆ ಪುತ್ತೂರಿಗೂ ಮಹಡಿ ಪ್ರದೇಶದ ಅನುಪಾತ ಹೆಚ್ಚಿಸುವಂತೆ ನಗರಾಡಳಿತ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರನ್ನು ಪುತ್ತೂರು ಶಾಸಕ ಅಶೋಕ್ ರೈ ಆಗ್ರಹಿಸಿದ್ದಾರೆ. ಇಲಾಖಾ ಕಚೇರಿಯಲ್ಲಿ ಅಧಿಕಾರಿಯವರನ್ನು ಭೇಟಿಯಾದ ಶಾಸಕರು ಈ ಬಗ್ಗೆ ಮಾತುಕತೆ ನಡೆಸಿದರು.

ಮಂಗಳೂರಿನಲ್ಲಿ ವಸತಿ ಎಫ್‌ಎಆರ್ ಅನುಪಾತ 5.5 ಇದೆ. ಪುತ್ತೂರಿನಲ್ಲಿ ಕೇವಲ 2.5 ಇದೆ. ವಾಣಿಜ್ಯ ಸಂಕೀರ್ಣ ಅನುಪಾತವೂ ಮಂಗಳೂರಿನಲ್ಲಿ 5.5 ಇದೆ. ಆದರೆ ಪುತ್ತೂರಿನಲ್ಲಿ ಕೇವಲ 2 ಇದೆ. ಇದರಿಂದ ಪ್ರಸ್ತುತ ಅಭಿವೃದ್ಧಿ ಹೊಂದುತ್ತಿರುವ ಪುತ್ತೂರಿಗೆ ಸಮಸ್ಯೆಯಾಗುತ್ತಿದೆ. ಈಗಾಗಲೇ ಪುತ್ತೂರಿಗೆ ಮೆಡಿಕಲ್ ಕಾಲೇಜು ಮಂಜೂರಾಗಿದ್ದು, ಇನ್ನು ದೊಡ್ಡ ಉದ್ಯಮಗಳು ಪ್ರಾರಂಭವಾಗಲಿವೆ. ಈ ಹಿನ್ನಲೆಯಲ್ಲಿ ಎಫ್‌ಎಆರ್ ಅನುಪಾತವನ್ನು ಹೆಚ್ಚಳ ಮಾಡಬೇಕು. ಪುತ್ತೂರಿನ ಅಭಿವೃದ್ಧಿಗೆ ಪೂರಕವಾಗಿ ಇದು ಅಗತ್ಯದ ಬೇಡಿಕೆಯಾಗಿದೆ.

ಈ ಬಗ್ಗೆ ಇಲಾಖೆ ತಕ್ಷಣದ ಕ್ರಮ ಕೈಗೊಳ್ಳಬೇಕು. ಅತೀ ಶೀಘ್ರದಲ್ಲಿ ಮಂಗಳೂರಿನಂತೆ ಇಲ್ಲಿ ಉದ್ಯಮಗಳು ಪ್ರಾರಂಭವಾಗಲಿದ್ದು, ಮಂಗಳೂರಿನಲ್ಲಿಯ ಈ ಅನುಪಾತ ಪುತ್ತೂರಿಗೆ ಅನ್ವಯವಾಗಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಪುತ್ತೂರು ನಗರದ ಬೊಳುವಾರು ಮತ್ತು ದರ್ಬೆಯಲ್ಲಿ ನಿರ್ಮಾಣವಾಗುತ್ತಿರುವ ಸರ್ಕಲ್‌ಗೆ ನಗರಾಡಳಿತ ಇಲಾಖೆಯಿಂದ ಅನುದಾನ ನೀಡುವ ಬಗ್ಗೆಯೂ ಶಾಸಕರು ಚರ್ಚೆ ನಡೆಸಿದ್ದಾರೆ.

# ಕೃಷಿ ಭೂಮಿಯನ್ನು ಕೈಗಾರಿಕೆಗೆ ಕಬಳಿಸುವುದನ್ನು ಕೂಡಲೇ ಕೈಬಿಡಲು ರೈತರ ಆಗ್ರಹ

### ಕೃಷಿಯನ್ನೆ ನಂಬಿರುವ ಅನೇಕ ಕುಟುಂಬ, ಉನ್ನತ ಶಿಕ್ಷಣ ಪಡೆದ ಯುವಕರು ಮತ್ತೆ ದೂರದ ಪಟ್ಟಣಗಳಿಗೆ ದಿನಗೂಲಿ ಕೆಲಸಕ್ಕಾಗಿ ಅಲೆದಾಡಬೇಕಾಗುತ್ತದೆ

• ಉದಯವಾಹಿನಿ ವಿಜಯಪುರ

ತಿಡಗುಂದಿ ಸಮೀಪ 1203 ಎಕರೆ ರೈತರ ಫಲವತ್ತಾದ ಕೃಷಿಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಬಳಸುವುದನ್ನು ಸಂಪೂರ್ಣವಾಗಿ ವಿರೋಧಿಸಿ, ಈ ಯೋಜನೆಯನ್ನು ಇಲ್ಲಿಗೆ ಕೈಬಿಡಬೇಕು ಇಲ್ಲವಾದಲ್ಲಿ 350 ಕುಟುಂಬ ಬಿದಿಗೆ ಬೀಳಲಿದೆ. ಕೃಷಿಯನ್ನೆ ನಂಬಿರುವ ಅನೇಕ ಕುಟುಂಬ ಹಾಗೂ ಉನ್ನತ ಶಿಕ್ಷಣ ಪಡೆದ ಯುವಕರು ಮತ್ತೆ ದೂರದ ಪಟ್ಟಣಗಳಿಗೆ ದಿನಗೂಲಿ ಕೆಲಸಕ್ಕಾಗಿ ಅಲೆದಾಡಬೇಕಾಗುತ್ತದೆ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಅಪರ್ ಜಿಲ್ಲಾಧಿಕಾರಿಗಳಾದ ಸೋಮಲಿಂಗ ಗೆಣ್ಣೂರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತ ಈಗಾಗಲೇ ರಾಜ್ಯದ ಕೈಗಾರಿಕಾ ಸಚಿವರಾದ ಎಂ.ಬಿ ಪಾಟೀಲರಿಗೆ, ಮುಖ್ಯಮಂತ್ರಿಗಳಿಗೆ, ರಾಜ್ಯಪಾಲರಿಗೆ, ಹಾಗೂ ಕೈಗಾರಿಕಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ 3 ಬಾರಿ ಮನವಿ ಸಲ್ಲಿಸಲಾಗಿದೆ. ಆದಾಗ್ಯೂ ಕೂಡಾ ಕೆ.ಐ.ಡಿ.ಬಿ ಅಧಿಕಾರಿಗಳು ಕೆಲವೊಬ್ಬ ರೈತರನ್ನು ಪ್ರತ್ಯೇಕವಾಗಿ ಕರೆದು ಅವರಿಗೆ ವಿವಿಧ ಆಸೆಗಳನ್ನು ಹಚ್ಚಿ ಭೂಮಿ ಪಡೆದುಕೊಳ್ಳುವ ಕಳ್ಳರ ಕೆಲಸ ಮಾಡುತ್ತಿದ್ದಾರೆ.

ವಿಜಯಪುರ ಜಿಲ್ಲೆಯ ನಾಗಠಾಣ ಹೋಬಳಿಯ ತಿಡಗುಂದಿ ವ್ಯಾಪ್ತಿಯ ಒಟ್ಟು 1203 ಎಕರೆ ರೈತರ ಫಲವತ್ತಾದ ಕಪ್ಪ ಮಣ್ಣಿನ ಎರಿ ಜಮೀನುಗಳಲ್ಲಿ ಕೈಗಾರಿಕಾ ಪ್ರದೇಶಕ್ಕೆ ಬಳಸಿಕೊಳ್ಳಲು ತಯಾರಿ ನಡೆದಿದೆ ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಈ ಭಾಗದ ಯಾವ ರೈತರು ಕೂಡಾ ಈ ಬೆಲೆಬಾಳುವ ಫಲವತ್ತಾದ ಭೂಮಿಯನ್ನು ಕಳೆದುಕೊಳ್ಳಲು ತಯಾರಿಲ್ಲ. ಕೂಡಲೇ ಈ ಯೋಜನೆಯನ್ನು ಇಲ್ಲಿಗೆ ಕೈಬಿಡಬೇಕು ಅಥವಾ ಬೇರೆಡೆಗೆ ಕೃಷಿಗೆ ಯೋಗ್ಯವಿರದ ಭೂಮಿಯಲ್ಲಿ ಮುಂದುವರೆಸಬಹುದು, ಒಂದು ವೇಳೆ ಈ ಯೋಜನೆಯನ್ನು ತಿಡಗುಂದಿಯಲ್ಲಿ ಮುಂದುವರೆಸಿದ್ದೆ ಆದರೆ 1203 ಎಕರೆಯ ಸುಮಾರು 350 ಕುಟುಂಬಗಳು ಬೀದಿಗೆ ಬೀಳಲಿವೆ. ಈ ಕುರಿತು ಜಿಲ್ಲೆಯಾದ್ಯಂತ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಈ ಮೂಲಕ ಎಚ್ಚರಿಕೆ ನೀಡುತ್ತೇವೆ ಎಂದರು.

ಜಿಲ್ಲೆಯಲ್ಲಿಯ ಕೃಷಿಗೆ ಯೋಗ್ಯವಿರುವ ಯಾವ ಭೂಮಿಯನ್ನು ಅನ್ಯ ಕಾರ್ಯಗಳಿಗೆ ಬಳಸಿಕೊಳ್ಳಬೇಡಿ ಪಾಳುಬಿದ್ದಿರುವ ಗುಡ್ಡಗಾಡು ಪ್ರದೇಶಗಳಲ್ಲಿ ನೀವೂ ಕೈಗಾರಿಕೆ ತೆಗೆದುಕೊಂಡು ಬನ್ನಿ ನಮ್ಮದೇನು ಅಭ್ಯಂತರ ಇಲ್ಲ ಎಂದು ಪಟ್ಟು ಹಿಡಿದು ನಮ್ಮ ಜೀವ ಹೋದರು ಕೃಷಿ ಭೂಮಿ ಬಿಡುವುದಿಲ್ಲ ಎನ್ನುತ್ತಿದ್ದಾರೆ.

ಒಂದು ವೇಳೆ ಮೊಂಡುತನದಿಂದ ಹೀಗೆ ಮುಂದುವರೆದು ಈ ಫಲವತ್ತಾದ ಕೃಷಿ ಭೂಮಿಯನ್ನು ಪಡದೆ ತೀರುತ್ತೇನೆ ಎನ್ನುವ ಹಠಕ್ಕೆ ಬಿದ್ದಿದೇ ಆದರೆ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ 31 ಜಿಲ್ಲೆಯ ಪದಾಧಿಕಾರಿಗಳು ತಿಡಗುಂದಿಯಲ್ಲಿ ಬಿಡಾರ ಹೂಡಿ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ. ಇದಕ್ಕೆ ನೇರ ಹೊಣೆಗಾರರು ಆನದರೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಮತ್ತು ಕೈಗಾರಿಕಾ ಸಚಿವರಾದ ಎಂ.ಬಿ.ಪಾಟೀಲ ಅವರೆ ಆಗುತ್ತಾರೆ ಎಂದರು

ಇಗಾಗಲೇ ರಾಜ್ಯದಲ್ಲಿ ಹಲವಾರು ರೈತ ಹೋರಾಟಗಳನ್ನು ಮಾಡಿ ಯಶಸ್ವಿಯಾಗಿ ಗೆದ್ದಿರುವುದು ಇದೆ. ಉದಾ : ಚನ್ನರಾಯನ ಪಟ್ಟಣದ ಕೆ.ಐ.ಡಿ.ಬಿ ಹೋರಾಟ ಇತ್ಯಾದಿ, ಕೂಡಲೇ ಇದರ ಸೂಕ್ಷ್ಮತೆಯನ್ನು ಅರಿತು ಜಿಲ್ಲೆಯಲ್ಲಿ ಹಲವಾರು ಕೃಷಿಗೆ ಯೋಗ್ಯವಲ್ಲದ ಭೂಮಿಗಳು ಇವೆ ಅಲ್ಲಿ ಯೋಜನೆ ಮಾಡಲಿ ನಮ್ಮದೇನು ತಕಾರಾರು ಇಲ್ಲ ಎಂದರು.

ಈ ವೇಳೆ ರೈತ ಮುಖಂಡರಾದ ಅಶೋಕಗೌಡ ಬಿರಾದರ, ಸಿದ್ದರಾಮ ಪೂಜಾರಿ, ಗೋಪಾಲ್ ಬೋಸಲೆ, ಸಾಗರ ಗಡಚಿ, ಈಶ್ವರಪ್ಪ ಬೆಳ್ಳುಂಡಗಿ, ಮಡಿವಾಳ ತಿಲ್ಲಿಹಾಳ ಸಾಹೇಬಗೌಡ ಬಿರಾದಾರ ಮಾಳಪ್ಪ ಜಂಬಗಿ, ಹಣಮಂತ ಜಂಬಗಿ, ಅರವಿಂದ ಗಡಚಿ, ಬಿ ಬಿ ಮೇಲಿನಮನಿ, ಸಾಬುರಾವ್ ಛಲವಾದಿ, ಶಿವಪ್ಪ ಜಂಬಗಿ ಸೇರಿದಂತೆ ಅನೇಕರು ಇದ್ದರು


ಉದಯವಾಹಿನಿ ಚಿತ್ರ

**350 ಕುಟುಂಬಗಳು ಬೀದಿಗೆ**

**ಜಿಲ್ಲೆಯಲ್ಲಿ ಈ ಮುಂಚೆ ಬೇರೆ ಬೇರೆ ಉದ್ದೇಶಕ್ಕಾಗಿ ನಿಗದಿ ಮಾಡಿರುವ ಭೂಮಿಯನ್ನು ಸಂಪೂರ್ಣವಾಗಿ ಬಳಸಿಕೊಂಡು ನಂತರದಲ್ಲಿ ಹೊಸ ಹೊಸ ಯೋಜನೆಗಳಿಗೆ ಕೈಹಾಕಿದರೆ ಚೆನ್ನಾಗಿರುತ್ತದೆ. 10 ವರ್ಷ ಕಳೆದರು ಮುಳವಾಡದ 3500 ಎಕರೆ ಕೈಗಾರಿಕಾ ಪ್ರದೇಶ ಇನ್ನು ಖಾಲಿ ಖಾಲಿ ಬಿದ್ದಿದೆ. ರೈತರಿಗೆ ಕೊಡಬೇಕಾಗಿರುವ ಪರಿಹಾರದ ಹಣ ಕೂಡಾ ಇನ್ನು ಬಂದಿರುವುದಿಲ್ಲ ಎಂದು ನಿತ್ಯ ರೈತರ ಗೋಳಾಟವಾಗಿದೆ. ಮೊದಲು ಅಲ್ಲಿ ರೈತರಿಗೆ ಬರಬೇಕಾದ ಪರಿಹಾರ ಕೊಡಿ. -ಮಡಿವಾಳ ತಿಲ್ಯಾಳ**

**ಎಂ.ಬಿ ಪಾಟೀಲರೇ ನಮ್ಮ ಭಾಗಕ್ಕೆ ನೀರಿನ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಪದವಿದರರು ಬೇರೆ ಕಡೆ ಕೆಲಸ ಮಾಡುವುದು ಬೇಡ ನಮ್ಮ ಜಮೀನಿನಲ್ಲಿಯೇ ದುಡಿದು ಮಾಲಿಕರಾಗಿ ಇರೋಣ ಎನ್ನುವ ಆಸೆಯಿಂದ ನಮ್ಮ ಸ್ವಗ್ರಾಮಕ್ಕೆ ಬಂದು ವ್ಯವಸಾಯ ಮಾಡಿಕೊಂಡು ಸಂತೋಷದಿಂದ ಇದ್ದೇವೆ, ಆದರೆ ಈಗ ಏಕಾಏಕಿ ಕೈಗಾರಿಕೆಗಾಗಿ ಒಳ್ಳೆಯ ಜಮೀನನ್ನು ಬಳಸಿಕೊಳ್ಳುವುದು ಯಾವ ನ್ಯಾಯ, ನಾವ್ಯಾರೂ ನಮ್ಮ ಭೂಮಿಯನ್ನು ಮಾರಿಕೊಳ್ಳಲ್ಲು ತಂದಾರಿಲ್ಲ. -ಗಿರೀಶ ತಾಳಿಕೋಟಿ**

## ನೆಹರು ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮುಂದುವರೆದಿದೆ : ಸೋನಿಯಾ ಗಾಂಧಿ



**ನವದೆಹಲಿ:** ಜವಾಹರಲಾಲ್ ನೆಹರು ಅವರನ್ನು ನಿಂದಿಸುವ ಯೋಜನೆಯೇ ಇಂದಿನ ಆಡಳಿತ ವ್ಯವಸ್ಥೆಯ ಪ್ರಮುಖ ಗುರಿಯಾಗಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿದ್ದಾರೆ. ದೇಶದ ಇತಿಹಾಸದಿಂದ ಮೊದಲ ಪ್ರಧಾನಿಯನ್ನು ಅಳಿಸಿಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಬಿಜೆಪಿಯನ್ನು ಅವರು ಟೀಕಿಸಿದ್ದಾರೆ. ನೆಹರು ಸೆಂಟರ್ ಇಂಡಿಯಾವನ್ನು ಉದ್ಘಾಟಿಸಲು ನಿನ್ನೆ ಜವಾಹರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೆಹರು ಅವರನ್ನು ಅವಹೇಳನ ಮಾಡುವ, ವಿರೂಪಗೊಳಿಸುವ, ಕೀಳಾಗಿ ಕಾಣುವ ಮತ್ತು ಮಾನಹಾನಿ ಮಾಡುವ ವ್ಯವಸ್ಥಿತ ಪ್ರಯತ್ನವನ್ನು ಆರೋಪಿಸಿದ್ದಾರೆ.

ಇದರ ಏಕೈಕ ಉದ್ದೇಶವೆಂದರೆ ಅವರನ್ನು ವ್ಯಕ್ತಿತ್ವವಾಗಿ ಕುಗ್ಗಿಸುವುದು ಮಾತ್ರವಲ್ಲದೆ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ಪಾತ್ರ, ಅಭೂತ ಪೂರ್ವ ಸಮಸ್ಯೆಗಳಿಂದ ಸವಾಲು ಹಾಕಲ್ಪಟ್ಟ ಸ್ವತಂತ್ರ ರಾಷ್ಟ್ರದ ನಾಯಕರಾಗಿ ಅವರ ಆರಂಭಿಕ ದಶಕಗಳು, ಆದರೆ ಇತಿಹಾಸವನ್ನು ಪುನಃ ಬರೆಯುವ ಕಚ್ಚಾ ಮತ್ತು ಸ್ವಾರ್ಥಪರ ಪ್ರಯತ್ನದಲ್ಲಿ ಅವರ ಬಹುಮುಖಿ ಪರಂಪರೆಯನ್ನು ಕೆಡವುವುದು ಎಂದು ಅವರು ಹೇಳಿದರು. ಅಂತಹ ಪ್ರಯತ್ನಗಳನ್ನು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದು ಕರೆದರು.

ನೆಹರೂ ಅವರನ್ನು ಕೀಳಾಗಿ ಕಾಣುವ ಯೋಜನೆಯ ಹಿಂದಿರುವವರು ಸ್ವಾತಂತ್ರ್ಯ ಚಳವಳಿ, ಸಂವಿಧಾನ ರಚನೆಯಲ್ಲಿ ಯಾವುದೇ ಪಾತ್ರ ವಹಿಸದ, ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣವಾದ ವಾತಾವರಣವನ್ನು ಸೃಷ್ಟಿಸಿದ ಸಿದ್ಧಾಂತಕ್ಕೆ ಸೇರಿದವರು ಎಂದು ಅವರು ಹೇಳಿದ್ದಾರೆ. ನೆಹರೂ ಅವರು ಲಕ್ಷಾಂತರ ಭಾರತೀಯ ನಾಗರಿಕರಿಗೆ ಬೆಳಕಿನ ದೀಪವಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಅಂತಹ ಸ್ಮಾರಕ ವ್ಯಕ್ತಿಯ ಜೀವನ ಮತ್ತು ಕೆಲಸವನ್ನು ವಿಶ್ಲೇಷಿಸುವುದು, ಟೀಕಿಸುವುದು ಅನಿವಾರ್ಯವಾಗಿದೆ ಎಂದು ಗಾಂಧಿ ಹೇಳಿದರು ಅದು ನಿಜಕ್ಕೂ ಹಾಗೆಯೇ ಇರಬೇಕು ಎಂದು ಹೇಳಿದರು

# 3.5 ಲಕ್ಷ ಜನರ ಸ್ಥಳಾಂತರಕ್ಕೆ ಸೂಚನೆ

## ಆಸ್ಟ್ರೇಲಿಯಾದಲ್ಲಿ ಕಾಡ್ಗಿಚ್ಚು : ಸಾವಿರಾರು ಹೆಕ್ಟೇರ್ ಪ್ರದೇಶ ಬೆಂಕಿಗೆ ಆಹುತಿ



**ಸಿಡ್ನಿ:** ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನಲ್ಲಿ ಭೀಕರ ಕಾಡ್ಗಿಚ್ಚು ಸಂಭವಿಸಿದ್ದು, ಸಾವಿರಾರು ಹೆಕ್ಟರ್ ಪ್ರದೇಶವನ್ನು ಬೆಂಕಿ ಆವರಿಸಿಕೊಂಡಿದೆ. ನ್ಯೂ ಸೌತ್ ವೇಲ್ಸ್ ನಲ್ಲಿ ಹಬ್ಬಿರುವ ಈ ಕಾಡ್ಗಿಚ್ಚಿನಿಂದ ಸುತ್ತಮುತ್ತಲಿನಲ್ಲಿರುವ ಅತ್ಯಂತ ಜನನಿಬಿಡ ಪ್ರದೇಶದಲ್ಲಿ ವಾಸಿಸುತ್ತಿರುವ ಆತಂಕ ಪರಿಸ್ಥಿತಿ ಉಂಟಾಗಿದ್ದು, ಉನ್ನತ ಮಟ್ಟದ ಪ್ರದೇಶಕ್ಕೆ ಸ್ಥಳಾಂತರ ಎಚ್ಚರಿಕೆ ನೀಡಿದ್ದಾರೆ. ಸಿಡ್ನಿಯಿಂದ ಸುಮಾರು 45 ಕಿಲೋಮೀಟರ್ ಉತ್ತರಕ್ಕೆ ಇರುವ ಪ್ರದೇಶವಿದ್ದು, ನ್ಯೂ ವೇಲ್ಸ್‌ನಲ್ಲಿರುವ ಮಧ್ಯ ಕರಾವಳಿಯಲ್ಲಿ ಭಾಗದಲ್ಲಿನ ಫೆಗನ್ಸ್ ಬೇ ಮತ್ತು ವೋಯ್ ವೋಯ್ ಪ್ರದೇಶದಲ್ಲಿ ವಾಸಿಸುವ 350,000 ಕ್ಕೂ ಹೆಚ್ಚು ಜನರಿಗೆ ಎಚ್ಚರಿಕೆ ನೀಡಲಾಗಿದೆ.

- ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನಲ್ಲಿ ಇದ್ದಕ್ಕಿದಂತೆ ಹಬ್ಬಿದ ಕಾಡ್ಗಿಚ್ಚು
- ಸಾವಿರಾರು ಹೆಕ್ಟೆರ್ ಪ್ರದೇಶವನ್ನು ದಹಿಸಿದ ಕಾಡ್ಗಿಚ್ಚು, ಜನನಬಿಡ ಪ್ರದೇಶದ ಜನರಿಗೆ ಎಚ್ಚರಿಕೆ ನೀಡಿದ ಅಧಿಕಾರಿಗಳು
- 2019-20ರ ನಂತರ ಸಂಭವಿಸಿದ ಅತ್ಯಂತ ಭೀಕರ ಕಾಡ್ಗಿಚ್ಚಿಗೆ 16 ಮನೆಗಳು ಧ್ವಂಸ, ತಾಪಮಾನ ಏರಿಕೆ

ಸಾವಿರಾರು ಹೆಕ್ಟರ್ ಪ್ರದೇಶಕ್ಕೆ ಹಬ್ಬಿದ ಕಾಡ್ಗಿಚ್ಚು ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ವರದಿಗಳ ಪ್ರಕಾರ, ಈ ಕಾಡ್ಗಿಚ್ಚಿನಿಂದಾಗಿ ಸಾವಿರಾರು ಹೆಕ್ಟರ್ ಪ್ರದೇಶಕ್ಕೆ ಹಾನಿಯುಂಟಾಗಿದ್ದು, ಬೆಂಕಿಯ ಕೆನ್ನಾಲಿಗೆಯಿಂದಾಗಿ ಸುಮಾರು 16 ಮನೆಗಳು ನಾಶವಾಗಿವೆ.

ಆದರೆ ಈ ವರೆಗೂ ಯಾವುದೇ ಪ್ರಾಣಹಾನಿ ಕುರಿತು ವರದಿಯಾಗಿಲ್ಲ. ಇನ್ನು, ಈ ಕಾಡ್ಗಿಚ್ಚಿನಿಂದಾಗಿ ತಾಪಮಾನ ಹೆಚ್ಚಾಗಿದ್ದು, 42 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿರುವುದಾಗಿ ಹೇಳಿದೆ.

ಕಾಡ್ಗಿಚ್ಚಿನ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿರುವ ಓಖಫಾ ಗ್ರಾಮೀಣ ಅಗ್ನಿಶಾಮಕ ಸೇವೆಯ ಸಹಾಯಕ ಆಯುಕ್ತ ಲೀ ಪಿಲ್ಕಿಂಗ್ಟನ್ ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕ ದಳದವರು ಹರಸಾಹಸ ಪಟ್ಟರು.

ಆದರೆ ಸಿಬ್ಬಂದಿ ಬರುವ ಹೊತ್ತಿಗೆ, ಹಲವಾರು ಮನೆಗಳು ಈಗಾಗಲೇ ಬೆಂಕಿಗೆ ಆಹುತಿ ಯಾಗಿದ್ದವು. ಆದರೆ ಈ ಬೆಂಕಿ ಹತ್ತಿರದಲ್ಲಿನ ಇನ್ನೊಂದು ಪಟ್ಟಣಕ್ಕೆ ಹಬ್ಬದಂತೆ ಕೊನೆಗೂ ಬೆಂಕಿ ನಂದಿಸಿದ್ದೇವೆ ಎಂದು ತಿಳಿಸಿದ್ದಾರೆ.

ಈ ಕುರಿತು ಆತಂಕ ವ್ಯಕ್ತಪಡಿಸಿರುವ ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ತಮ್ಮ ಹೇಳಿಕೆಯಲ್ಲಿ ಈ ಸಮಯದಲ್ಲಿ ಎಲ್ಲರೂ ಒಬ್ಬರನ್ನೊಬ್ಬರು ಗಮನಿಸಿಕೊಳ್ಳುತ್ತಾ ಸುರಕ್ಷಿತವಾಗಿರಿ ಮತ್ತು ಅಧಿಕಾರಿಗಳ ಸೂಚನೆಯನ್ನು ಪಾಲಿಸಿ ಎಂದು ತಿಳಿಸಿದ್ದಾರೆ.

**ದೊಡ್ಡ ಕಾಡ್ಗಿಚ್ಚು**

**ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನಲ್ಲಿ ದೊಡ್ಡ ಕಾಡ್ಗಿಚ್ಚು ಸಂಭವಿಸಿದೆ. ಸಾವಿರಾರು ಹೆಕ್ಟೇರ್ ಪ್ರದೇಶ ಬೆಂಕಿಗೆ ಆಹುತಿಯಾಗಿದೆ. ಫೆಗನ್ಸ್ ಬೇ ಮತ್ತು ವೋಯ್ ವೋಯ್ ಪ್ರದೇಶದ 350,000 ಕ್ಕೂ ಹೆಚ್ಚು ಜನರಿಗೆ ಎಚ್ಚರಿಕೆ ನೀಡಲಾಗಿದೆ. ಸುಮಾರು 16 ಮನೆಗಳು ನಾಶವಾಗಿವೆ. ತಾಪಮಾನ 42 ಡಿಗ್ರಿ ಸೆಲ್ಸಿಯಸ್‌ಗೆ ಏರಿದೆ. ಪ್ರಧಾನಿ ಆಂಥೋನಿ ಅಲ್ಬನೀಸ್ ಸುರಕ್ಷತೆಗಾಗಿ ಸೂಚನೆ ಪಾಲಿಸಲು ಮನವಿ ಮಾಡಿದ್ದಾರೆ.**

ಈ ಕಾಡ್ಗಿಚ್ಚುಗಳು ಆಸ್ಟ್ರೇಲಿಯಾದಲ್ಲಿ ಕಾಡ್ಗಿಚ್ಚಿನ ಅಪಾಯದ ಬಗ್ಗೆ ಮತ್ತೆ ಚಿಂತನೆ ಮೂಡಿಸಿವೆ. ಕಳೆದ ಕೆಲವು ವರ್ಷಗಳಿಂದ ಬೆಂಕಿ ಪ್ರಕರಣಗಳು ಕಡಿಮೆ ಆಗಿದ್ದವು.

ಆದರೆ ಈ ಬಾರಿ ಪರಿಸ್ಥಿತಿ ಗಂಭೀರವಾಗಿದ್ದು, ಕೆಲವು ವರದಿಗಳ ಪ್ರಕಾರ, 2019 2020ರ ಬ್ಲ್ಯಾಕ್ ಸಮ್ಮರ್ ಕಾಡ್ಗಿಚ್ಚಿನಿಂದಾಗಿ ಟರ್ಕಿ ದೇಶದ ಗಾತ್ರದಷ್ಟು ಭೂಪ್ರದೇಶ ಪ್ರದೇಶವನ್ನು ನಾಶಮಾಡಿದ್ದರಂತಯೇ ಮಟ್ಟಿಗಿನ ಪ್ರಮಾಣದಲ್ಲಿ ಈ ಬಾರಿಯೂ ಕಾಡ್ಗಿಚ್ಚು ಉಂಟಾಗಿದೆ ಎಂದು ತಿಳಿಸಿವೆ.

## ಮಿನಿ ನ್ಯೂಸ್

### ಅಂಬೇಡ್ಕರ್ ಪುಣ್ಯತಿಥಿ ಪ್ರಧಾನಿ ಮೋದಿ ನಮನ



**ನವದೆಹಲಿ:** ಭಾರತದ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಪುಣ್ಯತಿಥಿಯಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗೌರವ ಸಲ್ಲಿಸಿದರು. ಮಹಾಪರಿನಿರ್ವಾಣ ದಿವಸದಂದು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಸ್ಮರಿಸಲಾಗುತ್ತಿದೆ. ಅವರ ದಾರ್ಶನಿಕ ನಾಯಕತ್ವ, ನ್ಯಾಯ, ಸಮಾನತೆ ಮತ್ತು ಸಾಂವಿಧಾನಿಕತೆಗೆ ಅಚಲವಾದ ಬದ್ಧತೆ ನಮ್ಮ ರಾಷ್ಟ್ರೀಯ ಪ್ರಯಾಣಕ್ಕೆ ಮಾರ್ಗದರ್ಶನ ನೀಡುತ್ತಲೇ ಇದೆ ಎಂದು ಮೋದಿ ಎಕ್ಸ್ ಮಾಡಿದ್ದಾರೆ.

ಮಾನವ ಘನತೆಯನ್ನು ಎತ್ತಿಹಿಡಿಯಲು ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಲಪಡಿಸಲು ಅಂಬೇಡ್ಕರ್ ಪೀಳಿಗೆಗೆ ಸ್ಫೂರ್ತಿ ನೀಡಿದರು ಎಂದು ಪ್ರಧಾನಿ ಹೇಳಿದರು. ವಿಕಸಿತ್ ಭಾರತವನ್ನು ನಿರ್ಮಿಸುವತ್ತ ನಾವು ಕೆಲಸ ಮಾಡುತ್ತಿರುವಾಗ ಅವರ ಆದರ್ಶಗಳು ನಮ್ಮ ಹಾದಿಯನ್ನು ಬೆಳಗಿಸುತ್ತಿರಲಿ ಎಂದು ಮೋದಿ ಹೇಳಿದರು. ಸಂಸತ್ತು ಭವನದ ಆವರಣದಲ್ಲಿರುವ ಪ್ರೇರಣಾ ಸ್ಥಳದಲ್ಲಿರುವ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವಲ್ಲಿ ಪ್ರಧಾನಿಯೂ ಸಹ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರೊಂದಿಗೆ ಸೇರಿಕೊಂಡರು.

### ಭಾರತಕ್ಕೆ ಮುಂದಿನ ವರ್ಷದಿಂದ ಎಲ್‌ಎಂಜಿ ಪೂರೈಕೆ ಶುರು


**ಜೆರುಸಲೇಮ್:** ಜನವರಿಯಿಂದ ಭಾರತಕ್ಕೆ ಎಲ್‌ಎಂಜಿ ಪೂರೈಕೆ ಆರಂಭಿಸಲಾಗುವುದು ಎಂದು ಇಸ್ರೇಲ್‌ನ ಪ್ರಮುಖ ರಕ್ಷಣಾ ಸಾಮಗ್ರಿ ತಯಾರಕ ಸಂಸ್ಥೆಯೊಂದು ಹೇಳಿದೆ. 1.70 ಲಕ್ಷ ಹೊಸ ತಲೆಮಾರಿನ ರೈಫಲ್‌ಗಳ ಪೂರೈಕೆಗೆ ಸಂಬಂಧಿಸಿದ ಒಪ್ಪಂದವು ಅಂತಿಮ ಹಂತದಲ್ಲಿದೆ. ಇದು, ಪೂರ್ಣಗೊಂಡ ಬಳಿಕ ಮೊದಲ ಹಂತದಲ್ಲಿ 40 ಸಾವಿರ ಎಲ್ ಎಂಜಿ ಪೂರೈಕೆ ಮಾಡಲಾಗುವುದು ಎಂದು ಇಸ್ರೇಲ್ ವೆಪನ್ಸ್ ಇಂಡಸ್ಟ್ರೀಜ್ ಸಿಇಒ ಶುಕಿ ಸ್ವಾರ್ಟ್ಸ್ ಹೇಳಿದ್ದಾರೆ. ಮುಂದಿನ ವರ್ಷದಿಂದ ಆರಂಭವಾಗಿ ಮುಂದಿನ ಐದು ವರ್ಷಗಳವರೆಗೆ ಈ ರೈಫಲ್‌ಗಳ ಪೂರೈಕೆ ಪ್ರಕ್ರಿಯೆ ನಡೆಯುವುದು. ವರ್ಷಾರಂಭಕ್ಕೆ ಮೊದಲ ಹಂತದ ಪೂರೈಕೆಗೆ ಚಾಲನೆ ನೀಡಲಾಗುವುದು ಎಂದು ಹೇಳಿದ್ದಾರೆ. ಭಾರತಕ್ಕೆ ರಕ್ಷಣಾ ಸಾಮಗ್ರಿಗಳ ಪೂರೈಕೆಗೆ ಸಂಬಂಧಿಸಿ ಎಲ್‌ಎಂಜಿ ಪೂರೈಕೆ ಸೇರಿ ಮೂರು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ. ಸಿಕ್ಯೂಬಿ ರೈಫಲ್, ಅಬೆಲ್ ತಂತ್ರಜ್ಞಾನ ಆಧಾರಿತ ಶಸ್ತ್ರಾಸ್ತ್ರ ಪೂರೈಕೆ ಇತರ ಒಪ್ಪಂದಗಳಾಗಿದ್ದು, ಇವುಗಳ ಕುರಿತು ಇನ್ನೂ ಮಾತುಕತೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಎಲ್‌ಎಂಜಿಗಳ ಪರೀಕ್ಷಾರ್ಥ ಪ್ರಯೋಗಗಳು ಪೂರ್ಣಗೊಂಡಿದ್ದು, ಸರ್ಕಾರದಿಂದಲೂ ಪರಿಶೀಲನೆಯಾಗಿದೆ. ಇವುಗಳ ತಯಾರಿಕೆಗೆ ಪರವಾನಗಿ ಲಭಿಸಿದೆ. ಸ್ಥಳೀಯವಾಗಿ ಉತ್ಪಾದನೆ ಆರಂಭಿಸುವ ಮೂಲಕ ಮೇಕ್ ಇನ್ ಇಂಡಿಯಾ ಕಾರ್ಯಕ್ರಮಕ್ಕೆ ಬೆಂಬಲಿಸಿದ ಮೊದಲ ಕಂಪನಿ ನಮ್ಮದು ಎಂದೂ ಅವರು ಹೇಳಿದ್ದಾರೆ.

### ಜನ್ಮದತ್ತ ಪೌರತ್ವ : ವಿಚಾರಣೆಗೆ ಸುಪ್ರೀಂ ಕೋರ್ಟ್ ಅಸ್ತು

**ವಾಷಿಂಗ್ಟನ್:** ಜನ್ಮದತ್ತ ಪೌರತ್ವಕ್ಕೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೊರಡಿಸಿರುವ ಆದೇಶದ ಸಾಂವಿಧಾನಿಕ ಸಿಂಧುತ್ವ ಕುರಿತು ವಿಚಾರಣೆ ನಡೆಸಲು ಇಲ್ಲಿನ ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ವಲಸಿಗರಿಗೆ ಜನಿಸುವ ಮಕ್ಕಳು ಅಮೆರಿಕದ ಪ್ರಜೆಗಳಲ್ಲ, ಹೀಗಾಗಿ ಅವರಿಗೆ ಹುಟ್ಟಿನಿಂದಲೇ ಸಿಗುತ್ತಿದ್ದ ಪೌರತ್ವದ ಹಕ್ಕನ್ನು ರದ್ದುಗೊಳಿಸಬೇಕು ಎಂಬ ಆದೇಶವನ್ನು ಟ್ರಂಪ್ ಹೊರಡಿಸಿದ್ದರು. ಅಮೆರಿಕ ಸಂವಿಧಾನದ 14ನೇ ತಿದ್ದುಪಡಿಯು ಅಮೆರಿಕದಲ್ಲಿ ಜನಿಸುವ ಪ್ರತಿಯೊಬ್ಬರಿಗೂ ಜನ್ಮದತ್ತ ಪೌರತ್ವದ ಖಾತರಿ ನೀಡಿದೆ.

ಹೀಗಿದ್ದರೂ ಜನ್ಮದತ್ತ ಪೌರತ್ವಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರುವುದು ಅಸಂವಿಧಾನಿಕ ನಡೆ ಎಂದು ನಿರ್ಧರಿಸಿ. ಕೆಳ ಹಂತದ ನ್ಯಾಯಾಲಯವೊಂದು ಟ್ರಂಪ್ ಅವರ ಆದೇಶವನ್ನು ರದ್ದುಗೊಳಿಸಿತ್ತು. ಕೆಳ ಹಂತದ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ, ಟ್ರಂಪ್ ಸುಪ್ರೀಂ ಮೆಟ್ಟಿಲೇರಿದ್ದರು. ಇದೀಗ ಅವರ ಅರ್ಜಿಯನ್ನು ಆಲಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಪು ಜೂನ್ ವೇಳೆಗೆ ಹೊರಬೀಳುವ ನಿರೀಕ್ಷೆ ಇದೆ.



## ಬಾಬರಿ ಶೈಲಿ ಮಸೀದಿ ನಿರ್ಮಾಣ : ಬಿಗುವಿನ ವಾತಾವರಣ




**ಕೋಲ್ಕತ್ತಾ:** ಬಾಬರಿ ಶೈಲಿಯ ಮಸೀದಿ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲು ಸಜ್ಜಾಗಿರುವ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಬೆಲ್ಡಂಗಾದ ರೆಜಿನಗರ ಪ್ರದೇಶದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಬಾಬರಿ ಶೈಲಿಯ ಮಸೀದಿಗೆ ಶಿಲಾನ್ಯಾಸ ನೆರವೇರಿಸಲು ಟಿಎಂಸಿ ಉಚ್ಚಾಟಿತ ಶಾಸಕ ಹುಮಾಯೂನ್ ಕಬೀರ್ ಸಜ್ಜಾಗಿದ್ದಾರೆ. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸಗೊಂಡ ವಾರ್ಷಿಕೋತ್ಸವ ದಿನವಾದ ಡಿಸೆಂಬರ್ 6ರಂದು ಕಾರ್ಯಕ್ರಮ ನಡೆಯುತ್ತಿದೆ. ಶಿಲಾನ್ಯಾಸ ಸಮಾರಂಭದ ಹಿನ್ನೆಲೆ ಬೆಲ್ಡಂಗಾದ ರೆಜಿನಗರ ಪ್ರದೇಶವನ್ನ ಸೂಕ್ಷ್ಮ ಪ್ರದೇಶವೆಂದು ಘೋಷಿಸಲಾಗಿದ್ದು,

**ಪ್ರಚೋದನಕಾರಿ ಹೇಳಿಕೆ ನೀಡದಂತೆ ಮನವಿ**

ಪೊಲೀಸ್, ಮೀಸಲು ವಾಯುಪಡೆ, ಗಡಿ ಭದ್ರತಾ ಪಡೆಗಳನ್ನ ಭದ್ರತೆಗೆ ನಿಯೋಜಿಸಲಾಗಿದೆ. ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಟಿಎಂಸಿ ಉಚ್ಚಾಟಿತ ಶಾಸಕ ಹುಮಾಯೂನ್ ಕಬೀರ್, ಬಾಬರಿ ಮಸೀದಿ ಧ್ವಂಸ ವಾರ್ಷಿಕೋತ್ಸವ ದಿನದಂದು ಅದೇ ಮಾದರಿಯ ಮಸೀದಿಗೆ ಅಡಿಪಾಯ ಹಾಕುವುದಾಗಿ ಹೇಳಿದ್ದರು. ಅದರಂತೆ ಇಂದು ಸಾಂಕೇತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಹೀಗಾಗಿ ಪ್ರದೇಶದಲ್ಲಿ ಬಿಗಿ ಭದ್ರತೆ ನಿಯೋಜಿಸಲಾಗಿದ್ದು, ಭದ್ರತಾಪಡೆಗಳು ಈಗಾಗಲೇ ಗಸ್ತು ಪ್ರಾರಂಭಿಸಿವೆ. ಈ ಕಾರ್ಯಕ್ರಮಕ್ಕೆ ಮೂರು ಲಕ್ಷ ಜನ ಸೇರುವ ನಿರೀಕ್ಷೆ ಇದೆ ಎನ್ನಲಾಗಿದೆ. ಮೂಲಗಳ ಪ್ರಕಾರ, ವಿವಿಧ ರಾಜ್ಯಗಳ ಮುಸ್ಲಿಂ ಧರ್ಮ ಗುರುಗಳು, ಸ್ವಯಂ ಸೇವಕರು ಸೇರಿ 3 ಲಕ್ಷ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಕಬೀರ್ ಹೇಳಿದ್ದಾರೆ.

ಸೌದಿ ಅರೇಬಿಯಾದಿಂದ ಇಬ್ಬರು ಖಾಜಿಗಳು ಆಗಮಿಸಲಿದ್ದಾರೆ. ಇದರ ಜೊತೆಗೆ ಆತಿಥ್ಯಕ್ಕಾಗಿ ಶಾಹಿ ಬಿರಿಯಾನಿ ತಯಾರಿಸಲಾಗುತಿದ್ದು, ಅದಕ್ಕಾಗಿ 7 ಕ್ಯಾಟರಿಂಗ್‌ಗಳಿಗೆ ನಿರ್ವಹಣೆ ವಹಿಸಲಾಗಿದೆ. ಅತಿಥಿಗಳಿಗಾಗಿ ಸುಮಾರು 40,000 ಪ್ಯಾಕೆಟ್ ಬಿರಿಯಾನಿ, ಸ್ಥಳೀಯ ನಿವಾಸಿಗಳಿಗೆ 20,000 ಪ್ಯಾಕೆಟ್ ಬಿರಿಯಾನಿ ಸಿದ್ದಪಡಿಸಲಾಗುತ್ತಿದೆ. ಅದಕ್ಕಾಗಿ 30 ಲಕ್ಷ ರೂ. ಖರ್ಚು ಮಾಡಲಾಗಿದೆ. ಇನ್ನೂ ಇಡೀ ಕಾರ್ಯಕ್ರಮದ ವೆಚ್ಚ 60 ರಿಂದ 70 ಲಕ್ಷ ರೂ. ತಲುಪಬಹುದು ಎಂದು ನಿರೀಕ್ಷಿಸಲಾಗಿದೆ.

ಕಾರ್ಯಕ್ರಮಕ್ಕೆ ಈಗಾಗಲೇ ಸಕಲ ತಯಾರಿ ನಡೆದಿದ್ದರೂ, ಸ್ಥಳೀಯ ಆಡಳಿತದಿಂದ ಇನ್ನೂ ಯಾವುದೇ ಅನುಮತಿ ಸಿಕ್ಕಿಲ್ಲ ಎನ್ನಲಾಗಿದೆ. ಭದ್ರತಾ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಲಾಗಿದೆ. ಈ ನಡುವೆ ಎಕ್ಸ್ ಪೋಸ್ಟ್ ಮೂಲಕ ಪ್ರತಿಕ್ರಿಯೆ ಕೊಟ್ಟಿರುವ ರಾಜ್ಯಪಾಲ ಸಿ.ವಿ. ಆನಂದ್ ಬೋಸ್, ಶಾಂತಿ ಕಾಪಾಡಿಕೊಳ್ಳುವಂತೆ ಹಾಗೂ ಯಾವುದೇ ರೀತಿ ಪ್ರಚೋದನಕಾರಿ ಹೇಳಿಕೆ ನೀಡದಂತೆ ಮನವಿ ಮಾಡಿದ್ದಾರೆ.

## 31.25 ಗಿಗಾವಾಟ್ ಹಸಿರು ಇಂಧನ ಉತ್ಪಾದನೆ

**ಪುರಿ:** ಪ್ರಸಕ್ತ ಹಣಕಾಸು ವರ್ಷದಲ್ಲಿ 31.25 ಗಿಗಾವಾಟ್ ಹಸಿರು ಇಂಧನವನ್ನು ದೇಶದಲ್ಲಿ ಉತ್ಪಾದಿಸಲಾಗಿದ್ದು, ಇದರಲ್ಲಿ ಸೋಲಾರ್ ವಿದ್ಯುತ್‌ನ ಪಾಲು 24.28 ಗಿಗಾವಾಟ್ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಶನಿವಾರ ತಿಳಿಸಿದರು.

ಒಡಿಶಾದಲ್ಲಿ 1.5 ಲಕ್ಷ ಚಾವಣಿ ಸೋಲಾರ್ ಯುಎಲ್‌ಎ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ಜಾಗತಿಕ ಇಂಧನ ನಾಯಕರ ಶೃಂಗಸಭೆ-2025'ರಲ್ಲಿ ಘೋಷಿಸಿದ ಸಚಿವರು, ಇದರಿಂದ ರಾಜ್ಯದ 7 ಲಕ್ಷದಿಂದ 8 ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಒಂದು ಟೆರಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಸುಮಾರು 70 ವರ್ಷಗಳನ್ನು ತೆಗೆದುಕೊಂಡರೆ (2022), ನಂತರದ ಎರಡು ವರ್ಷಗಳಲ್ಲಿ (2024) ಎರಡು ಟೆರಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ಜಗತ್ತು ಗಳಿಸಿದೆ ಎಂದರು.

ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಶೃಂಗಸಭೆಯನ್ನು ಉದ್ಘಾಟಿಸಿದರು. ವಿವಿಧ ರಾಜ್ಯಗಳ ಇಂಧನ ಸಚಿವರು ಭಾಗವಹಿಸಿದ್ದರು.




**ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಹೆಚ್ಚಳಕ್ಕೆ ಭಾರತವೇ ಪ್ರಮುಖ ಚಾಲಕ ಶಕ್ತಿ ಆಗಿದೆ. ಕಳೆದ 11 ವರ್ಷದ ಅವಧಿಯಲ್ಲಿ ದೇಶದ ಸೌರ ವಿದ್ಯುತ್‌ನ ಸಾಮರ್ಥ್ಯ 2.8 ಗಿಗಾವಾಟ್ ನಿಂದ 130 ಗಿಗಾವಾಟ್‌ಗೆ ಹೆಚ್ಚಿದ್ದು, ಇದು ಶೇ. 4,500 ಪಟ್ಟು ಏರಿಕೆಯಾಗಿದೆ. 2022ರಿಂದ 2024ರ ನಡುವೆ ಈ ಬೆಳವಣಿಗೆಯಾಗಿದೆ. ಜಾಗತಿಕ ಸೌರ ವಿದ್ಯುತ್ ವಲಯಕ್ಕೆ ದೇಶವು 46 ಗಿಗಾವಾಟ್ ಕೊಡುಗೆ ನೀಡಿದ್ದು, ಮೂರನೇ ಬೃಹತ್ ಕೊಡುಗೆಯಾಗಿದೆ.**

**- ಪ್ರಲ್ಹಾದ್ ಜೋಶಿ, ಇಂಧನ ಸಚಿವ**

## ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗುತ್ತವೆ, ಬುಡಕಟ್ಟು ಜನಾಂಗದವರು ಒಗ್ಗಟ್ಟಾಗಿರಿ

**ರಾಂಚಿ:** ದೇಶಾದ್ಯಂತ ಬುಡಕಟ್ಟು ಸಮುದಾಯಗಳು ಒಗ್ಗಟ್ಟಿನಿಂದ ನಿಲ್ಲಬೇಕೆಂದು ಜಾರ್ಖಂಡ್ ಸಿಎಂ ಹೇಮಂತ್ ಸೊರೆನ್ ಒತ್ತಾಯಿಸಿದರು, ಇಲ್ಲದಿದ್ದರೆ ಅವು ಅಳಿವಿನಂಚಿಗೆ ಹೋಗಬಹುದು ಎಂದು ಎಚ್ಚರಿಸಿದರು. ತಮ್ಮ ಮಾತನ್ನು ಸಮರ್ಥಿಸಿಕೊಳ್ಳಲು ಅವರು ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿನ್ನುತ್ತವೆ ಎಂಬ ನಾಣ್ಣುಡಿಯನ್ನು ಬಳಸಿದರು.

ಜನಗಣತಿಯಲ್ಲಿ ಬುಡಕಟ್ಟು ಸಮುದಾಯಕ್ಕೆ ಎಂದಿಗೂ ಸರಿಯಾದ ಸ್ಥಾನ ಸಿಗುವುದಿಲ್ಲ ಎಂದು ಪ್ರತಿಪಾದಿಸಿದ ಸೊರೆನ್, ಸವಾಲುಗಳು ಹೆಚ್ಚುತ್ತಲೇ ಇರುವುದರಿಂದ ಅವರ ಹಕ್ಕುಗಳಿಗಾಗಿ ಹೋರಾಡುವ ಸಮಯ ಬಂದಿದೆ ಎಂದು ಹೇಳಿದರು. ಜನರು ನನ್ನನ್ನು ಜಾರ್ಖಂಡ್ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದಾರೆ. ಆದರೆ ನಾವು ಮುಂದುವರಿಯುತ್ತಿದ್ದಂತೆ, ಸವಾಲುಗಳು ಹೆಚ್ಚುತ್ತಲೇ ಇರುತ್ತವೆ ಎಂದು ನನಗೆ ತಿಳಿದಿದೆ. ದೊಡ್ಡ ಮೀನು ಯಾವಾಗಲೂ ಸಣ್ಣ ಮೀನುಗಳನ್ನು ತಿನ್ನಲು ಪ್ರಯತ್ನಿಸುತ್ತದೆ ಎಂದು ನೀವು ನೋಡಿರಬೇಕು ಎಂದು ಸೊರೆನ್ ಅವರು ದೇಶದ ವಿವಿಧ ಭಾಗಗಳಿಂದ ಇಲ್ಲಿ ನೆರೆದಿದ್ದ ಬುಡಕಟ್ಟು ಪ್ರತಿನಿಧಿಗಳನ್ನು ಉದ್ದೇಶಿಸಿ ಹೇಳಿದರು.



ಸಮುದಾಯವು ಒಂದಾಗದ ಹೊರತು, ಅವರು ವ್ಯವಸ್ಥಿತ ಅಂಚಿನಲ್ಲಿರುವಿಕೆ ಮತ್ತು ನಿರ್ಲಕ್ಷ್ಯವನ್ನು ಎದುರಿಸಬಹುದು ಎಂದು ಜೆಎಂಎಂ ಅಧ್ಯಕ್ಷರು ಎಚ್ಚರಿಸಿದರು. ಬಿರ್ಸಾ ಮುಂಡಾ, ಸಿಡೋ-ಕನ್ಹು, ತಿಲ್ಕಾ ಮಾಂಝಿ, ದಿಶೋಮ್ ಗುರು ಶಿಬು ಸೊರೆನ್ ಅವರಂತಹ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು, ಕ್ರಾಂತಿಕಾರಿಗಳ ಪರಂಪರೆಯನ್ನು ನೆನಪಿಸಿಕೊಳ್ಳುತ್ತಾ, ಜಾರ್ಖಂಡ್ ಕೇವಲ ಒಂದು ರಾಜ್ಯವಲ್ಲ, ಬದಲಾಗಿ ಇಡೀ ರಾಷ್ಟ್ರದ ಬುಡಕಟ್ಟು ಸಮಾಜವನ್ನು ಮುನ್ನಡೆಸುವ ಭೂಮಿ ತಾಯಿಯ ಭೂಮಿ ಎಂದು ಹೇಳಿದರು.

ಬುಡಕಟ್ಟು ಸಮುದಾಯವು ತನ್ನ ಹಕ್ಕುಗಳನ್ನು ಪ್ರತಿಪಾದಿಸಬೇಕು, ತನ್ನ ಭೂಮಿಗಾಗಿ ಹೋರಾಡಬೇಕು, ತನ್ನ ಸಾಂಸ್ಕೃತಿಕ ಗುರುತನ್ನು ರಕ್ಷಿಸಬೇಕು ಮತ್ತು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಹೇಳಿದರು. ಬುಡಕಟ್ಟು ಜನರು ಸಾಮೂಹಿಕ ಏಕತೆಯ ಮೂಲಕ ಮಾತ್ರ ಪ್ರಗತಿ ಸಾಧಿಸಬಹುದು ಮತ್ತು ಅವರ ಹೋರಾಟಗಳು ಇನ್ನು ಮುಂದೆ ಪ್ರತ್ಯೇಕವಾಗಿ ಅಥವಾ ಕೇಳದೆ ಉಳಿಯಬಾರದು ಎಂದು ಅವರು ಒತ್ತಿ ಹೇಳಿದರು. ದೇಶದ ಬುಡಕಟ್ಟು ಜನರು ಒಂದಾಗಬೇಕು ಮತ್ತು ಒಟ್ಟಾಗಿ ಹೋರಾಡಬೇಕು, ಇದರಿಂದಾಗಿ ನಮ್ಮ ಸಮಸ್ಯೆಗಳು ಕೇವಲ ಧ್ವನಿಗಳಾಗಿ ಉಳಿಯಬಾರದು, ಆದರೆ ರಾಷ್ಟ್ರೀಯ ರಾಜಕೀಯದ ಕಾರ್ಯಸೂಚಿಯಾಗಬೇಕು ಎಂದು ಅವರು ಹೇಳಿದರು, ಬುಡಕಟ್ಟು ಸಮಾಜವು ತನ್ನನ್ನು ಹಂಚಿಕೊಂಡ ಭೂತಕಾಲ, ಸಮಾನವಾಗಿ ಹಂಚಿಕೊಂಡ ಭವಿಷ್ಯವನ್ನು ಹೊಂದಿರುವ ಸಮುದಾಯವೆಂದು ಗುರುತಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಬುಡಕಟ್ಟು ಸಮುದಾಯವು ತನ್ನ ನಾಗರಿಕತೆಯ ವ್ಯಾಪಕವಾದ ಲಿಖಿತ ದಾಖಲೆಯನ್ನು ಉತ್ಪಾದಿಸಲು ಸಾಧ್ಯವಾಗಿಲ್ಲ ಎಂದು ಅವರು ವಿಷಾದಿಸಿದರು. ನಾವು ಪ್ರಕೃತಿಯ ಆರಾಧಕರು; ನಮ್ಮ ದಾಖಲೆ ಪ್ರಕೃತಿಯೇ ಆಗಿದೆ ಎಂದು ಅವರು ನಲ್ಲಿ ಪೋಸ್ಟ್ ಮಾಡಿದ್ದಾರೆ, ಜಾಗತಿಕ ಪರಿಸರ ಸಮತೋಲನಕ್ಕೆ ಪ್ರಕೃತಿಯಲ್ಲಿ ಬೇರೂರಿರುವ ಸ್ಥಳೀಯ ಜೀವನಶೈಲಿಗಳು ನಿರ್ಣಾಯಕವಾಗಿವೆ ಎಂಬುದನ್ನು ಜಗತ್ತು ಗುರುತಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಸೆಕ್ಷನ್ 144 ಬಳಕೆಗೆ ಅಸಮಾಧಾನ: ಅಹಮದಾಬಾದ್ ಪೊಲೀಸರ ಆದೇಶ ರದ್ದುಪಡಿಸಿದ ಹೈಕೋರ್ಟ್



**ಅಹಮದಾಬಾದ್:** ಅಹಮದಾಬಾದ್ ಪೊಲೀಸ್ ಕಮಿಷನರ್ ಮೇಲಿಂದ ಮೇಲೆ ಸಿಆರ್‌ಪಿಸಿ ಸೆಕ್ಷನ್ 144, ಗುಜರಾತ್ ಪೊಲೀಸ್ ಕಾಯ್ದೆಯ ಸೆಕ್ಷನ್ 37 ಜಾರಿಗೊಳಿಸಿ ಹೊರಡಿಸಿದ ಅಧಿಸೂಚನೆಗಳನ್ನು ರದ್ದುಗೊಳಿಸಿ ಗುಜರಾತ್ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಈ ಸೆಕ್ಷನ್ ಗಳು, ಪೊಲೀಸರ ಅನುಮತಿ ಇಲ್ಲದೆಯೇ ನಾಲ್ವರು ಅಥವಾ ಅದಕ್ಕಿಂತ ಹೆಚ್ಚು ಜನರು ಒಂದೆಡೆ ಸೇರುವುದನ್ನು ನಿಷೇಧಿಸುತ್ತದೆ. ನಾಗರಿಕ ಸಂಘಟನೆಗಳು ಸರ್ಕಾರದ ನಿರ್ಧಾರಗಳನ್ನು ವಿರೋಧಿಸಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲು ಮುಂದಾದ ವೇಳೆ, ಈ ಸೆಕ್ಷನ್‌ಗಳನ್ನು ಜಾರಿಗೊಳಿಸುವ ಮೂಲಕ ಅನುಮತಿ ನಿರಾಕರಿಸುವ ಏಕೈಕ ವಿಧಾನವನ್ನು ಅಹಮದಾಬಾದ್ ಪೊಲೀಸರು ಬಳಸುತ್ತಿದ್ದಾರೆ ಎಂದು ನ್ಯಾಯಮೂರ್ತಿ ಎಂ.ಆರ್.ಮೆಂಗ್ಡೆ ಅವರು ಡಿಸೆಂಬರ್ 4ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ. ಈ ಸೆಕ್ಷನ್ ಅಡಿ ಅಹಮದಾಬಾದ್ ಪೊಲೀಸ್ ಹೊರಡಿಸಿರುವ ಎಲ್ಲಾ ಅಧಿಸೂಚನೆಗಳನ್ನು ರದ್ದು ಮಾಡಿರುವ ನ್ಯಾಯಮೂರ್ತಿ ಮೆಂಗ್ಡೆ, ಇಂತಹ ಕ್ರಮ ಕೈಗೊಳ್ಳುವ ವೇಳೆ ಪೊಲೀಸರು ನಿಯಮಗಳ ಪಾಲನೆ ಮಾಡಿಲ್ಲ ಎಂದು ಹೇಳಿದ್ದಾರೆ.


ಐಐಎಂ-ಅಹಮದಾಬಾದ್‌ನ ಪ್ರಾಧ್ಯಾಪಕರಾದ ನವದೀಪ್ ಮಾಥೋರ್, ಅಂಕುರ್ ಸರಿನ್, ಅಹಮದಾಬಾದ್ ವಿಶ್ವವಿದ್ಯಾಲಯ ಪ್ರಾಧ್ಯಾಪಕ ರಾಘವನ್ ರಾಜನ್, ಉದ್ಯಮಿಗಳಾದ ಅರ್ಚನಾ ಶಾ, ಸಂಜೀವ್ ಶಾ, ಇತರರು ಈ ಕುರಿತು ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರು ಈ ಹಿಂದೆ, ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟಿಸಲು ಉದ್ದೇಶಿಸಿದ್ದರು. ಅದಕ್ಕೆ ಅಹಮದಾಬಾದ್ ಪೊಲೀಸರು ಅನುಮತಿ ನೀಡಿರಲಿಲ್ಲ.

## ಅಯೋಧ್ಯೆ : ಮಸೀದಿ ನಿರ್ಮಾಣಕ್ಕೆ ಸಿಗದ ಚಾಲನೆ

**ಲಖನೌ:** ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯ ಬೆಲ್ಡಾಂಗದಲ್ಲಿ ಬಾಬರಿ ಮಸೀದಿ ಶೈಲಿಯ ಮಸೀದಿ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸುವ ಮೂಲಕ, ಟಿಎಂಸಿಯಿಂದ ಅಮಾನತುಗೊಂಡಿರುವ ಶಾಸಕ ಹುಮಾಯೂನ್ ಕಬೀರ್ ದೇಶದ ಗಮನ ಸೆಳೆದಿದ್ದಾರೆ. ಆದರೆ, ರಾಮ ಜನ್ಮಭೂಮಿ-ಬಾಬರಿ ಮಸೀದಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾಗಿ ಆರು ವರ್ಷಗಳು ಗತಿಸಿದ್ದರೂ, ಅಯೋಧ್ಯೆ ಬಳಿಯ ಧನ್ನಿಪುರದಲ್ಲಿ ನೂತನ ಮಸೀದಿ ನಿರ್ಮಾಣಕ್ಕೆ ಚಾಲನೆಯೇ ದೊರೆತಿಲ್ಲ.

ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಅಯೋಧ್ಯೆಯಿಂದ 25 ಕಿ.ಮೀ. ದೂರದಲ್ಲಿರುವ ಧನ್ನಿಪುರ ಬಳಿ ಮಸೀದಿ ನಿರ್ಮಾಣಕ್ಕೆ ಸುನ್ನಿ ವಕ್ಫ್ ಮಂಡಳಿಗೆ ಐದು ಎಕರೆ ಹಂಚಿಕೆ ಮಾಡಲಾಗಿದೆ.

ಮಸೀದಿ ನಿರ್ಮಾಣಕ್ಕೆ ಇಂಡೊ-ಇಸ್ಲಾಮಿಕ್ ಫೌಂಡೇಷನ್ ಟ್ರಸ್ಟ್ ಕೂಡ ರಚನೆಯಾಗಿದೆ.



ಮಸೀದಿ ಸಂಕೀರ್ಣದಲ್ಲಿ ವಸ್ತುಸಂಗ್ರಹಾಲಯ, ಸಮುದಾಯ ಅಡುಗೆಮನೆ ನಿರ್ಮಿಸಲಾಗುವುದು ಎಂದೂ ಟ್ರಸ್ಟ್ ಘೋಷಿಸಿತ್ತು.

**ಮುಸ್ಲಿಮರ ನಿರುತ್ಸಾಹ:** ಧನ್ನಿಪುರದಲ್ಲಿ ನೂತನ ಮಸೀದಿ ನಿರ್ಮಾಣಕ್ಕೆ ಅಯೋಧ್ಯೆಯ ಮುಸ್ಲಿಮರು ಅಷ್ಟೊಂದು ಉತ್ಸಾಹ ತೋರುತ್ತಿಲ್ಲ ಎನ್ನಲಾಗಿದೆ. ಧನ್ನಿಪುರದಲ್ಲಿ ಮಸೀದಿ ನಿರ್ಮಾಣ ವಿಳಂಬವಾಗುತ್ತಿರುವ ಬಗ್ಗೆ ಇಲ್ಲಿನ ಮುಸ್ಲಿಮರು ತಲೆಕೆಡಿಸಿಕೊಂಡಿಲ್ಲ ಎಂದು ರಾಮ ಜನ್ಮಭೂಮಿ-ಬಾಬರಿ ಮಸೀದಿ ಪ್ರಕರಣದ ಮೂಲ ದಾವೆದಾರರಾದ ಇಕ್ಬಾಲ್ ಅನ್ಸಾರಿ ಹೇಳುತ್ತಾರೆ.

ಧನ್ನಿಪುರದಲ್ಲಿ ಮಸೀದಿ ನಿರ್ಮಿಸುವ ಅಗತ್ಯವೇ ಇಲ್ಲ. ಎಲ್ಲಾ ಧರ್ಮದವರೂ ಪ್ರಾರ್ಥನೆ, ಪೂಜೆ ಮಾಡುವ ಸ್ಥಳಗಳು ಅಯೋಧ್ಯೆಯಲ್ಲಿಯೇ ಇವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಧನ್ನಿಪುರ ಪಟ್ಟಣ ಅಯೋಧ್ಯೆಯಿಂದ ದೂರ ಇದೆ. ಒಂದು ವೇಳೆ ಅಲ್ಲಿ ಮಸೀದಿ ನಿರ್ಮಾಣಗೊಂಡರೂ ಅಯೋಧ್ಯೆಯ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಲು ಅಲ್ಲಿಗೆ ಹೋಗುವ ಸಾಧ್ಯತೆ ಕಡಿಮೆ ಎಂದು ಅಯೋಧ್ಯಾ ವಕ್ಫ್ ಸಮಿತಿಯ ಪದಾಧಿಕಾರಿಯೊಬ್ಬರು ಹೇಳುತ್ತಾರೆ. ಬಾಬರಿ ಮಸೀದಿ ಧ್ವಂಸಗೊಳಿಸಿದ್ದಕ್ಕೆ ಶನಿವಾರ 33 ವರ್ಷ ತುಂಬಿವೆ. ಈ ವೇಳೆ ಅಯೋಧ್ಯೆ ಸೇರಿದಂತೆ ಉತ್ತರ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನಗಳು ವರದಿಯಾಗಿಲ್ಲ.

# ಚೀನಾ-ಭಾರತ ಸಂಬಂಧ ವೃದ್ಧಿಯಾಗಲು ಗಡಿಯಲ್ಲಿ ಶಾಂತಿ ಮುಖ್ಯ


## ಮೊಬಿಲಿಟಿ ಒಪ್ಪಂದದ ಮೂಲಕ ಇನ್ಮುಂದೆ ಭಾರತೀಯಯರಿಗೆ ರಷ್ಯಾದಲ್ಲಿ ಉದ್ಯೋಗ ಸುಲಭವಾಗಿ ಲಭಿಸಲಿದೆ

**ಹೊಸದಿಲ್ಲಿ:** ಹಿಂದೂಸ್ತಾನ್ ಟೈಮ್ಸ್ ಲೀಡರ್‌ಶಿಪ್ ಸಮ್ಮೇಳನ ಭಾಗವಹಿಸಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತ ಪ್ರವಾಸ ಸೇರಿದಂತೆ ಭಾರತ ಹಾಗೂ ಚೀನಾ ನಡುವಿನ ಗಡಿ ಪ್ರದೇಶದ ಕುರಿತು ಜೈಶಂಕರ್ ಮಾತನಾಡಿದ್ದಾರೆ. ಈ ವೇಳೆ ಚೀನಾ, ಭಾರತದ ದ್ವಿಪಕ್ಷೀಯ ಸಂಬಂಧ ಕಾಪಾಡಿಕೊಳ್ಳುವಲ್ಲಿ ಉಭಯ ದೇಶಗಳ ಗಡಿ ಪ್ರದೇಶದಲ್ಲಿ ಶಾಂತಿ ಕಾಪಾಡುವುದು ಅತ್ಯಂತ ಮುಖ್ಯವಾದ ವಿಷಯ ಎಂದು ಹೇಳಿದ್ದಾರೆ. ಶನಿವಾರ ಹಿಂದೂಸ್ತಾನ್ ಟೈಮ್ಸ್ ಲೀಡರ್‌ಶಿಪ್ ಸಮ್ಮೇಳನ ಭಾಗವಹಿಸಿದ್ದ ಭಾರತದ ವಿದೇಶಾಂಗ ಸಚಿವ ಡಾ.ಎಸ್ ಜೈಶಂಕರ್ ಚೀನಾ, ಭಾರತದ ನಡುವಿನ ದ್ವಿಪಕ್ಷೀಯ ಸಂಬಂಧ ಗಡಿ ಪ್ರದೇಶದಲ್ಲಿನ ಸೂಕ್ಷ್ಮತೆ ಕುರಿತು ಸಂವಾದ ನಡೆಸಿದ್ದಾರೆ.

ಚೀನಾ-ಭಾರತದ ಗಡಿ ವಿವಾದ ಕುರಿತು ಮಾತನಾಡಿದ ಜೈಶಂಕರ್ ಈ ವೇಳೆ ಅವರು 2024ರ ಅಕ್ಟೋಬರ್ ನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ನಡುವೆ ನಡೆದ ಖಜಾನ್ ಸಭೆಯ ಬಳಿಕ ಗಾಲ್ವಾನ್ ಕಣಿವೆಯಲ್ಲಿನ ಸಂಘರ್ಷದ ಕುರಿತು ಒಂದು ಒಪ್ಪಂದಕ್ಕೆ ಬಂದಿದ್ದು, ಆದಾದ ಬಳಿಕ ಇಲ್ಲಿಯವೆಗೂ ಗಡಿ ಪ್ರದೇಶಗಳು ಬಹುತೇಕ ಶಾಂತಿಯುತವಾಗಿಯೇ ಇದೆ ಮತ್ತು ಗಸ್ತು ತಿರುಗುವಿಕೆಗಳು ಸಹ ಎಂದಿನಂತೆ ಸರಾಗವಾಗಿ ನಡೆಯುತ್ತಿವೆ ಎಂದು ತಿಳಿಸಿದ್ದಾರೆ.

ಈ ಒಪ್ಪಂದದ ವೇಳೆ ನಾವು ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯೇ ಉತ್ತಮ ಸಂಬಂಧಕ್ಕೆ ಮೊದಲ ಹೆಜ್ಜೆ ಎಂಬ ನಿಲುವನ್ನು ಹೊಂದಿದ್ದೇವೆ ಮತ್ತು ಅದು ಈಗಲೂ ಮುಂದುವರೆಯುತ್ತಿದೆ ಎಂದು ಭಾರತದ ನಿಲುವನ್ನು ಸ್ಪಷ್ಟಪಡಿಸಿದರು. ಅಷ್ಟೇ ಅಲ್ಲದೇ, ಉಭಯ ದೇಶಗಳ ನಡುವಿನ ಸಂಬಂಧದಲ್ಲಿನ ಸಮಸ್ಯೆ ಕೇವಲ ಗಾಲ್ವಾನ್ ಕಣಿವೆ ಕುರಿತಾದದ್ದು ಮಾತ್ರವಲ್ಲ, ವ್ಯಾಪಾರ, ಹೂಡಿಕೆ, ಸ್ಪರ್ಧೆ, ಸಬ್ಸಿಡಿಗಳು, ಪಾರದರ್ಶಕತೆಯಂತಹ ವಿಚಾರಗಳು ಸಹ ಇವೆ ಎಂದು ಹೇಳಿದ್ದಾರೆ. ಇನ್ನು, ಅವುಗಳನ್ನು ಸರಿಪಡಿಸಲು ನಾವು ನಿರಂತರವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಪುಟಿನ್ ಭೇಟಿಯ 3 ಪ್ರಮುಖ ಅಂಶಗಳು ಇದೇ ವೇಳೆ ಭಾರತದಲ್ಲಿ ಪುಟಿನ್ ಪುಟಿನ್ ಅವರ ಭೇಟಿಯಲ್ಲಿ ಭಾರತ-ರಷ್ಯಾ ಸಂಬಂಧವನ್ನು ಮತ್ತಷ್ಟು ಬಲಪಡಿಸುವುದು ಹೇಗೆ ಎಂಬುದರ ಬಗ್ಗೆ ಹೆಚ್ಚಿನ ಗಮನ ಹರಿಸಲಾಗಿತ್ತು. ಅಧ್ಯಕ್ಷ ಪುಟಿನ್ ಅವರು ದೊಡ್ಡ ಉದ್ಯಮ ನಿಯೋಗದೊಂದಿಗೆ ಭಾರತಕ್ಕೆ ಬರುವ ಮೂಲಕ ಅವರ ಭೇಟಿಯನ್ನು ವಿಭಿನ್ನವಾಗಿ ಮಾಡಿದ್ದಾರೆ ಎಂದು ಬಣ್ಣಿಸಿದರು.



ಪುಟಿನ್ ಅವರ ಭೇಟಿಯಿಂದಾಗಿ ಭಾರತಕ್ಕೆ ಮೊಬಿಲಿಟಿ ಒಪ್ಪಂದ, ರಸಗೊಬ್ಬರಗಳ ಜಂಟಿ ಉದ್ಯಮ ಮತ್ತು ರಷ್ಯಾ-ಭಾರತದ ಸಂಬಂಧವನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ 3 ಪ್ರಮುಖ ಫಲಿತಾಂಶಗಳು ದೊರೆತಿವೆ ಎಂದು ತಿಳಿಸಿದ್ದಾರೆ. ಈ ಕುರಿತು ವಿವರಿಸುತ್ತಾ ಮೊದಲ ಪ್ರಮುಖ ಬೆಳವಣಿಗೆ ಎಂದರೆ ಮೊಬಿಲಿಟಿ/ಸಂಚಾರ ಒಪ್ಪಂದದ ಮೂಲಕ ಭಾರತೀಯರಿಗೆ ರಷ್ಯಾದಲ್ಲಿ ಉದ್ಯೋಗಗಳನ್ನು ಹೆಚ್ಚು ಸುಲಭವಾಗಿ ಕಂಡುಕೊಳ್ಳಬಹುದು.

ಎರಡನೆಯದು, ರಸಗೊಬ್ಬರ ಉತ್ಪಾದನೆಗೆ ಸಂಬಂಧಿಸಿದಂತೆ ಜಂಟಿ ಉದ್ಯಮ ಸ್ಥಾಪನೆಯಲ್ಲಿ ಒಪ್ಪಂದ ಮೂಡಿರುವುದು. ಬ್ರೆಜಿಲ್ ನ ಬಳಿಕ ಎರಡನೇ ಅತಿದೊಡ್ಡ ರಸಗೊಬ್ಬರ ಆಮದುದಾರ ರಾಷ್ಟ್ರವಾಗಿದೆ. ನಮ್ಮಲ್ಲಿ ರಸಗೊಬ್ಬರ ಪೂರೈಕೆ ಸ್ಥಿರವಾಗಿಲ್ಲ, ಕೆಲವೊಮ್ಮೆ ಪೂರೈಕೆ ನಿಲ್ಲುತ್ತದೆ. ಆದ್ದರಿಂದ, ರಸಗೊಬ್ಬರ ಕ್ಷೇತ್ರದಲ್ಲಿ ಮಹತ್ವದ ಜಂಟಿ ಉದ್ಯಮವನ್ನು ಸ್ಥಾಪಿಸುವ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇದು ಆಹಾರ ಭದ್ರತೆಗೆ ಪೂರಕವಾದ ಅಂಶ ಎಂದು ತಿಳಿಸಿದ್ದಾರೆ.

**ಹಿಂದೂಸ್ತಾನ್ ಟೈಮ್ಸ್ ಲೀಡರ್‌ಶಿಪ್ ಸಮ್ಮೇಳನದಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಜೈಶಂಕರ್, ಭಾರತ-ಚೀನಾ ಗಡಿ ಪ್ರದೇಶದಲ್ಲಿ ಶಾಂತಿ ಕಾಪಾಡುವುದು ದ್ವಿಪಕ್ಷೀಯ ಸಂಬಂಧಕ್ಕೆ ಮುಖ್ಯ, ಕೇವಲ ಗಡಿ ಸಮಸ್ಯೆ ಮಾತ್ರವಲ್ಲ ದ್ವಿಪಕ್ಷೀಯ ಸಂಬಂಧ ವೃದ್ಧಿಗೊಳಿಸಲು ಹಲವು ವಿಚಾರಗಳಲ್ಲಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂದಿದ್ದಾರೆ. ಇದೇ ವೇಳೆ, ಪುಟಿನ್ ಭಾರತ ಭೇಟಿ ಕುರಿತು 3 ಪ್ರಮುಖ ಅಂಶಗಳ ಬಗ್ಗೆಯೂ ತಿಳಿಸಿದ್ದು, ಭಾರತ-ರಷ್ಯಾ ಸಂಬಂಧವನ್ನು ಇನ್ನಷ್ಟು ವೃದ್ದಗೊಳಿಸಲು ಪುಟಿನ್ ದೊಡ್ಡ ಉದ್ಯಮಿಗಳ ನಿಯೋಗದಿಂದ ಬಂದಿದ್ದರು.**


**-ಡಾ. ಎಸ್. ಜೈಶಂಕರ್, ಭಾರತದ ವಿದೇಶಾಂಗ ಸಚಿವ**

**ಜಂಟಿ ಉದ್ಯಮ ಸ್ಥಾಪಿಸುವ ಒಪ್ಪಂದ**

ಮೂರನೇಯದಾಗಿ ರಷ್ಯಾ, ಭಾರತದ ನಡುವಿನ ಸಂಬಂಧವನ್ನು ಮತ್ತಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಒಪ್ಪಂದಗಳು ಇದ್ದವು. ಅದಕ್ಕಾಗಿಯೇ ಪುಟಿನ್ ಅವರು ನೂರಾರು ಜನ ಉದ್ಯಮಿಗಳಿರುವ ನಿಯೋಗದ ಜೊತೆಗೆ ದೇಶಕ್ಕೆ ಬಂದಿದ್ದರು ಎಂದು ತಿಳಿಸಿದ್ದಾರೆ.

ಇನ್ನು, ಇದರ ಜೊತೆಗೆ ಅಮೆರಿಕಾ ಹಾಗೂ ಭಾರತದ ನಡುವಿನ ಸಂಬಂಧ, ಸೇರಿದಂತೆ ಹಲವು ವಿಚಾರಗಳ ಕುರಿತು ಸಂವಾದ ನಡೆಸಿದ ಜೈಶಂಕರ್ ಭಾರತವನ್ನು ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವ ನಿಟ್ಟಿನಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

# ಆದಾಯ ತೆರಿಗೆ ಪ್ರಕರಣದಲ್ಲಿ ಯಶ್‌ಗೆ ರಿಲೀಫ್



ನಟ ಯಶ್ ಅವರು ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇದ್ದಾರೆ. ಇದರ ಮಧ್ಯೆ ಅವರಿಗೆ ದೊಡ್ಡ ರಿಲೀಫ್ ಒಂದು ಸಿಕ್ಕಿದೆ. 2013-14ರಿಂದ 2018-19 ಅವಧಿಯ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಐಟಿ ಇಲಾಖೆ ನೀಡಿದ್ದ ನೋಟಿಸ್ ಅನ್ನು ಯಶ್ ಹೈಕೋರ್ಟ್ ಅಲ್ಲಿ ಪ್ರಶ್ನೆ ಮಾಡಿದ್ದರು. ನ್ಯಾ.ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಹೈಕೋರ್ಟ್ ಪೀಠ ಈ ನೋಟಿಸ್ ರದ್ದು ಮಾಡಿ ಆದೇಶ ನೀಡಿದೆ. ಇದರಿಂದ ಯಶ್ ಅವರಿಗೆ ರಿಲೀಫ್ ಸಿಕ್ಕಂತೆ ಆಗಿದೆ. ಅಷ್ಟಕ್ಕೂ ಏನಿದು ಪ್ರಕರಣ ಆ ಬಗ್ಗೆ ಇಲ್ಲಿದೆ ಸಂಪೂರ್ಣ ವಿವರ.

ಹೊಂಬಾಳೆ ಕನ್ಸ್ಟ್ರಕ್ಷನ್‌ಗೆ ಸಂಬಂಧಿಸಿ ಐಟಿ ಇಲಾಖೆ ತನಿಖೆ ನಡೆಸಿತ್ತು. ಈ ಪ್ರಕರಣದಲ್ಲಿ ನಟ ಯಶ್ ವಾಸಿಸಿದ್ದ ಹೊಸಕೆರೆಹಳ್ಳಿ ಮನೆ, ಅವರು ಬಾಡಿಗೆ ಪಡೆದು ಉಳಿದುಕೊಂಡಿದ್ದ ತಾಜ್ ವೆಸ್ಟ್ ಎಂಡ್ ರೂಮ್ ಶೋಧಿಸಿತ್ತು. 2021ರಲ್ಲಿ ನಟ ಯಶ್‌ಗೆ ಆದಾಯ ತೆರಿಗೆ ಕಾಯ್ದೆ ಸೆ.153ಸಿ ಅಡಿ ನೋಟಿಸ್ ನೀಡಿತ್ತು. ಇದನ್ನು ಪ್ರಶ್ನಿಸಿ ನಟ ಯಶ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಿದ್ದರು. ಮನೆ ಶೋಧಿಸಿದ ಬಳಿಕವೂ 'ಶೋಧನೆ ನಡೆಸದ ವ್ಯಕ್ತಿ' ಎಂದು ಪರಿಗಣಿಸಿ ಐಟಿ ನೋಟಿಸ್ ನೀಡಿದ್ದು ಏಕೆ ಎಂಬುದು ಯಶ್ ಪ್ರಶ್ನೆ ಆಗಿತ್ತು. ತಮ್ಮ ನಿವಾಸ ಶೋಧಿಸಲಾಗಿದೆ. ಆದರೂ ಶೋಧ ನಡೆಸದೇ ಇರುವವರಿಗೆ ನೀಡುವ 153ಸಿ ನೋಟಿಸ್ ನೀಡಲಾಗಿದೆ. ಇದು ಕಾನೂನು ಬಾಹಿರವೆಂದು' ಯಶ್ ಪರ ವಕೀಲರು ವಾದಿಸಿದ್ದಾರೆ. 'ಹೊಂಬಾಳೆ ಕನ್ಸ್ಟ್ರಕ್ಷನ್‌ನ ವಿಜಯ್ ಕುಮಾರ್ ವಿರುದ್ಧ ಶೋಧನೆ ವಾರಂಟ್ ಪಡೆಯಲಾಗಿತ್ತು. ಹೊಂಬಾಳೆಗೆ ಸಂಬಂಧಪಟ್ಟಂತೆ ಮಾತ್ರ ಯಶ್ ನಿವಾಸದಲ್ಲಿ ಶೋಧಿಸಲಾಗಿದೆ. ಹೀಗಾಗಿ ಯಶ್ ಶೋಧನೆಗೊಳಗಾದ ವ್ಯಕ್ತಿಯಲ್ಲ ಎಂದು ಐಟಿ ವಾದ ಮಾಡಿದೆ. ವಾದ ಪ್ರತಿವಾದ ಗಮನಿಸಿದ ಕೋರ್ಟ್ ಯಶ್‌ಗೆ ಐಟಿ ಇಲಾಖೆ ಜಾರಿಗೊಳಿಸಿದ್ದ ನೋಟಿಸ್‌ನ ರದ್ದು ಮಾಡಿದೆ.



# ಗುಮ್ಮಡಿ ನರಸಯ್ಯ ಚಿತ್ರದ ಮುಹೂರ್ತ, ಟಾಲಿವುಡ್‌ನಲ್ಲೂ ಶಿವಣ್ಣ ಅಬ್ಬರ ಶುರು



ಆಂಧ್ರದ ಖ್ಯಾತ ಸರಳ ರಾಜಕಾರಣಿಯಾಗಿರುವ ಗುಮ್ಮಡಿ ನರಸಯ್ಯ, ಇವರ ಜೀವನಧಾರಿತ ಸಿನಿಮಾ ಇದಾಗಿದ್ದು. ಗುಮ್ಮಡಿ ನರಸಯ್ಯನ ಪಾತ್ರದಲ್ಲಿ ಬಣ್ಣ ಶಿವಣ್ಣ ವಿಜಯವಾಡದ ಗುಮ್ಮಡಿಯಲ್ಲಿ ಚಿತ್ರದ ಮುಹೂರ್ತ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಜೊತೆಗೆ ಮುಹೂರ್ತ ಕಾರ್ಯಕ್ರಮಕ್ಕೆ ಶಿವಣ್ಣ ಹಾಗೂ ಪತ್ನಿ ಗೀತಾ ಅವರನ್ನು ಗುಮ್ಮಡಿ ಜನ ಅದ್ದೂರಿಯಾಗಿ ಸ್ವಾಗತಿಸಿದರು.

ಗುಮ್ಮಡಿ ನರಸಯ್ಯ ಮನೆಗೆ ಭೇಟಿ ನೀಡಿದ್ದ ಶಿವಣ್ಣ ಆಂಧ್ರ ಪ್ರದೇಶದಲ್ಲಿ ಗುಮ್ಮಡಿ ನರಸಯ್ಯ ಅವರು ಸಾಕಷ್ಟು ಖ್ಯಾತಿ ಹೊಂದಿದ್ದಾರೆ. 5 ಬಾರಿ ಅವರು ಶಾಸಕರಾಗಿ ಆಯ್ಕೆ ಆಗಿದ್ದರು. ಗುಮ್ಮಡಿ ನರಸಯ್ಯ ಪಾತ್ರದಲ್ಲಿ ಬಣ್ಣ ಹಚ್ಚಲಿರುವ ಶಿವಣ್ಣ ಮೊನ್ನೆಯಷ್ಟೇ ಗುಮ್ಮಡಿ ನರಸಯ್ಯ ಅವರ ಕುಟುಂಬವನ್ನು ಶಿವಣ್ಣ ಭೇಟಿಯಾಗಿ ಮಾತುಕಥೆ ನಡೆಸಿದ್ದಾರೆ. ಈ ವೇಳೆ ಗೀತಾ ಶಿವರಾಜ್ ಕುಮಾರ್ ಕೂಡ ಸಾಥ್ ನೀಡಿದರು. ಗುಮ್ಮಡಿ ನರಸಯ್ಯ ಬಯೋಪಿಕ್ ಶಿವರಾಜ್ ಕುಮಾರ್ ಅಭಿನಯದ ಈ ಚಿತ್ರದಲ್ಲಿ ಶಿವಣ್ಣನ ಲುಕ್ ವಿಶೇಷವಾಗಿಯೇ ಇದೆ. ಧೋತಿ ಉಟ್ಟಿದ್ದಾರೆ. ಶರ್ಟ್ ಹಾಕಿದ್ದಾರೆ. ಹೆಗಲ ಮೇಲೆ ಒಂದು ಕೆಂಪು ಬಣ್ಣದ ಶಾಲು ಇದೆ. ಓಡಾಡೋಕೆ ಒಂದು ಸೈಕಲ್ ಇದೆ. ಇದು ಈ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಆಗಿದೆ. ಚಿತ್ರಕ್ಕೆ ಗುಮ್ಮಡಿ ನರಸಯ್ಯ ಅನ್ನೋ ಹೆಸರಿದೆ. ಈ ಚಿತ್ರದ ವಿಷಯ ಮೊನ್ನೇನೆ ಅನೌನ್ಸ್ ಆಗಿದೆ. ದೀಪಾವಳಿ ಹಬ್ಬಕ್ಕೇನೆ ಇದು ಅನೌನ್ಸ್ ಆಗಿದೆ. ಆದರೆ, ಈ ಚಿತ್ರದ ಪೋಸ್ಟರ್ ರಿಲೀಸ್ ಆಗಿರಲಿಲ್ಲ. ಅದು ಈಗ ರಿಲೀಸ್ ಆಗಿದೆ. ಅದರೊಟ್ಟಿಗೆ ಸಿನಿಮಾದ ಒಂದಷ್ಟು ಮಾಹಿತಿ ಕೂಡ ಅಧಿಕೃತವಾಗಿಯೇ ಹೊರ ಬಂದಿದೆ.

# 'ಮ್ಯಾಕ್ಸ್' ಟ್ರೈಲರ್ ದಿನಾಂಕ ಘೋಷಿಸಿದ ಚಿತ್ರತಂಡ



ಕನ್ನಡದ ಬಹು ನಿರೀಕ್ಷಿತ ಸಿನಿಮಾ

ದರ್ಶನ್ ನಟನೆಯ 'ಡೆವಿಲ್ ಸಿನಿಮಾದ ಟ್ರೈಲರ್ ನಿನ್ನೆಯಷ್ಟೆ ಬಿಡುಗಡೆ ಆಗಿದೆ. ಟ್ರೈಲರ್ ಕುತೂಹಲ ಮೂಡಿಸಲು ಯಶಸ್ವಿಯಾಗಿದ್ದು, ಇದೇ ತಿಂಗಳು ಸಿನಿಮಾ ಬಿಡುಗಡೆ ಸಹ ಆಗಲಿದೆ. ದರ್ಶನ್ ಸಿನಿಮಾದ ಟ್ರೈಲರ್ ಬಿಡುಗಡೆ ಆದ ಬೆನ್ನಲ್ಲೆ ಸುದೀಪ್ ಅವರ ಹೊಸ ಸಿನಿಮಾದ ಟ್ರೈಲರ್ ಸಹ ಬಿಡುಗಡೆ ಆಗುತ್ತಿದೆ. ಸುದೀಪ್ ಅವರ 'ಮಾರ್ಕ್' ಸಿನಿಮಾ ಕನ್ನಡದ ಬಹು ನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದ್ದು, ಇದೀಗ ಸಿನಿಮಾದ ಟ್ರೈಲರ್ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಣೆ ಮಾಡಿದೆ. 'ಮಾರ್ಕ್' ಸಿನಿಮಾದ ಟ್ರೈಲರ್ ಅಂದರೆ ಡಿಸೆಂಬರ್ 07ರಂದು ಬೆಳಿಗ್ಗೆ 11:58ಕ್ಕೆ ಟ್ರೈಲರ್ ಬಿಡುಗಡೆ ಆಗಲಿದೆ. ಈ ಬಗ್ಗೆ ಚಿತ್ರತಂಡ ಟ್ವೀಟ್ ಮಾಡಿದ್ದು, ನಿರೀಕ್ಷೆಯ ಅವಧಿ ಕಿರಿದಾಗಿದೆ, ಇನ್ನೊಂದು ಸೂರ್ಯೋದಕ್ಕೆ ನಿರೀಕ್ಷೆಗಳು ಅಂತ್ಯವಾಗಲಿವೆ. ಮಾರ್ಕ್ ಸಿನಿಮಾದ ಟ್ರೈಲರ್, ಆಕ್ಷನ್ ಮತ್ತು ಭಾವನೆಗಳ ಸ್ಫೋಟಕ ಅಲೆಯನ್ನೇ ತರಲಿದೆ ಎಂದಿದೆ. ಸುದೀಪ್ ಅವರು ಕಪ್ಪು ಬಣ್ಣದ ಹುಡಿ ಧರಿಸಿ ಸಿಗರೇಟು ಹಿಡಿದಿರುವ ಪೋಸ್ಟರ್ ಅನ್ನು ಪೋಸ್ಟ್‌ನ ಜೊತೆಗೆ ಹಂಚಿಕೊಂಡಿದೆ ಚಿತ್ರತಂಡ.

ಸುದೀಪ್ ನಟನೆಯ ಸೂಪರ್ ಹಿಟ್ ಸಿನಿಮಾ ಮ್ಯಾಕ್ಸ್‌ನ ತಂಡವೇ 'ಮಾರ್ಕ್' ಸಿನಿಮಾಕ್ಕೂ ಕೆಲಸ ಮಾಡಿದೆ. ಮ್ಯಾಕ್ಸ್' ಸಿನಿಮಾ ನಿರ್ದೇಶಿಸಿದ್ದ ವಿಜಯ್ ಕಾರ್ತಿಕೇಯ ಅವರೇ 'ಮಾರ್ಕ್' ಸಿನಿಮಾಕ್ಕೂ ಆಕ್ಷನ್ ಕಟ್ ಹೇಳಿದ್ದಾರೆ. ಮ್ಯಾಕ್ಸ್ ಸಿನಿಮಾವನ್ನು ತಮಿಳಿನ ಕಲೈಪುಲಿ ಎಸ್ ತನು ಹಾಗೂ ಸುದೀಪ್ ಅವರು ಜಂಟಿಯಾಗಿ ನಿರ್ಮಾಣ ಮಾಡಿದ್ದರು. ಆದರೆ 'ಮಾರ್ಕ್' ಸಿನಿಮಾವನ್ನು ಸತ್ಯಜ್ಯೋತಿ ಫಿಲಮ್ಸ್, ಸುದೀಪ್ ಅವರು ಜಂಟಿಯಾಗಿ ನಿರ್ಮಿಸುತ್ತಿದ್ದಾರೆ.

# ಮದುವೆ ಬಗ್ಗೆ ಮಾತೇ ಆಡ್ತಿಲ್ಲ ಚಮಕ್ ಬ್ಯೂಟಿ ರಶ್ಮಿಕಾ ಮಂದಣ್ಣ ಸೈಲೆಂಟ್

ರಶ್ಮಿಕಾ ಮಂದಣ್ಣ ಸೈಲೆಂಟಾಗಿದ್ದಾರೆ. ಅದರಲ್ಲೂ ಮದುವೆ ವಿಚಾರದಲ್ಲಿ ಮಾತೇ ಆಡದೇ ಮೌನಕ್ಕೆ ಶರಣಾಗಿದ್ದಾರೆ, ಈ ನಡುವೆ ಒಂದು ಕಾಲದಲ್ಲಿ ತಾವು ಅನುಭವಿಸಿದ ನೋವಿಗೆ ಖಡಕ್ ಉತ್ತರ ಕೊಟ್ಟಿದ್ದು ಮಹಿಳೆಯರ ಪರವಾಗಿ ನಿಂತಿದ್ದಾರೆ. ಕೂರ್ಗ್ ಚೆಲುವೆ ರಶ್ಮಿಕಾ ಮಂದಣ್ಣ ಸೈಲೆಂಟಾಗಿದ್ದಾರೆ. ಶೂಟಿಂಗ್‌ಗೆ ಬ್ರೇಕ್ ಕೊಟ್ಟು ಸದ್ಯಕ್ಕೆ ಕವರ್ ಫೋಟೋ ಶೂಟ್ ಗಳಲ್ಲಿ ಮಾತ್ರ ಗಮನ ಹರಿಸ್ತಾ ಇದ್ದಾರೆ. ಮದುವೆ ಹತ್ತಿರ ಬರ್ತಿದ್ದಂತೆ ಯಾರಿಗೇನು ಹೆದರೋದು ಅನ್ನೋ ನಿಟ್ಟಿನಲ್ಲಿ ತಮಗಾದ ಅವಮಾನಗಳಿಗೆ, ಒಂದೊಂದೇ ರೀತಿಯಲ್ಲಿ ಉತ್ತರ ಕೊಡ್ತಾ ಬರ್ತಿದ್ದಾರೆ.

ಗರ್ಲ್ ಫ್ರೆಂಡ್ ಸಿನಿಮಾ ಮಾಡೋ ಮೂಲಕ ತಾವು ಅನುಭವಿಸಿದ ನೋವನ್ನ ವೀಕ್ಷಕರ ಮುಂದೆ ತೆರೆದಿಟ್ಟ ಕೂರ್ಗ್ ಬ್ಯೂಟಿ ವೇದಿಕೆ ಮೇಲೆ ಹೇಳಿಕೊಂಡಿದ್ದರು. ಗರ್ಲ್‌ಫ್ರೆಂಡ್ ಸಿನಿಮಾ ಒಪ್ಪಿಕೊಳ್ಳೋಕೆ ನಿಜ ಜೀವನದ ಘಟನೆ ಕಾರಣ ಅನ್ನೋ ಹಾಗೆ ಹೇಳಿದ್ದಲ್ಲದೆ, ಭೂಮ ಜೀವನದಲ್ಲಿ ಏನೇನು ಜರಗಿತೋ ಆ ಘಟನೆಗಳು ಸ್ವಲ್ಪ ನನ್ನ ಜೀವನದಲ್ಲೂ ನಡೆದಿತ್ತು ಎಂದಿದ್ದಾರೆ.

ದಿ ಗರ್ಲ್‌ಫ್ರೆಂಡ್ ಸಿನಿಮಾ ಗರ್ಲ್‌ಫ್ರೆಂಡ್‌ನ ಕಂಟ್ರೋಲ್ ಮಾಡುವ ಯುವಕ, ಟಾಕ್ಸಿಕ್ ಲವ್ ರಿಲೇಷನ್ಶಿಪ್ಪ ಕುರಿತಾಗಿದೆ. ಹಾಗಾಗಿ ರಶ್ಮಿಕಾ ಹೇಳಿಕೆ ಸೋಷಿಯಲ್ ಮೀಡಿಯಾದ್ಯಂತ ವೈರಲ್ ಆಗಿತ್ತು, ಈ ಮೂಲಕ ತಮ್ಮ ಮೊದಲ ಎಂಗೇಜ್ ಮೆಂಟ್ ಬ್ರೇಕ್ ಆಪ್ ಆಗಿದ್ದಕ್ಕೆ ಕಾರಣ ಏನು ಅನ್ನೋದನ್ನ ಸಿನಿಮಾ ಮೂಲಕ ಉತ್ತರ ಕೊಟ್ಟರಾ ಅನ್ನೋ ಚರ್ಚೆ ಕೂಡ ಜೋರಾಗಿತ್ತು. ಇದೀಗ ರಶ್ಮಿಕಾ ಮಂದಣ್ಣ ತಮ್ಮ ವೈಯಕ್ತಿಕ ವಿಚಾರ ಹಾಗು ಕೆಲಸದ ವಿಚಾರಕ್ಕೆ ಸ್ಪಷ್ಟನೆ ನೀಡಿದ್ದಾರೆ. ಸಿನಿಮಾ ಅಂದ್ರೆ ದಿನಪೂರ್ತಿ ಕೆಲಸ ಮಾಡೋ ರಶ್ಮಿಕಾ ಮನೆ ವೈಯಕ್ತಿಕ ಜೀವನ ಅಂತ ಬಂದಾಗ ತಾವೆಷ್ಟರ ಮಟ್ಟಿಗೆ ಪ್ರೀತಿಸ್ತೀನಿ ಅನ್ನೋದನ್ನ ಹೇಳಿದ್ದಾರೆ. ಮದುವೆ ವಿಚಾರದ ಬಗ್ಗೆ ಯಾವಾಗ ಮಾತಾಡಬೇಕು ಆವಾಗ ಮಾತಾಡಬೇಕಿದ್ದು, ಕೆಲಸದ ಜೀವನದಲ್ಲಿ ನಾನು ನನ್ನ ವೈಯಕ್ತಿಕ ವಿಚಾರಗಳನ್ನ ತರೋಲ್ಲ ಅಂತ ಹೇಳಿದ್ದಾರೆ. ಈ ಮೂಲಕ ನನಗೂ ವೈಯಕ್ತಿಕ ಬದುಕಿದೆ ಅನ್ನೋದನ್ನ ರಶ್ಮಿಕಾ ಕಡ್ಡಿ ತುಂಡು ಮಾಡುವಂತೆ ಹೇಳಿದ್ದಾರೆ.

# ನನ್ನ ಕೈಯಾರೆ ಜೀವನ ಹಾಳುಮಾಡಿಕೊಂಡೆ




ಬಿಕ್ಕಿಬಿಕ್ಕಿ ಅತ್ತ ನಟಿ

ನಟ ವಿಕ್ಕಿ ಕೌಶಾಲ್ ಜೊತೆ ಮದುವೆಯಾಗಿ ಈಗ ಒಂದು ಮಗುವಿನ ತಾಯಿಯಾಗಿರುವ ಬಾಲಿವುಡ್ ನಟಿ ಕತ್ರಿನಾ ಕೈಫ್ ಬಿಕ್ಕಿ ಬಿಕ್ಕಿ ಅತ್ತು, ನಾನೇ ನನ್ನ ಕೈಯಾರೆ ವೃತ್ತಿ ಜೀವನ ಹಾಳುಮಾಡಿಕೊಂಡೆ ಎಂದು ಹೇಳಿದ್ದ ವಿಚಾರ ಬಹಿರಂಗವಾಗಿದೆ. ಹೌದು.. ಬಾಲಿವುಡ್ ಖ್ಯಾತ ನಟಿ ಕತ್ರಿನಾ ಕೈಫ್ ತಮ್ಮ ವೃತ್ತಿಜೀವನದ ಆರಂಭಿಕ ದಿನಗಳಲ್ಲಿ ಸಲ್ಮಾನ್ ಖಾನ್ ಮತ್ತು ನಟ ರಣಬೀರ್ ಕಪೂರ್ ಜೊತೆ ಡೇಟಿಂಗ್ ಮಾಡುತ್ತಿದ್ದರು.

ಅದರಲ್ಲೂ ರಣಬೀರ್ ಕಪೂರ್ ಜೊತೆಗಿನ ಅವರ ಸಂಬಂಧ ಒಂದು ಹಂತ ಮೇಲೇರಿ ಈ ಜೋಡಿ ಮದುವೆಯಾಗಲಿದ್ದಾರೆ ಎಂದು ಹೇಳಲಾಗಿತ್ತು. ಈ ಜೋಡಿ ಅಜಬ್ ಪ್ರೇಮ್ ಕಿ ಗಜಬ್ ಕಹಾನಿ'ಚಿತ್ರದಲ್ಲಿ ಕಾಣಿಸಿಕೊಂಡ ಬಳಿಕ ಇವರ ಮದುವೆ ಫಿಕ್ಸ್ ಎಂದೇ ಹೇಳಲಾಗಿತ್ತು. ಆದರೆ ಕಾರಣಾಂತರಗಳಿಂದ ಈ ಜೋಡಿ ಬ್ರೇಕಪ್ ಆಗಿತ್ತು. ರಣಬೀರ್ ಕಪೂರ್ ಜೊತೆಗಿನ ಸಂಬಂಧ ಮುರಿದುಬಿದ್ದಾಗ, ಕತ್ರಿನಾ ಕೈಫ್ ಅವರು ತುಂಬಾ ದುಃಖಿತರಾಗಿದ್ದರು. ಈ ವೇಳೆ ಕತ್ರಿನಾ, ನಾನೇ ನನ್ನ ಕೈಯ್ಯಾರೆ ವೃತ್ತಿ ಜೀವನ ಹಾಳುಮಾಡಿಕೊಂಡೆ ಎಂದು ಅಳುತ್ತಾ ಹೇಳಿಕೊಂಡಿದ್ದರಂತೆ. ರಣಬೀರ್ ಅವರೊಂದಿಗಿನ ಕತ್ರಿನಾ ಅವರ ಬೇರ್ಪಡುವಿಕೆಯ ಬಗ್ಗೆ ಮಾತನಾಡಿದರು. ಆ ಸಮಯದಲ್ಲಿ ನಟಿ ತುಂಬಾ ಅಳುತ್ತಿದ್ದರು ಮತ್ತು ಭಾವನಾತ್ಮಕರಾಗಿದ್ದರು ಎಂದು ಅವರು ಉಲ್ಲೇಖಿಸಿದ್ದಾರೆ.

# 4ನೇ ಇನಿಂಗ್ಸ್‌ನಲ್ಲಿ ದ್ವಿಶತಕ ಜಸ್ಟಿನ್ ಗ್ರೀವ್ಸ್ ವಿಶ್ವ ದಾಖಲೆ



ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ನಾಲ್ಕನೇ ಇನಿಂಗ್ಸ್‌ನಲ್ಲಿ ಡಬಲ್ ಸೆಂಚುರಿ ಸಿಡಿಸಿರುವುದು ಕೇವಲ 7 ಬ್ಯಾಟರ್‌ಗಳು ಮಾತ್ರ. ಈ ಸಾಧನೆ ಮಾಡಿದ ಏಳನೇ ಬ್ಯಾಟರ್ ಜಸ್ಟಿನ್ ಗ್ರೀವ್ಸ್. ಅದು ಕೂಡ ವೆಸ್ಟ್ ಇಂಡೀಸ್ ಪರ ಸ್ಮರಣೀಯ ಇನಿಂಗ್ಸ್ ಆಡುವ ಮೂಲಕ ಎಂಬುದು ವಿಶೇಷ. ಕ್ರೈಸ್ಟ್ ಚರ್ಚ್‌ನಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ಇನಿಂಗ್ಸ್‌ನಲ್ಲಿ ವಿಂಡೀಸ್ ಪಡೆ 531 ರನ್‌ಗಳ ಗುರಿ ಪಡೆದಿತ್ತು. ಈ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ ತಂಡ 277 ರನ್ ಗಳಿಸುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕಣಕ್ಕಿಳಿದ ಜಸ್ಟಿನ್ ಗ್ರೀವ್ಸ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು. ಜವಾಬ್ದಾರಿಯುತ ಇನಿಂಗ್ಸ್ ಆಡಿದ ಗ್ರೀವ್ಸ್ ಬರೋಬ್ಬರಿ 388 ಎಸೆತಗಳನ್ನು ಎದುರಿಸಿದರು.

ಈ ವೇಳೆ 19 ಫೋರ್‌ಗಳನ್ನು ಬಾರಿಸುವ ಮೂಲಕ ಒಟ್ಟು 202 ರನ್ ಕಲೆಹಾಕಿದರು. ಈ ಮೂಲಕ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ನಾಲ್ಕನೇ ಇನಿಂಗ್ಸ್‌ನಲ್ಲಿ ದ್ವಿಶತಕ ಸಿಡಿಸಿದ ವಿಶ್ವದ 7ನೇ ಬ್ಯಾಟರ್ ಎನಿಸಿಕೊಂಡರು. ಇದಕ್ಕೂ ಮುನ್ನ ಈ ಸಾಧನೆ ಮಾಡಿದ್ದು ವೆಸ್ಟ್ ಇಂಡೀಸ್‌ನ ಜಾರ್ಜ್ ಹೆಡ್ಲಿ (1930), ಇಂಗ್ಲೆಂಡ್‌ನ ಬಿಲ್ ಹೆಡ್ರಿಚ್ (1939), ಭಾರತದ ಸುನಿಲ್ ಗವಾಸ್ಕರ್ (1984), ನ್ಯೂಝಿಲೆಂಡ್‌ನ ನಾಥನ್ ಅಸ್ಟೈಲ್ (2002) ಹಾಗೂ ವೆಸ್ಟ್ ಇಂಡೀಸ್‌ನ ಕೈಲ್ ಮೇಯರ್ಸ್ (2021) ಮಾತ್ರ. ಇದೀಗ ನ್ಯೂಝಿಲೆಂಡ್ ವಿರುದ್ಧ ಕೊನೆಯ ಇನಿಂಗ್ಸ್‌ನಲ್ಲಿ ಅಜೇಯ 202 ರನ್ ಬಾರಿಸಿ ಜಸ್ಟಿನ್ ಗ್ರೀವ್ಸ್ ಹೊಸ ಇತಿಹಾಸ ನಿರ್ಮಿಸಿದ್ದಾರೆ.

# ಜೈಸ್ವಾಲ್ ಶತಕ, ರೋ-ಕೊ ಆಕರ್ಷಕ ಫಿಫ್ಟಿ ಆಫ್ರಿಕಾ ವಿರುದ್ಧ 9 ವಿಕೆಟ್‌ಗಳ ಜಯ



ಸರಣಿ ಭಾರತ ಕೈವಶ

ವಿರಾಟ್ ಕೊಹ್ಲಿ ಮತ್ತು ಯಶಸ್ವಿ ಜೈಸ್ವಾಸ್ ಯಶಸ್ವಿ ಜೈಸ್ವಾಲ್ ಅವರ ಅಜೇಯ ಶತಕ ಮತ್ತು ಹಿರಿಯ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಮನಮೋಹಕ ಅರ್ಧಶತಕಗಳ ನೆರವಿನಿಂದ ಕೆಎಲ್ ರಾಹುಲ್ ರಾಹುಲ್ ನೇತೃತ್ವದ ಭಾರತ ತಂಡ ಪ್ರವಾಸಿ ದಕ್ಷಿಣ ಆಫ್ರಿಕಾವನ್ನು 9 ವಿಕೆಟ್ ಗಳಿಂದ ಭರ್ಜರಿಯಾಗಿ ಸೋಲಿಸಿದೆ. ಈ ಮೂಲಕ 3 ಪಂದ್ಯಗಳ ಏಕದಿನ ಸರಣಿಯನ್ನು 2-1 ಅಂತರದಿಂದ ತನ್ನದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಟೆಸ್ಟ್ ಸರಣಿಯಲ್ಲಿ ಆದ 2-0 ಮುಖಭಂಗಕ್ಕೆ ತಕ್ಕ ತಿರುಗೇಟು ನೀಡಿದೆ.

ರಾಂಚಿಯಲ್ಲಿ ನಡೆದ ಪ್ರಥಮ ಏಕದಿನ ಪಂದ್ಯವನ್ನು ಭಾರತ ತಂಡ 17 ರನ್ ಗಳಿಂದ ಜಯಿಸಿತ್ತು. ಬಳಿಕ ರಾಯ್ಪುರದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ 4 ವಿಕೆಟ್ ಗಳಿಂದ ಗೆಲ್ಲುವ ಮೂಲಕ ಸರಣಿಯನ್ನು 1-1 ಸಮಬಲ ಸ್ಥಾಪಿಸಿತು. ಶನಿವಾರದಂದು ವಿಶಾಖಪಟ್ಟಣದ ಡಾ ವೈ ಎಸ್ ರಾಜಶೇಖರ್ ರೆಡ್ಡಿ ಕ್ರೀಡಾಂಗಣದಲ್ಲಿ ನಡೆದ 3ನೇ ಏಕದಿನ ಪಂದ್ಯದಲ್ಲಿ ಭಾರತ ತಂಡ ಪಂದ್ಯವನ್ನು ಅಧಿಕಾರಯುತವಾಗಿ ಜಯಿಸುವ ಮೂಲಕ ಪ್ರವಾಸಿ ತಂಡಕ್ಕೆ ತಕ್ಕ ತಿರುಗೇಟು ನೀಡಿತು. ಏಕದಿನ ಸರಣಿಗೂ ಮುನ್ನ ನಡೆದ ಕೋಲ್ಕತಾ ಮತ್ತು ಗುವಾಹಟಿ ಟೆಸ್ಟ್ ಗಳಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ವಿರುದ್ಧ ಹೀನಾಯ ಸೋಲನುಭವಿಸಿತ್ತು.

ವಿಶಾಖಪಟ್ಟಣದಲ್ಲಿ ಭಾರತ ತಂಡದ ನಾಯಕ ಕೆಎಲ್ ರಾಹುಲ್ ಅವರು ಟಾಸ್ ಗೆದ್ದು ದಕ್ಷಿಣ ಆಫ್ರಿಕಾ ತಂಡವನ್ನು ಬ್ಯಾಟಿಂಗ್ ಗೆ ಇಳಿಸಿದರು. ಈ ಹಿಂದಿನ ಎರಡೂ ಪಂದ್ಯಗಳಲ್ಲಿ ಟಾಸ್ ಗೆದ್ದು ಚೇಸಿಂಗ್ ಮಾಡಿದ್ದ ದಕ್ಷಿಣ ಆಫ್ರಿಕಾ ತಂಡ ಈ ಬಾರಿ ಮೊದಲು ಬ್ಯಾಟಿಂಗ್ ಮಾಡಿ 47.5 ಓವರ್ ಗಳಲ್ಲಿ 270 ರನ್ ಗಳಿಗೆ ಆಲೌಟ್ ಆಯಿತು. ಈ ಮೊತ್ತವನ್ನು ಭಾರತ ತಂಡ ಕೇವಲ ಒಂದು ವಿಕೆಟ್ ಕಳೆದುಕೊಂಡು ಇನ್ನೂ 61 ಎಸೆತಗಳು ಬಾಕಿ ಉಳಿದಿರುವಂತೆ ತಲುಪಿತು.

**ರೋಹಿತ್ - ಯಶಸ್ವಿ 155 ರನ್ ಜೊತೆಯಾಟ:** ಚೇಸಿಂಗ್ ವೇಳೆ ಅನುಭವಿ ರೋಹಿತ್ ಶರ್ಮಾ ಮತ್ತು ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಎಚ್ಚರಿಕೆಯಿಂದ ಆಡಿ ಮೊದಲ ವಿಕೆಟ್ ಗೆ 155 ರನ್ ಗಳ ಮಹತ್ವದ ಜೊತೆಯಾಟ ಆಡಿದರು. ರೋಹಿತ್ ಶರ್ಮಾ ಅವರು 73 ಎಸೆತಗಳನ್ನು ಎದುರಿಸಿ 75 ರನ್ ಪೇರಿಸಿದರು. ಇದರಲ್ಲಿ 7 ಬೌಂಡರಿ ಮತ್ತು 3 ಸಿಕ್ಸರ್ ಗಳಿದ್ದವು. 26ನೇ ಓವರ್ ನಲ್ಲಿ ಕೇಶವ್ ಮಹಾರಾಜ್ ಅವರ ಎಸೆತದಲ್ಲಿ ಬ್ರಿಟ್ಝ್ಕ ಅವರಿಗೆ ಕ್ಯಾಚಿತ್ತು ಅವರು ಔಟಾದರು. ಈ ಸಂದರ್ಭದಲ್ಲಿ ರೋಹಿತ್ ಶರ್ಮಾ ಅವರು 20000 ಅಂತಾರಾಷ್ಟ್ರೀಯ ರನ್ ಗಳಿಸಿದ ನಾಲ್ಕನೆಯ ಭಾರತೀಯ ಆಟಗಾರ ಎಂಬ ಗೌರವಕ್ಕೆ ಪಾತ್ರರಾದರು. ಆ ಬಳಿಕ ಯಶಸ್ವಿ ಜೈಸ್ವಾಲ್ ಮತ್ತು ವಿರಾಟ್ ಕೊಹ್ಲಿ ಅವರು ವಿಕೆಟ್ ಬೀಳದಂತೆ ನೋಡಿಕೊಂಡು ತಂಡವನ್ನು ಜಯದ ದಡ ತಲುಪಿಸಿದರು.

# ನೈಟ್ ರೈಡರ್ಸ್‌ಗೆ ಸೋಲುಣಿಸಿದ ವೈಪರ್ಸ್

ಶಾರ್ಜಾದಲ್ಲಿ ನಡೆದ ಇಂಟರ್ ನ್ಯಾಷನಲ್ ಲೀಗ್ ಟಿ20 ಟೂರ್ನಿಯ 4ನೇ ಪಂದ್ಯದಲ್ಲಿ ಡೆಸರ್ಟ್ ವೈಪರ್ಸ್ ತಂಡ ರೋಚಕ ಜಯ ಸಾಧಿಸಿದೆ. ಅದು ಕೂಡ ಬಲಿಷ್ಠ ಅಬುಧಾಬಿ ನೈಟ್ ರೈಡರ್ಸ್ ತಂಡಕ್ಕೆ ಸೋಲುಣಿಸುವ ಮೂಲಕ ಎಂಬುದು ವಿಶೇಷ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಅಬುಧಾಬಿ ನೈಟ್ ರೈಡರ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 171 ರನ್ ಕಲೆಹಾಕಿತು.

ಈ ಬೃಹತ್ ಗುರಿ ಬೆನ್ನತ್ತಿದ ಡೆಸರ್ಟ್ ವೈಪರ್ಸ್ ಪರ ಯಾವುದೇ ಬ್ಯಾಟರ್ ಅರ್ಧಶತಕ ಬಾರಿಸಿರಲಿಲ್ಲ. ಬದಲಾಗಿ ಎಲ್ಲಾ ಬ್ಯಾಟರ್‌ಗಳು ಸಣ್ಣ ಪುಟ್ಟ ರನ್‌ಗಳ ಕೊಡುಗೆ ನೀಡುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದ್ದು ವಿಶೇಷ. 172 ರನ್‌ಗಳನ್ನು ಚೇಸ್ ಮಾಡಿದ ಡೆಸರ್ಟ್ ವೈಪರ್ಸ್ ಪರ ಶಿಮ್ರಾನ್ ಹೆಟ್ಮೆಯರ್ 25 ಎಸೆತಗಳಲ್ಲಿ 48 ರನ್ ಬಾರಿಸಿದ್ದೇ ಗರಿಷ್ಠ ಸ್ಕೋರ್. ಮತ್ತೊಂದೆಡೆ ಡಾನ್ ಲಾರೆನ್ಸ್ 35 ರನ್‌ಗಳ ಕೊಡುಗೆ ನೀಡಿದರೆ, ಖುರ್ರ್ಮ ತನ್ವೀರ್ ಅಜೇಯ 31 ರನ್ ಬಾರಿಸಿದರು. ಈ ಮೂಲಕ ಡೆಸರ್ಟ್ ವೈಪರ್ಸ್ ತಂಡವು 19.3 ಓವರ್‌ಗಳಲ್ಲಿ 175 ರನ್ ಬಾರಿಸಿ 2 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿದೆ.



# ಪಿಂಕ್ ಬಾಲ್‌ನಲ್ಲಿ ಹೊಸ ವಿಶ್ವ ದಾಖಲೆ ಬರೆದ ಆಸ್ಟ್ರೇಲಿಯಾ



ಬ್ರಿಸ್ಬೇನ್‌ನ ಗಬ್ಬಾ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಹೊಸ ಇತಿಹಾಸ ನಿರ್ಮಿಸಿದೆ. ಅದು ಕೂಡ 378 ರನ್ ಕಲೆಹಾಕುವ ಮೂಲಕ ಎಂಬುದು ವಿಶೇಷ. ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಬ್ಯಾಟಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 334 ರನ್‌ಗಳನ್ನು ಕಲೆಹಾಕಿತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಶುರು ಮಾಡಿದ ಆಸ್ಟ್ರೇಲಿಯಾ ಪರ ಜಾಕ್ ವೆದರಾಲ್ಡ್ (72) ಮಾರ್ನಸ್ ಲಾಬುಶೇನ್ (65) ಸ್ಟೀವ್ ಸ್ಮಿತ್ (61) ಹಾಗೂ ಅಲೆಕ್ಸ್ ಕ್ಯಾರಿ (63) ಅರ್ಧಶತಕ ಬಾರಿಸಿದರು.

ಈ ಅರ್ಧಶತಕಗಳ ನೆರವಿನೊಂದಿಗೆ ಆಸ್ಟ್ರೇಲಿಯಾ ತಂಡವು ಎರಡನೇ ದಿನದಾಟದ ಅಂತ್ಯದ ವೇಳೆಗೆ ಕಲೆಹಾಕಿದ್ದು ಬರೋಬ್ಬರಿ 378 ರನ್‌ಗಳು. ಈ ಮೂಲಕ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ದಿನದಾಟವೊಂದರಲ್ಲಿ ಅತ್ಯಧಿಕ ರನ್‌ಗಳಿಸಿದ ವಿಶ್ವ ದಾಖಲೆ ನಿರ್ಮಿಸಿತು

ಇದಕ್ಕೂ ಮುನ್ನ ಈ ಭರ್ಜರಿ ದಾಖಲೆ ಇಂಗ್ಲೆಂಡ್ ತಂಡದ ಹೆಸರಿನಲ್ಲಿತ್ತು. 2017 ರಲ್ಲಿ ಎಡ್ಜ್‌ಬಾಸ್ಟನ್‌ನಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ಬರೋಬ್ಬರಿ 348 ರನ್‌ಗಳಿಸಿ ದಾಖಲೆ ನಿರ್ಮಿಸಿದ್ದರು.

ಇದೀಗ ಆಂಗ್ಲರ ವಿರುದ್ಧವೇ ಅಬ್ಬರಿಸುವ ಮೂಲಕ ಆಸ್ಟ್ರೇಲಿಯಾ ತಂಡ ಒಂದೇ ದಿನದಾಟದಲ್ಲಿ ಬರೋಬ್ಬರಿ 378 ರನ್ ಕಲೆಹಾಕಿದೆ. ಈ ಮೂಲಕ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ದಿನದಾಟವೊಂದರಲ್ಲಿ ಅತೀ ಹೆಚ್ಚು ರನ್ ಕಲೆಹಾಕಿದ ವಿಶ್ವ ದಾಖಲೆಯನ್ನು ಆಸ್ಟ್ರೇಲಿಯಾ ತಂಡ ನಿರ್ಮಿಸಿದೆ.

# ಭಾರತದ ವಿರುದ್ಧ ಭರ್ಜರಿ ಶತಕ ಸಿಡಿಸಿದ ಕ್ವಿಂಟನ್ ಡಿ ಕಾಕ್



ಟೀಂ ಇಂಡಿಯಾ ವಿರುದ್ಧದ ಮೊದಲೆರಡು ಏಕದಿನ ಪಂದ್ಯಗಳಲ್ಲಿ ಸಪ್ಪೆ ಪ್ರದರ್ಶನ ನೀಡಿದ್ದ ದಕ್ಷಿಣ ಆಫ್ರಿಕಾದ ಸ್ಟಾರ್ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಕ್ವಿಂಟನ್ ಡಿ ಕಾಕ್ ಇದೀಗ ಮೂರನೇ ಏಕದಿನದಲ್ಲಿ ಭರ್ಜರಿ ಶತಕ ಸಿಡಿಸಿದ್ದಾರೆ. ವಿಶಾಖಪಟ್ಟಣದಲ್ಲಿ ನಡೆದ ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ ಏಕದಿನ ಸರಣಿಯ ನಿರ್ಣಾಯಕ ಪಂದ್ಯದಲ್ಲಿ, ಡಿ ಕಾಕ್ ಕೇವಲ 80 ಎಸೆತಗಳಲ್ಲಿ ತಮ್ಮ ಶತಕ ಪೂರೈಸಿದರು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಮೊದಲ ಓವರ್‌ನಲ್ಲಿಯೇ ವಿಕೆಟ್ ಕಳೆದುಕೊಂಡಿತು. ಆದರೆ ಕ್ವಿಂಟನ್ ಡಿ ಕಾಕ್ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಅನ್ನು ಮುಂದುವರಿಸಿ, ಏಕದಿನ ಕ್ರಿಕೆಟ್‌ನಲ್ಲಿ ತಮ್ಮ 23 ನೇ ಶತಕವನ್ನು ಪೂರೈಸಿದರು. ಇದರೊಂದಿಗೆ, ಅವರು ಸೌರವ್ ಗಂಗೂಲಿ ಸೇರಿದಂತೆ ಮೂವರು ಲೆಜೆಂಡರಿ ಆಟಗಾರರನ್ನು ಹಿಂದಿಕ್ಕಿದರು. ಸುಮಾರು ಎರಡು ವರ್ಷಗಳ ಕಾಲ ಏಕದಿನ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ್ದ ಕ್ವಿಂಟನ್ ಡಿ ಕಾಕ್ ನವೆಂಬರ್‌ನಲ್ಲಿ ನಿವೃತ್ತಿಯಿಂದ ಹಿಂತಿರುಗಿ ಪಾಕಿಸ್ತಾನ ವಿರುದ್ಧದ ಸತತ ಮೂರು ಪಂದ್ಯಗಳಲ್ಲಿ ಒಂದು ಶತಕ ಮತ್ತು ಎರಡು ಅರ್ಧಶತಕಗಳನ್ನು ಬಾರಿಸಿದ್ದರು. ಆದಾಗ್ಯೂ, ಭಾರತದ ವಿರುದ್ಧದ ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಅವರ ಬ್ಯಾಟಿಂಗ್ ಪ್ರದರ್ಶನ ಕಳಪೆಯಾಗಿತ್ತು. ಮೊದಲೆರಡು ಪಂದ್ಯಗಳಲ್ಲಿ ಕೇವಲ ಎಂಟು ರನ್ ಗಳಿಸಿದ್ದ ಡಿ ಕಾಕ್, ಸರಣಿಯ ಕೊನೆಯ ಪಂದ್ಯದಲ್ಲಿ ತಮ್ಮ ಹಳೆಯ ಶೈಲಿಯನ್ನು ಪ್ರದರ್ಶಿಸಿ ಭಾರತೀಯ ಬೌಲರ್‌ಗಳ ಮೇಲೆ ಸವಾರಿ ಮಾಡಿದರು.

**23 ನೇ ಏಕದಿನ ಶತಕ:** ವಾಸ್ತವವಾಗಿ ಈ ಪಂದ್ಯದ 5ನೇ ಎಸೆತದಲ್ಲಿ ರಯಾನ್ ರಿಕಲ್ಟನ್ ವಿಕೆಟ್ ಪತನವಾಯಿತು. ಇದರ ಪರಿಣಾಮವಾಗಿ ದಕ್ಷಿಣ ಆಫ್ರಿಕಾ ತಂಡವು ಮೊದಲ ಮೂರು ಅಥವಾ ನಾಲ್ಕು ಓವರ್ ಗಳಲ್ಲಿ ಹೆಚ್ಚು ರನ್ ಗಳಿಸಲಿಲ್ಲ. ಆದರೆ ಎಡಗೈ ಬ್ಯಾಟ್ಸ್‌ಮನ್ ಡಿ ಕಾಕ್ ಬೌಂಡರಿಗಳನ್ನು ಹೊಡೆಯಲು ಪ್ರಾರಂಭಿಸಿದ ತಕ್ಷಣ, ತಂಡದ ಸ್ಕೋರ್ ಬೋರ್ಡ್ ಓಡಲಾರಂಭಿಸಿತು.

ಬೌಲರ್‌ಗಳ ಮೇಲೆ ಸವಾರಿ

ಅಲ್ಲದೆ ಕೇವಲ 42 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಡಿ ಕಾಕ್, ಅದರ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಮುಂದಿನ 50 ರನ್ ಗಳಿಸಲು ಕೇವಲ 38 ಎಸೆತಗಳನ್ನು ತೆಗೆದುಕೊಂಡರು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**